
ಐಕ್ಯರಂಗ


ಡಿವ ಜನರ ಪ್ರಾಣ ಮಿತ್ರ

ಸಂಪುಟ 25 ಸಂಚಿಕೆ 39


ಸೆಪ್ಟೆಂಬರ್ 28. 2003 ಬೆಲೆ ರೂ. 3.00




ರೈತರ ಆತ್ಮಹತ್ಯೆ ಮತ್ತು ಪರಿಹಾರ ಮಾರ್ಗಗಳು



ಮಹಾನಗರ ಪಾಲಿಕೆ ನರ ಕತ್ತರಿಸಿದ ಕೃಷ್ಣ




ನರೇಂದ್ರಮೋದಿಗೆ ಸುಪ್ರೀಂ ಕೋರ್ಟ್ ಛೀಮಾರಿ



ಅಡ್ವಾಣಿಯನ್ನು ನಿರ್ದೋಷಿಯಾಗಿಸಿದ ಸಿಬಿಐ

ಕ್ಯಾನ್‌ಕುನ್ - WTO: ಶ್ರೀಮಂತ ರಾಷ್ಟ್ರಗಳಿಗೆ ಪ್ರತಿರೋಧ

ವಿಮೋಚನಾ ಸಮರದಲ್ಲಿ....



ಮೇಜರ್ ಜಯಪಾಲ್ ಸಿಂಗ್

ಆತ್ಮಕಥನ

45



ಕಳೆದ ಸಂಚಿಕೆಯಲ್ಲಿ ತಮ್ಮ ಆತ್ಮೀಯರ ಶವಗಳ ನಡುವೆ ಕುಳಿತು ಸಂತಾಪ ಪಡುತ್ತಿದ್ದ ವೀರಯೋಧರು, ದುಡಿಯುವ ವರ್ಗದ ವಿಜ್ಞಾನದ ಛಾಪು ಹೊಂದಿದ ಕರೆ ಸಿಗ್ನಲ್, ಒಂದೇಸಮನೇ 30 ಮೈಲಿ ನಡೆದ ದಣಿವನ್ನು ಒಂದೇ ನಿಮಿಷದಲ್ಲಿ ಮರೆತ ಅನುಭವ, ನರಭಕ್ಷಕ ಹಲ್ಲುಗಳುಳ್ಳವರು ಹಾಗೂ ನರಮಾಂಸ ಪ್ರಿಯರೆಂದು ನೆಹರೂ ಆಡಳಿತ ವರ್ಣಿಸಿದ್ದ 'ಭಯೋತ್ಪಾದಕರು' ಕೃಷಿಕರ ಮತ್ತು ಕೃಷಿಕಾರ್ಮಿಕರ ಮಕ್ಕಳಾಗಿದ್ದದ್ದು ಮತ್ತು ತಾನು ಗೆರಿಲ್ಲಾ ಹೋರಾಟಗಾರನಾಗಬೇಕೆಂದು ಒತ್ತಾಯಿಸಿದ ಹದಿನಾಲ್ಕು ವರ್ಷದ ಬಾಲಕನ ಬಗ್ಗೆ ಓದಿರುವಿರಿ. ಮುಂದೆ...

ಕನ್ನಡಕ್ಕೆ: ವಿಶ್ವ ಕುಂದಾಪುರ

ಕಮ್ಯುನಿಸ್ಟ್‌ನ ಹೆಂಡತಿಗೆ ಘೋರ ಶಿಕ್ಷೆ

ವಯಸ್ಸಿನಲ್ಲಿ ತನಗಿಂತ ದೊಡ್ಡವರಾದ ತಂಡ ನಾಯಕರನ್ನು ಕುಂದನ್ ಒಟ್ಟುಗೂಡಿಸುತ್ತಿದ್ದ, ದಿನನಿತ್ಯದ ಕೆಲಸ ಕಾರ್ಯಗಳನ್ನು ವಹಿಸಿಕೊಡುತ್ತಿದ್ದ. ಅವರು ಕೂಡ ಹೇಳಿದ್ದನ್ನು ಗೌರವದಿಂದ ಕೇಳಿಸಿಕೊಳ್ಳುತ್ತಿದ್ದರು ಹಾಗೂ ಹಿಂದು ಮುಂದೆ ನೋಡದೇ ಪಾಲಿಸುತ್ತಿದ್ದರು.

ಏನು ಇವೆಲ್ಲ? ಈ ಪ್ರಕ್ರಿಯೆಯಲ್ಲಿ ಏನು ವೈಶಿಷ್ಟ್ಯವಿದೆ? ಏನು ಮಹತ್ವವಿದೆ?

ಸಣ್ಣ ಪ್ರಾಯದಲ್ಲಿ ತಲೆಕೆಳಗೆ ಮಾಡಿ ಹೇಳಿದ್ದನ್ನು ಕೇಳುವ, ಕೆಲಸಕ್ಕೆ ಬಾರದ ಕಾಡು ಹರಟೆಯಲ್ಲಿ ತೊಡಗಿದ, ಅದರ ಜತೆ ಕನಸು ಕಾಣುವ, ವಿವೇಕವನ್ನು ಬದಿಗೊತ್ತುವ ಹಾಗೂ ಹಿರಿಯರಿಗೆ ಗೌರವ ಕೊಡುವ ಕಾಲಕಾಲಾಂತರದ ರೈತ ಪರಂಪರೆಯನ್ನು ಸೂಕ್ತವಾಗಿ ಕೈಬಿಟ್ಟ ಪ್ರಕ್ರಿಯೆ ಇದಾಗಿದೆ.

ದುಡಿಯುವ ವರ್ಗದ ಪಕ್ಷದ ತೆಲಂಗಾಣದ ಗ್ರಾಮಾಂತರ ಪ್ರದೇಶದಲ್ಲಿ ನಿಸ್ಸಂಶಯವಾಗಿಯೂ ಸಶಸ್ತ್ರ ಹೋರಾಟದ ಕಿಡಿಯನ್ನು ಹೊತ್ತಿಸಿದೆ ಎಂದು ಈ ಮೊದಲೇ ಹೇಳಿರುವೆ. ಪಾಳೇಗಾರಿ ಕೋಟೆಗಳನ್ನು ನಾಶಪಡಿಸುವುದರ ಮೂಲಕ ಜೀವನದ ಪಾಳೇಗಾರಿ ಪರಿಕಲ್ಪನೆಗಳು ಕೂಡ ಯಶಸ್ವಿಯಾಗಿ ಖಂಡನೆಗೊಳಗಾಗಿ ನಾಶವಾಗುತ್ತಿವೆ.

ಈ ಪೋರ ಹಾಗೂ ಆತನ ಇತರ ಸಂಗಾತಿಗಳನ್ನು ನೊಡಿದಾಗ, ಆಧುನಿಕವಲ್ಲದ ಶಸ್ತ್ರಾಸ್ತ್ರಗಳಿಂದ ಸಜ್ಜಿತರಾದ ಈ ಕೆಲವೇ ಕೆಲವು ಯುವಕರು ಎಗ್ಗಿಲ್ಲದ ದುಷ್ಕರ್ಮಿಗಳಂತೆ ವರ್ತಿಸುವ ಶತ್ರುಗಳನ್ನು ಎದುರಿಸಿಯಾರೆ ಎಂದು ನಂಬುವುದು ಕಷ್ಟವಾಯಿತು. ಹತ್ತಿರದಲ್ಲೇ ಮೂರು ಸಾವಿರ ಶತ್ರು ಸೈನಿಕರು ಬೀಡುಬಿಟ್ಟಿದ್ದಾರೆ. ಅಂಥವರ ಎದುರು ಮೂರು ಹಳೆಯ ರೈಫಲ್‌ಗಳು, ಮೂರು ಶಾಟ್‌ಗನ್‌ಗಳು ಹಾಗೂ ಮೂರು ನಾಡಬಂದೂಕುಗಳ ನೆರವಿನಿಂದ, ಇಂಚಿಂಚು ನೆಲವೂ ವೈರಿಪಡೆಗಳಿಂದ ತುಂಬಿರುವ ಪ್ರದೇಶದ ನೆರವಿನಿಂದ ಮಿಲಿಟರಿ ನೆಲೆಯಲ್ಲೂ ಮಾನವ ನೆಲೆಯಲ್ಲೂ ಒಂದು ದಿನವೂ 'ದರೋಡೆಕೋರ'ರಾಗಿ ಕಳೆಯಲು ಸಾಧ್ಯವಿಲ್ಲ. ಮುಳ್ಳುಕಂಟೆಗಳ ಪೊದೆಯ ಹಿಂದೆಯಾಗಲಿ, ಗುಪ್ತ ಗುಹೆಯಲ್ಲಾಗಲೀ ಇರಲಾಗದು. ಸುತ್ತಲೂ ಶತ್ರುಗಳು ಸುತ್ತುವರಿದು ಬೇಟೆಯಾಡಲು ಹಪಹಪಿಸುತ್ತಿರುವಾಗ ಕ್ರಾಂತಿಕಾರಿಗಳಿಗಷ್ಟೆ ಈ ರೀತಿ ಇರಲು ಸಾಧ್ಯವಾಗುವುದು.

ಕಮ್ಯುನಿಸ್ಟರ ಬಂಧುಗಳಿಗೆ ಹಿಂಸೆ

ಈ ಪುಟ್ಟ ಹುಡುಗರನ್ನು ಮೊದಲ ಬಾರಿಗೆ ನೋಡಿದಾಗಲೇ ಈ ಆರೋಪಗಳು ಅಸಂಬದ್ಧ, ಆಘಾತಕಾರಿ ಸುಳ್ಳುಗಳು ಎಂದು ನನಗೆ ಮನವರಿಕೆಯಾಯಿತು. ಸದಾ ಶತ್ರುಗಳಿಂದ ಅಟ್ಟಿಸಿಕೊಂಡು ಬರುತ್ತಲೇ ಇರುವ, ಪ್ರತಿದಾಳಿಗಾಗಿ ಹಠಾತ್ತನೆ ನಿಲ್ಲುವ ಅಕಾಲಿಕವಾಗಿ 'ವಯಸ್ಕ'ರಾದ ಈ ದಿಟ್ಟ ಯುವಜನರು ತಮಗಿಂತ ನೂರುಪಟ್ಟು ಉತ್ತಮವಾದ ವೈರಿಪಡೆಯನ್ನು ಪ್ರತಿರೋಧಿಸಬಲ್ಲವರಾಗಿದ್ದರು.

ಅವರು ಪೊದೆಯ ಹಿಂದೆ ಅಡಗಿ ಕುಳಿತು ಎಲೆಗಳನ್ನು, ಮುಗ್ಧ ಜನರ ಮಾಂಸವನ್ನು ತಿನ್ನುತ್ತಿರಲಿಲ್ಲ; ಹಾಗೆಂದು ನೆಹರೂ ಆಡಳಿತ ಸತತ ಅಪಪ್ರಚಾರ ನಡೆಸಿತ್ತು. ಅವರು ಪ್ರತಿದಿನವೂ ಕಲ್ಲುಮುಳ್ಳುಗಳಿಂದ ಕೂಡಿದ ಕಾಡುದಾರಿಗಳಲ್ಲಿ, ಬೆಟ್ಟಗುಡ್ಡಗಳಲ್ಲಿ 20 ರಿಂದ 30 ಮೈಲು ದೂರ ನಡೆದು ತಮ್ಮ ಜನರನ್ನು ಸಂಪರ್ಕಿಸುತ್ತಿದ್ದರು; ಗುಂಪು ಸಭೆಗಳನ್ನು ನಡೆಸುತ್ತಿದ್ದರು. ಚಂದಾ ಮತ್ತು ನಿಧಿಗಳನ್ನು ಸಂಗ್ರಹಿಸುತಿತಿದ್ದರು... ಕಾವಲಿಲ್ಲದ ಹಾಗೂ ದುರ್ಬಲ ಕೇಂದ್ರಗಳಲ್ಲಿ ವೈರಿಗಳ ಮೇಲೆ ಆಕ್ರಮಣ ಮಾಡುತ್ತಿದ್ದರು. ಹಾಗೆ ಮಾಡಿ ಮತ್ತೆ ಭೂಗತರಾಗುತ್ತಿದ್ದರು.

ತಮ್ಮ ಜನರು ಬೆಳೆವ ಅತ್ಯುತ್ತಮ ಅಕ್ಕಿಯನ್ನು, ಅನ್ನವನ್ನು ಅವರು ತಿನ್ನುತ್ತಿದ್ದರೆ ಹೊರತು ಮಾನವ ಮಾಂಸವನ್ನಲ್ಲ. ಜನರೇ ಇವರಿಗೆ ಸ್ವಯಂ ಸ್ಫೂರ್ತಿಯಿಂದ ಆಹಾರ ಒದಗಿಸುತ್ತಿದ್ದರು. ಗೆರಿಲ್ಲಾಗಳಿಗೆ ಆಹಾರಧಾನ್ಯ ಕೊಟ್ಟವರಿಗೆ

> **ಅವರು ನನ್ನ ಹೆಂಡತಿಯನ್ನು ಮತ್ತು ಮೂರು ವರ್ಷದ ಮಗುವನ್ನು ಬಂಧಿಸಿದರು. ಅವರು ಆಕೆಯ ತಲೆಯನ್ನು ಬೋಳಿಸಿದರು. ಮುಖಕ್ಕೆ ಕಪ್ಪು ಬಳಿದು ಹಳ್ಳಿಯ ಬೀದಿಗಳಲ್ಲಿ ಮೆರವಣಿಗೆ ಮಾಡಿಸುತ್ತಾ ಆಕೆ ವೇಶ್ಯೆ ಎಂದು ಹೇಳುತ್ತಿದ್ದಾರೆ. ಯಾಕೆಂದರೆ ಅವಳು ಒಬ್ಬ ಕಮ್ಯುನಿಸ್ಟನ ಪತ್ನಿ. ನಾನು ಎಲ್ಲಿದ್ದೇನೆಂಬುದನ್ನು ತಿಳಿಸದಿದ್ದರೆ ಮಗುವನ್ನು ಕೊಲ್ಲುವುದಾಗಿ ಅವರು ಹೆದರಿಸುತ್ತಿದ್ದಾರೆ. ತಾಯಿಯೊಬ್ಬಳಿಗೆ ನಿಷ್ಠೆಯಿಲ್ಲದ ಪತ್ನಿಯಾಗಲು ಹೇಳಿದಂತೆ ಇದು. ಹಾಗೆ ಆಗಲು ಆಕೆ ಒಪ್ಪಲಿಲ್ಲ.**

ಮರಣದಂಡನೆಯನ್ನೂ ವಿಧಿಸಲಾಗುತ್ತಿತ್ತು. ಆಹಾರ ಮತ್ತು ಹಣವನ್ನು ಕೊಡುವಂತೆ ಗೆರಿಲ್ಲಾಗಳು ಜನರನ್ನು ಬಲವಂತ ಮಾಡುತ್ತಿದ್ದಾರೆ ಎಂದು ನೆಹರೂ ಆಡಳಿತ ಬೊಗಳುತ್ತಿತ್ತು. ಹಾಗೆ ಮಾಡುವ ಅಗತ್ಯವೇ ಇರಲಿಲ್ಲ. ಯಾಕೆಂದರೆ ಅವರು ಸುತ್ತಮುತ್ತಲಿನ ಜನರ ಮಕ್ಕಳೇ ಆಗಿದ್ದರು. ತಮ್ಮ ಮಕ್ಕಳು ಹೋರಾಟಾವನ್ನು ಜೀವಂತವಾಗಿಡಲೆಂದು ಈ ಜನರು ತಮ್ಮ ಪ್ರಾಣವನ್ನೇ ಕೊಡಲು ಹಿಂಜರಿಯಲಿಲ್ಲ. ತೆಲಂಗಾಣದ ಗ್ರಾಮೀಣ ಪ್ರದೇಶಗಳಲ್ಲಿ ಅಮಾನವೀಯ ಫ್ಯಾಸಿಸ್ಟ್ ದಬ್ಬಾಳಿಕೆ ನಡೆಸುತ್ತಿದ್ದ ಶತ್ರುಗಳನ್ನು ಪ್ರತಿರೋಧಿಸುವಲ್ಲಿ ಗೆರಿಲ್ಲಾಗಳಿಗೆ ಜನರ ಈ ತ್ಯಾಗವೇ ಬಹುದೊಡ್ಡ ನೆರವಾಯಿತು. ಗೆರಿಲ್ಲಾಗಳ ಪ್ರತಿರೋಧ ಶಕ್ತಿಯ ಗುಟ್ಟು ಇದೇ ಆಗಿದೆ. ಅಲ್ಲಿನ ದೌರ್ಜನ್ಯಕ್ಕೆ ಫ್ಯಾಸಿಸ್ಟಿಕ್ ಎನ್ನದೆ ಬೇರೆ ದಾರಿಯೇ ಇಲ್ಲ. ಆ ಬಗ್ಗೆ ನಂತರ ಹೇಳುತ್ತೇನೆ.

ಕಮ್ಯುನಿಸ್ಟ್‌ನ ಹೆಂಡತಿಗೆ ಘೋರ ಶಿಕ್ಷೆ

ನೆಹರೂ ಆಡಳಿತ ಮತ್ತು ಬಾಡಿಗೆ ಬಂಟ ಪತ್ರಿಕೆಗಳು ನಮ್ಮನ್ನು 'ಭಯೋತ್ಪಾದಕರು', 'ಡಕಾಯಿತರು' ಮತ್ತು 'ದುಷ್ಕರ್ಮಿಗಳು' ಎಂದು ಬಿಂಬಿಸುತ್ತಿವೆ ಎಂದು ಎತ್ತರದ, 35 ವರ್ಷ ಪ್ರಾಯದ ಗೆರಿಲ್ಲಾ ಹೇಳಿದ.

"ಹೌದು, ನಮಗೆ ಗೊತ್ತು, ಯಾರು ಏನೆಂಬುದನ್ನು ನೀವು ನಿರ್ಧರಿಸಿ, ಅವರು ನನ್ನ ಹೆಂಡತಿಯನ್ನು ಮತ್ತು ಮೂರು ವರ್ಷದ ಮಗುವನ್ನು ಬಂಧಿಸಿದರು. ಅವರು ಆಕೆಯ ತಲೆಯನ್ನು ಬೋಳಿಸಿದರು. ಮುಖಕ್ಕೆ ಕಪ್ಪು ಬಳಿದು ಹಳ್ಳಿಯ ಬೀದಿಗಳಲ್ಲಿ ಮೆರವಣಿಗೆ ಮಾಡಿಸುತ್ತಾ ಆಕೆ ವೇಶ್ಯೆ ಎಂದು ಹೇಳುತ್ತಿದ್ದಾರೆ. ಯಾಕೆಂದರೆ ಅವಳು ಒಬ್ಬ ಕಮ್ಯುನಿಸ್ಟನ ಪತ್ನಿ. ನಾನು ಎಲ್ಲಿದ್ದೇನೆಂಬುದನ್ನು ತಿಳಿಸದಿದ್ದರೆ ಮಗುವನ್ನು ಕೊಲ್ಲುವುದಾಗಿ ಅವರು ಹೆದರಿಸುತ್ತಿದ್ದಾರೆ. ತಾಯಿಯೊಬ್ಬಳಿಗೆ ನಿಷ್ಠೆಯಿಲ್ಲದ ಪತ್ನಿಯಾಗಲು ಹೇಳಿದಂತೆ ಇದು. ಹಾಗೆ ಆಗಲು ಆಕೆ ಒಪ್ಪಲಿಲ್ಲ. ಅದುವೇ ಅವಳ ಅಪರಾಧ" - ಆ ಗೆರಿಲ್ಲಾ ತನ್ನ ಪತ್ನಿ, ಮಗು ಅನುಭವಿಸುತ್ತಿರುವ ವೇದನೆಯನ್ನು ವಿವರಿಸಿದ.

"ಯಾರು ಏನೆಂಬುದನ್ನು ನೀವೇ ಹೇಳಿ" ಎಂದು ನುಡಿದ.

ಕಣ್ಣುಗಳಲ್ಲಿನ ಕಾಂತಿ ಕಳೆದುಕೊಳ್ಳದ ಆತ ಹೀಗೆಂದು ಮುಂದುವರಿಸಿದ.

" ತನ್ನ ಗಂಡನ ಸಾವಿಗೆ ಹಾದಿ ಮಾಡಿಕೊಟ್ಟು ತನ್ನ ಮಗುವನ್ನು ರಕ್ಷಿಸಿಕೊಳ್ಳುವ ಸ್ಥಿತಿಗೆ ತಾಯಿಯೊಬ್ಬಳನ್ನು ಈ ಆಡಳಿತದಲ್ಲಿ ಬಲವಂತಪಡಿಸಲಾಗುತ್ತಿದೆ. ಈ ಆಡಳಿತದಲ್ಲಿ ಮಹಿಳೆಯೊಬ್ಬರ ತಲೆ ಬೋಳಿಸಿ ಅವಮಾನಪಡಿಸಲಾಗುತ್ತದೆ. ಇದನ್ನು ನೀವು ಏನೆಂದು ಕರೆಯುತ್ತೀರಿ?"

'ಇಷ್ಟು ಮಾತ್ರವೇ ಅಲ್ಲ; ಈ ಸಂಗಾತಿಯನ್ನು ನೋಡಿ' ಎಂದು ಸಂಗಾತಿಯೊಬ್ಬರನ್ನು ತೋರಿಸಿದ ಆ ಗೆರಿಲ್ಲಾ "ಈತನ ಸೋದರನನ್ನು ಹಿಡಿದು ಹಿಂಸಿಸಿ ಜೀವಂತವಾಗಿ ಸುಟ್ಟುಹಾಕಿದರು. ಯಾಕೆ? ಯಾಕೆಂದರೆ ಅವನು ಈತನ ಸೋದರ, ಒಬ್ಬ ಕಮ್ಯುನಿಸ್ಟನ ಸೋದರ. ನೀವು ಕೇಳುತ್ತಾ ಇದ್ದೀರಲ್ಲವೆ? ಹೇಳಿ; ಯಾರು ಏನೆಂದು ಈಗ ಹೇಳಿ".

ಹಿಂಸೆಯ ಪರಿ

"ಪೋಲೀಸರು ನಮ್ಮ ಸೋದರಿಯರು ಮತ್ತು ಪತ್ನಿಯರ ಮೇಲೆ ಅತ್ಯಾಚಾರ ನಡೆಯುತ್ತಿರುವಾಗ, ಬಿಸಿ ಪಿನ್‌ಗಳನ್ನು ಅವರ ಮರ್ಮಾಂಗಕ್ಕೆ ತುರುಕಿಸಿ ಹಿಂಸೆ ಕೊಡುತ್ತಿರುವಾಗ, ನಮ್ಮ ಬಂಧುಗಳೆಂಬ ಕಾರಣಕ್ಕಷ್ಟೇ ನಮ್ಮ ಜನರನ್ನು ಕೊಂದು ಹಾಕುತ್ತಿರುವಾಗ, ನಮ್ಮ ಗುಡಿಸಲುಗಳನ್ನು ಬೂದಿ ಮಾಡಿ ಲೂಟಿ ಮಾಡುತ್ತಿರುವಾಗ ನಾವು ಸುಮ್ಮನೆ ಕೈಕಟ್ಟಿಕೊಂಡು ನಿರ್ಲಿಪ್ತವಾಗಿ ಕುಳಿತುಕೊಳ್ಳಬೇಕು ಎಂದು ನೆಹರೂ ಆಡಳಿತ ನಿರೀಕ್ಷಿಸಬಾರದು" - ಆ ತರುಣ ಗೆರಿಲ್ಲಾ ಹೇಳುತ್ತಲೇ ಇದ್ದ.

"ಇವು ಕೆಲವೇ ಕೆಲವು ಉದಾಹರಣೆಗಳಷ್ಟೆ. ಈಗ ನೀವೇ ಹೇಳಿ, ಯಾರು ಏನೆಂದು? ಯಾರು ಎಂಥವರೆಂದು?"

ವೈರಿಗಾಯಕ್ಕೆ ಚಿಕಿತ್ಸೆ

"ನಾವು ಕೂಡ ಪೊಲೀಸ್ ಕಾನ್‌ಸ್ಟೆಬಲ್‌ಗಳು ಮತ್ತು ಸೇನೆಯ ಸೈನಿಕರನ್ನು ಹಿಡಿದಿದ್ದೇವೆ. ನಾವು ಅವರ ಮೈ ಮುಟ್ಟಿದ ಒಂದೇ ಒಂದು ಪ್ರಕರಣವನ್ನು ಯಾರಾದರೂ ತೋರಿಸುತ್ತೀರಾ? ನಾವು ಯಾವಾಗಲೂ ಅವರನ್ನು ಬಿಟ್ಟುಬಿಟ್ಟಿದ್ದೇವೆ. ಕೆಲವೇ ನಿಮಿಷಗಳ ಹಿಂದೆ ಯಾರ ಗುಂಡುಗಳು ನಮ್ಮ ಸಂಗಾತಿಗಳ ಪ್ರಾಣಹರಣ ಮಾಡಿದ್ದವೋ ಆ ಸವ ... ವೈರಿಯ ಗಾಯಕ್ಕೆ ನಾವು ಚಿಕಿತ್ಸೆ ಮಾಡಿದ್ದೇವೆ.

ಅತ್ಯಂತ ಕ್ರಿಮಿನಲ್ ಭೂಮಾಲೀಕರ ... ಕುಟುಂಬಗಳ ಹೆಂಗಸರ ಕಡೆ ನಾವು ಬೆರಳೆತ್ತಿಯೂ ... ಇಲ್ಲ, ನಮ್ಮ ಶತ್ರುಗಳ ಆಸ್ತಿಪಾಸ್ತಿಯನ್ನು ನಾ... ಮುಟ್ಟುಗೋಲು ಹಾಕಿಕೊಳ್ಳುತ್ತೇವೆನ್ನುವುದು ಸತ್ಯ ... ಜನರು ಬಯಸಿದರೆ ಅಂಥವರಲ್ಲಿ ಕೆಲವರಿ... ಸಾವಿನ ಶಿಕ್ಷೆ ನೀಡುತ್ತೇವೆ. ದಯೆ ದಾಕ್ಷಿಣ್ಯವಿಲ್ಲ... ಫ್ಯಾಸಿಸ್ಟ್ ತನ್ನ ಖಡ್ಗವನ್ನು ನಮ್ಮ ನೆತ್ತಿಯ ಮೇ... ತೂಗುತ್ತಿರುವಾಗ, ನಮ್ಮ ಜನತೆಯನ್ನು ನಾ... ಮಾಡುತ್ತಿರುವಾಗ, ಜೀವನದಲ್ಲಿ ನಮ್ಮ ಹಸಿವ... ಶಾಶ್ವತಗೊಳಿಸುತ್ತಿರುವಾಗ ನಾವು ಇನ್ನೇನು ಶಾ... ಮಾಡಲು ಸಾಧ್ಯ? ನೀವು ನಮ್ಮಿಂದ ಏನ... ನಿರೀಕ್ಷಿಸುತ್ತೀರಿ?" - ಎಂದಾತ ಪ್ರಶ್ನಿಸಿದ.


(ಮುಂದುವರಿಯುವುದು)

ಇಂದಿಗಾಗಿ ನಾಳಿನ ಕಾರ್ಯಕ್ರಮಗಳು

- **ಸೆಪ್ಟೆಂಬರ್ 20 ರಿಂದ 26, 2003**
  ಶಾಂತಿ, ಐಕ್ಯತೆ ಮತ್ತು ದೇಶದ... ಸಾರ್ವಭೌಮತೆಗಾಗಿ ರಾಷ್ಟ್ರಮಟ್ಟದ... ಕಲಾಜಾಥಾ. ಕಾಸರಗೋಡಿನಿಂದ... ಮಂಗಳೂರು ಪ್ರವೇಶ - (20/9), ಹಾಸನ... ಮಂಡ್ಯ, ಬೆಂಗಳೂರು, ತುಮಕೂರು... ಮಾರ್ಗವಾಗಿ ಗೋಕಾಕ್‌ಗೆ - ಅಲ್ಲಿಂದ... ಮಹಾರಾಷ್ಟ್ರಕ್ಕೆ (26/9)
- **ಸೆಪ್ಟೆಂಬರ್ 23,24-2003**
  ವಿಚಾರ ಸಂಕಿರಣ
  ಕರ್ನಾಟಕ ಚರಿತ್ರೆಯ ಮೇಲಿನ ಇತ್ತೀಚಿನ... ಬೆಳವಣಿಗೆಗಳು
  ಕನ್ನಡ ಸಾಹಿತ್ಯಾ ಪರಿಷತ್ತು - ಪಂಪ... ಸಭಾಂಗಣ, ಬೆಳಿಗ್ಗೆ 10 ಕ್ಕೆ
  ಅಧ್ಯಕ್ಷತೆ: ಹೆಚ್.ಜೆ.ಲಕ್ಕಪ್ಪಗೌಡ
  ಉದ್ಘಾಟನೆ: ಪ್ರೊ. ಎಸ್.ಶೆಟ್ಟರ್, ಖ್ಯಾತ ಚರಿತ್ರಾಕಾರರು
- **ಸೆಪ್ಟೆಂಬರ್ 23, 2003**
  ವಿದ್ಯಾರ್ಥಿಗಳ ಸಮಸ್ಯೆ, ರೈತ... ಆತ್ಮಹತ್ಯೆ-ಪರಿಹಾರಕ್ಕೆ ಆಗ್ರಹಿ... ಎಸ್‌ಎಫ್‌ಐ ಪ್ರತಿಭಟನೆ. ಬೆಂಗಳೂರು... ಜಿಲ್ಲಾಧಿಕಾರಿ ಕಛೇರಿ ಎದುರು. ಮಧ್ಯಾಹ್ನ... 12 ಗಂಟೆಗೆ
- **ಸೆಪ್ಟೆಂಬರ್ 25, 2003**
  ದಕ್ಷಿಣ ಕನ್ನಡ ಜಿಲ್ಲಾ ಸಿಐಟಿಯು ಸಮ್ಮೇಳ... ಬೋಳೂರು, ಮಂಗಳೂರು
- **ಸೆಪ್ಟೆಂಬರ್ 27,28, 2003**
  ಬೆಂಗಳೂರು ಜಿಲ್ಲಾ ಸಿಐಟಿಯು ಸಮ್ಮೇಳ... ಅರಸೋಜಿ ರಾವ್ ಛತ್ರ ಮಿನರ್ವ ಸರ್ಕಲ್ ಬಳಿ ಬೆಂಗಳೂರು.
- **ಸೆಪ್ಟೆಂಬರ್ 30, 2003**
  ಅರಣ್ಯ ಅತಿಕ್ರಮಣ ಸಕ್ರಮಕ್ಕೆ ಒತ್ತಾಯಿ... ಜಿಲ್ಲಾಧಿಕಾರಿ ಕಛೇರಿ ಮುತ್ತಿಗೆ -ಕಾರವಾ... ಸಂಘಟಕರು - ಕರ್ನಾಟಕ ಪ್ರಾಂತ ... ಸಂಘ - ಉ.ಕ. ಜಿಲ್ಲಾ ಸಮಿತಿ
- **ಅಕ್ಟೋಬರ್ 1,2- 2003**
  ಬಳ್ಳಾರಿ ಜಿಲ್ಲಾ ಸಿಐಟಿಯು ಸಮ್ಮೇಳ... ಹೊಸಪೇಟೆ
- **ಅಕ್ಟೋಬರ್6, 2003**
  ಉತ್ತರ ಕನ್ನಡ ಜಿಲ್ಲಾ ಸಿಐಟಿಯು... ಸಮ್ಮೇಳನ, ದಾಂಡೇಲಿ
- **ಅಕ್ಟೋಬರ್ 6,7 2003**
  ಸಿಐಟಿಯು ಗಂಗಾವತಿ ತಾಲೂ... ಸಮ್ಮೇಳನ, ಗಂಗಾವತಿ

ಬೆಂಗಳೂರು ಮಹಾನಗರ ಪಾಲಿಕೆ ನರ ಕತ್ತರಿಸುತ್ತಿರುವ ಕೃಷ್ಣ


ಮಹಾನಗರ ಪಾಲಿಕೆ, ಪುರಸಭೆ, ನಗರ ಭೆಗಳಂತಹ ಚುನಾಯಿತ ಸಂಸ್ಥೆಗಳು ಆರೋಗ್ಯ, ರ್ಮಲ್ಯ ಮುಂತಾದ ನಾಗರಿಕ ಸೌಲಭ್ಯಗಳನ್ನು ದಗಿಸುವ, ಸಂಪನ್ಮೂಲ ಕ್ರೋಢೀಕರಿಸಿ ಜನರ ತಕಾಯುವ ಹೊಣೆಯಿರುವಂತಹವು. ಈ ಳೀಯ ಸಂಸ್ಥೆಗಳು ಒಂದರ್ಥದಲ್ಲಿ ಸ್ಥಳೀಯ



ರ್ಕಾರಗಳು. ಅಧಿಕಾರಗಳು ಈ ವ್ಯಾಪ್ತಿಯಲ್ಲಿ ರವೋಚ್ಚವಾದವು. ಇಂತಹ ಸಂಸ್ಥೆಗಳ ್ಯಾಪ್ತಿಯಲ್ಲಿ ಭೂಪ್ರಶ್ನೆ, ಪೋಲೀಸ್ ವ್ಯವಸ್ಥೆ ಯಂತ್ರಣದಂತಹ ಗಹನ ಪ್ರಮುಖ ಪ್ರಶ್ನೆಗಳನ್ನು ್ಯರ್ಥಗೊಳಿಸುವ ಪದ್ಧತಿ ಹಲವು ದೇಶಗಳಲ್ಲಿದೆ.

ಆದರೆ ನಮ್ಮ ಈ ಸ್ಥಳೀಯ ಸಂಸ್ಥೆಗಳ ಸ್ಥಿತಿ ರುನಿಸಿದರೆ ಇವುಗಳ ಸ್ಥಿತಿ ಶೋಚನೀಯ. ವುಗಳನ್ನು 'ಕಸದ ತೊಟ್ಟಿಗಳು' ಎಂಬಂತೆ ಾಡಿಸಲಾಗಿದೆ. ದತ್ತವಾದ ಹಲವಾರು ಿಕಾರಗಳು ಮರೆಯಾಗಿವೆ. ಮೊಟಕು ಗೊಳಿಸಲಾಗಿದೆ. ಬೆಂಗಳೂರಿನಂತಹ ಮಹಾನಗರ ಪಾಲಿಕೆ ಮೇಯರ್ ಕಾಣಸಿಕೊಳ್ಳೋದು ವಿದೇಶಿ ಅತಿಥಿಗಳು ಬಂದಾಗ ಸ್ವಾಗತಿಸುವ ಫೋಟೋಗಳಲ್ಲಿಯೇ. ಅದಿರಲಿ, ಕಳೆದೊಂದು ತಿಂಗಳಿನಿಂದಲೂ ಬೆಂಗಳೂರು ಮಹಾನಗರ ಪಾಲಿಕೆಯ ಚುನಾಯಿತ ಪ್ರತಿನಿಧಿಗಳಿಗೂ, ರಾಜ್ಯ ಸರ್ಕಾರಕ್ಕೂ ಸಂಘರ್ಷ ನಡೆದಿದೆ. ನಾಗರಿಕ ಸೌಲಭ್ಯಗಳನ್ನು ಒದಗಿಸಲು ರಚಿಸಲಾಗಿರುವ ಹಲವಾರು 'ಸ್ಥಾಯಿ' ಸಮಿತಿಗಳನ್ನು ರದ್ದುಪಡಿಸಲು ಕೃಷ್ಣರವರ ಸಂಪುಟ ನಿರ್ಧರಿಸಿದೆ. ಮುಖ್ಯವಾಗಿ ಸಾರ್ವಜನಿಕ ಕಾಮಗಾರಿ ಮತ್ತು ಅಪೀಲ್ ಸಮಿತಿಗಳನ್ನು. ಮುಂದೆ ಹಲವು ಇರಬಹುದು. ಇದಕ್ಕೆ ನೀಡುವ ಕಾರಣ ಈ ಸಂಸ್ಥೆಗಳಲ್ಲಿ ವ್ಯಾಪಕ ಭ್ರಷ್ಟಾಚಾರವಿದೆ ಎಂಬುದು. ನಿಜ, ಈ ಸಂಸ್ಥೆಗಳೂ ಸೇರಿ ಇಡೀ ಮಹಾನಗರ ಪಾಲಿಕೆಯ ಅಂಗಅಂಗಗಳಲ್ಲಿ ಭ್ರಷ್ಟಾಚಾರ ತಾಂಡವವಾಡುತ್ತಿದೆ. ಅಷ್ಟೇಕೆ ಕೃಷ್ಣರ ತೀರ ಹಿಡಿತವಿರುವ ಇಲಾಖೆಗಳು, ಪ್ರಧಾನ ಮಂತ್ರಿಗಳ ಖಾತೆಗಳಲ್ಲಿಯೂ ಇದೆ. ಅವುಗಳನ್ನೇ ರದ್ದುಪಡಿಸಲಾದೀತೆ ಎಂಬುದು ಪ್ರಶ್ನೆ.

ಇಲ್ಲಿ ಉದ್ಭವವಾಗುವ ಪ್ರಶ್ನೆ ಭ್ರಷ್ಟಾಚಾರವಿದ್ದಲ್ಲಿ ಅದನ್ನು ತಡೆಯಲು ಕಠಿಣ ಕ್ರಮಗಳನ್ನು ವಹಿಸಲಿ. ಅಂತಹ ಪ್ರಕರಣಗಳ ಬಗ್ಗೆ ಆಳವಾದ ತನಿಖೆ ನಡೆದು ತಪ್ಪಿತಸ್ಥರನ್ನು ಶಿಕ್ಷಿಸಲಿ. ಹೀಗೆ ಮಾಡುವುದರಿಂದ ದಕ್ಷತೆ ಮತ್ತು ಸಂಸ್ಥೆಗಳಿಗೆ ಬಲ ಹೆಚ್ಚುತ್ತದೆ. ನಾಗರಿಕರಲ್ಲಿಯೂ ವಿಶ್ವಾಸ ಹುಟ್ಟುತ್ತದೆ. ಆದರೆ ಅದರ ಬದಲು ಪ್ರಜಾಸತ್ತಾತ್ಮಕ ಸಂಸ್ಥೆಗಳನ್ನೇ ಅದರ ಹಕ್ಕು-ಅವಕಾಶಗಳನ್ನೇ ನಿರ್ಮೂಲ ಮಾಡಿದರೆ ಹೇಗೆ? 125 ಕೋಟಿ ರೂಪಾಯಿಗಳ ಹಗರಣದಲ್ಲಿ ಮುಳುಗೇಳಿದ ಭ್ರಷ್ಟಾತಿಭ್ರಷ್ಟರನ್ನೇ ಕೃಷ್ಣರಾಜಪುರ ಪುರಸಭೆಗೆ ಮಹಾನಾಯಕರನ್ನಾಗಿಸಿ ಅಭಿನಂದಿಸುತ್ತಿರುವ ಮುಖ್ಯಮಂತ್ರಿಗಳ ಕ್ರಮದ ಎದುರಲ್ಲಿ...! ಆದ್ದರಿಂದ ಸ್ಪಷ್ಟ ಗೋಚರವಾಗುವ ಸಂಗತಿ ಯೆಂದರೆ ಬೆಂಗಳೂರು ಮಹಾನಗರ ಪಾಲಿಕೆಯ ಸ್ಥಾಯಿ ಸಮಿತಿಗಳ ರದ್ದತಿಗೆ ಸಂಪುಟ ತೀರ್ಮಾನ ಮಾಡುವಲ್ಲಿ ಬೇರೆಯದೇ ಕಾರಣ - ಹಿತಾಸಕ್ತಿಗಳಿವೆ. ಬಹುಮುಖ್ಯವಾಗಿ ಬೆಂಗಳೂರಿನಂತಹ ಮಹಾನಗರಗಳನ್ನು ಘನೋದ್ಧಾರ ಮಾಡಲು, ಸಿಂಗಪುರದಂತೆ ಸಿಂಗರಿಸಲು ಈಗಾಗಲೇ ಹಲವಾರು ವಿದೇಶಿ 'ಅಭಿವೃದ್ಧಿ' ಬ್ಯಾಂಕುಗಳಿಂದ ಯಥೇಚ್ಛ ಸಾಲ ಪಡೆಯಲಾಗಿದೆ. ಓವರ್ ಬ್ರಿಡ್ಜ್, ರಸ್ತೆಗಳು ಮುಂತಾದವುಗಳಿಗೆ ಕೋಟಿಕೋಟಿ ಹಣ ಸುರಿಯಲಾಗುತ್ತಿದೆ. ಇನ್ನೂ ನೂರಾರು-ಸಾವಿರಾರು ಕೋಟಿ ಸುರಿಯುವ ಯೋಜನೆ ಇದೆ. ಈ ಸೌಂದರ್ಯ-ಅಭಿವೃದ್ಧಿ ಯೋಜನೆಗಳಲ್ಲಿ ನೂರಾರು (ಸಾವಿರಾರು) ಕೋಟಿ ರೂಪಾಯಿಗಳನ್ನು ನುಂಗಿ ನೀರು ಕುಡಿಯಲಾಗಿದೆ. ಅದೂ ಅಲ್ಲದೆ ಹಣ ನೀಡಿರುವ ವಿಶ್ವಬ್ಯಾಂಕ್, ಏಶಿಯನ್ ಅಭಿವೃದ್ಧಿಯಂತಹ ಬ್ಯಾಂಕಗಳು ಹಂತಹಂತವಾಗಿ ಇಡೀ ನಾಗರಿಕ ಸೌಲಭ್ಯಗಳ ವ್ಯವಸ್ಥೆಯನ್ನು (ಕುಡಿಯುವ ನೀರು, ಆರೋಗ್ಯ, ಕಾಮಗಾರಿ ಇತ್ಯಾದಿ..) ತಮಗೆ ಒಪ್ಪಿಸಲು ಒತ್ತಾಯಿಸುತ್ತಿವೆ. ಈ ಖಾಸಗೀಕರಣಕ್ಕೆ ಕೃಷ್ಣರವರೂ ಒಪ್ಪಿದ್ದಾರೆ. ಆದ್ದರಿಂದ ಮಹಾನಗರ ಪಾಲಿಕೆಯ ಸ್ಥಾಯಿ ಸಮಿತಿಗಳ ರದ್ದತಿಗೆ ನಿರ್ಧರಿಸಿರುವುದು ಎಂಬುದರಲ್ಲಿ ಅನುಮಾನವಿಲ್ಲ. ಕೃಷ್ಣ ಈ ತಾಳಕ್ಕೆ ಮೇಯರ್ ನಾಗರಾಜ್, ಕಮಿಷನರ್ ಶ್ರೀನಿವಾಸಮೂರ್ತಿ ಕೈಜೋಡಿಸಿರುವುದು ಸ್ಪಷ್ಟ. ಆದ್ದರಿಂದ ಕೃಷ್ಣ ಮತ್ತುವಿದೇಶಿ ಬ್ಯಾಂಕ್‌ಗಳ ಕೂಟ ನಗರ ಪಾಲಿಕೆಯನ್ನು, ಕರ್ನಾಟಕವನ್ನು ಹೈಜಾಕ್ ಮಾಡಿ ಅಪಹರಿಸುವ ಮೊದಲು ಎಚ್ಚರಗೊಂಡು ಹಕ್ಕುಉಳಿಸಲು ಸಂಘರ್ಷಕ್ಕೆ ಇಳಿಯಬೇಕು.



ಈ ವಾರ ಕರ್ನಾಟಕ
ಒಂದು ನೋಟ
ಎಸ್. ವೈ. ಗುರುಶಾಂತ್

ಹುದ್ದೆಗಳ ರದ್ದು : ವಿಶ್ವಬ್ಯಾಂಕಿನದ್ದೇ ಗುದ್ದು

ಆಡಳಿತದ ಸುಧಾರಣೆಗೆ ಟೊಂಕಕಟ್ಟಿ ತುಬಿಟ್ಟಿದ್ದಾರೆ ಮುಖ್ಯಮಂತ್ರಿಗಳು! ಬರದ ರಣೆ ಮತ್ತು ಆತ್ಮಹತ್ಯೆಗೀಡಾಗುತ್ತಿರುವ ರೈತರಿಗೆ ಾನಸೌಧದಲ್ಲಿ ಚಿಂತಕರು - ತಜ್ಞರುಗಳ ಮೇಳ ೆಸಿ 'ಸಾಂತ್ವನ'ದ ಸಿಂಚನ ಮಾಡುವ ಾಂತ್ರಿಕತೆಯನ್ನು ಮೈಗೂಡಿಸಿಕೊಂಡಿದ್ದಾರೆ, ್ನೊಂದೆಡೆ ಅಭಿವೃದ್ಧಿಯ ಆಗಸಕ್ಕೆ ಕರ್ನಾಟಕವನ್ನು ್ತಿಲು ಸರ್ಕಾರವನ್ನು ಕಿರುದುಗೊಳಿಸುವ ಾರ್ಯದಲ್ಲಿ ಮಗ್ನರಾಗಿಬಿಟ್ಟಿದ್ದಾರೆ. ಉದ್ಯೋಗಗಳ ತವೇ ಅಭಿವೃದ್ಧಿಗೆ ಮೂಲ ಕಾರಣವೆಂಬ ್ವಬ್ಯಾಂಕ್ ಸಿದ್ಧಾಂತ ಅಪ್ಪಿಕೊಂಡ ಆಡಿಯಾಳು ್ಣರವರು ಎಂಬುದನ್ನು ಬೇರೆ ಹೇಳಬೇಕಿಲ್ಲ. ತಹ ವಿನಾಶದ ಕೆಲಸಕ್ಕೆ ವಿಪರೀತ ಬುದ್ಧಿ ಖರ್ಚು ಮಾಡಿರುವ ಹಾರ್ನಳ್ಳಿ ರಾಮಸ್ವಾಮಿಯವರ ಆಡಳಿತ ವಿಧ್ವಂಸಕ ವರದಿ ಅನುಷ್ಠಾನಕ್ಕೆ ಕಂತಿನಂತೆ ಹೊರಟಿದ್ದಾರೆ. ಈ ಕೆಲವೇ ತಿಂಗಳ ಹಿಂದೆ ರೇಷ್ಮೆ ಕಾರ್ಮಿಕದಂತಹ ಪ್ರಮುಖ ಇಲಾಖೆಗಳನ್ನೇ ಮುಚ್ಚಿಸಿದ್ದಾಯಿತು. ಈಗ ವಿಭಾಗೀಯ ಹಂತದ ಸಾವಿರ ಹುದ್ದೆಗಳ ರದ್ದತಿಗೆ ಗುರುವಾರ ನಡೆದ ಸಚಿವ ಸಂಪುಟ ನಿರ್ಧರಿಸಿದೆ. ಇದರಲ್ಲಿ ಕೆಲವು ಅನಾವಶ್ಯಕವಾಗಿದ್ದ ಹುದ್ದೆ ರದ್ದು ಮಾಡಬಹುದು. ಆದರೆ ಅಷ್ಟಕ್ಕೆ ನಿಲ್ಲದೆ ಅದು ಇಲಾಖೆಗಳನ್ನೇ ಖಾಲಿ ಮಾಡಿಸಲು ಮುಂದುವರಿದಿದೆ. ಕಾಲೇಜು ಶಿಕ್ಷಣ ಇಲಾಖೆ, ಲೋಕೋಪಯೋಗಿ, ಅರಣ್ಯ, ನೀರಾವರಿ... ಇಲಾಖೆಗಳ ಹುದ್ದೆಗಳನ್ನು ರದ್ದುಪಡಿಸಲು ಯೋಜನೆ ಇದೆಯೆಂಬುದು ದಿಗಿಲುಗೊಳಿಸುವ ಸಂಗತಿ.

ಇತ್ತ ಜನಸಾಮಾನ್ಯರ ನಿರೀಕ್ಷೆ, ಅಗತ್ಯಗಳನ್ನು ಪೂರೈಸಲಾರದೆ ಕಚೇರಿ-ಸಿಬ್ಬಂದಿಗಳ ಮೇಲೆ ಒತ್ತಡವಿದೆ. ಈ ಸ್ಥಿತಿಯಲ್ಲಿ ಸ್ವಯಂ ನಿವೃತ್ತಿಯ ಯೋಜನೆಯೂ ಪ್ರಕಟನೆಗೊಂಡು ನೌಕರರನ್ನು ಹೊರದಬ್ಬಲು ತಯಾರಿಯೂ ಆಗಿದೆ. ಇಂತಹ ಕ್ರಮಗಳನ್ನು ಮೊದಲು ಮೆಲುಧ್ವನಿಯಲ್ಲಿ ಮಾತನಾಡಲಾಗುತಿತ್ತು. ಈಗ ಜಗತ್ತಿಗೆ ಡಂಗುರ ಹೊಡೆದು ಜಾರಿಗೊಳಿಸಲಾಗುತ್ತಿದೆ. ಇದಕ್ಕೆ ಪ್ರತಿರೋಧವಿಲ್ಲದಿದ್ದಲ್ಲಿ ಹೊಸ ನೇಮಕಾತಿ ಇರಲಿ, ಇರುವುದನ್ನು ಉಳಿಸಿಕೊಳ್ಳಲಾಗದು. ಮೂಲ ಸಂರಚನೆಯ ಹೊಂದಾಣಿಕೆಯ ವಿಶ್ವಬ್ಯಾಂಕ್-ಅಭಿವೃದ್ಧಿ ಬ್ಯಾಂಕುಗಳ ಒತ್ತಡವೇ ಅಂತಹದ್ದು.

ಕೋಮುವಾದಿಗಳ ಮಟ್ಟಹಾಕಲು ಖರ್ಗೆ ಗುಟುರು ಸಾಕೆ?


ಕೋಮು ಸಂಘಟನೆಗಳನ್ನು ಬಲಿ ಹಾಕಿ ಎಂದು ಘರ್ಜಿಸಿದ್ದಾರೆ ಗೃಹಸಚಿವ ಖರ್ಗೆಯವರು. ದಕ್ಷಿಣ ಭಾರತದಲ್ಲಿ ಕರ್ನಾಟಕವನ್ನು ತನ್ನ ಫ್ಯಾಸಿಸ್ಟ್ ಮಾದರಿಯ ಕೃತ್ಯಗಳಿಗೆ ಪ್ರಮುಖ ನೆಲೆಯಾಗಿಸುವ ನಿರ್ಧಾರದಂತೆ ಆರ್.ಎಸ್.ಎಸ್. ಈಗ ಗಣಪತಿ ಉತ್ಸವದ ನೆಪದಲ್ಲಿ ವ್ಯಾಪಕವಾದ ಕೋಮು ಗಲಭೆಗಳನ್ನು ಹುಟ್ಟಿಹಾಕುತ್ತಿರುವ ಹಿನ್ನೆಲೆಯಲ್ಲಿ ತಡವಾಗಿಯಾದರೂ ಗೃಹಸಚಿವರ ಹೇಳಿಕೆಗೆ ಅರ್ಥವಿದೆ. ಹೇಳಿದ್ದಾರಲ್ಲ ಎಂಬುದೊಂದನ್ನು ಬಿಟ್ಟರೆ ಕ್ರಮಗಳನ್ನೇನಾದರೂ ವಹಿಸಿದ್ದಾರ ಎಂದರೆ ಅದು ಸಮಾಧಾನ ತರುವ ವಿಷಯವೇನಲ್ಲ. ಈ ಹೇಳಿಕೆ ಗಾಳಿಯಲ್ಲಿ ತೇಲಾಡುತ್ತಿರುವಾಗಲೇ ಬಜರಂಗದಳದ ಮುತಾಲಿಕ್ 'ಅಲ್ಪಸಂಖ್ಯಾತರ ವಿರುದ್ಧ ಅಸ್ತ್ರ ಹಿಡಿಯುವ' ಬೆದರಿಕೆಯೂ ಹೊರಡಿಸುತ್ತಿದ್ದ ಮತ್ತು ಹೊರಡಿಸುತ್ತಿದ್ದಾನೆ. ಕರ್ನಾಟಕದಲ್ಲಿ ನಡೆದ ಈ ಸುತ್ತಿನ ಗಲಭೆಗಳಲ್ಲಿ ಮುಖ್ಯವಾಗಿ ಸೋಮವಾರಪೇಟೆ, ಶಿರಸಿ, ಸಾಗರ, ಶಿವಮೊಗ್ಗ ಮುಂತಾದೆಡೆ ಪೋಲೀಸರ ಪಾತ್ರವೇ ಪ್ರಶ್ನಾರ್ಹ. ಸೋಮವಾರ ಪೇಟೆಯಿಂದ ಬಂದ ವರದಿಯಂತೆ ಬಿಜೆಪಿ - ಬಜರಂಗದಳದ ಪುಂಡರ ಅಟ್ಟಹಾಸ, ಲೂಟಿ, ಅಲ್ಪಸಂಖ್ಯಾತರ ಆಸ್ತಿ ನಾಶ - ಗಲಭೆಗಳು ನಡೆದದ್ದೇ ಪೊಲೀಸ್ ಅಧಿಕಾರಿಗಳ (ಎಸ್‌ಪಿ ಸೇರಿ) ಸಮಕ್ಷಮದಲ್ಲಿ. ಹಾಗಾದರೆ ಸರ್ಕಾರ ಕೋಮುವಾದಿಗಳನ್ನು ಮಟ್ಟಹಾಕುವ ಕ್ರಮ ಎಂತಹದಿದ್ದೀತು. ತನ್ನ ಹೇಳಿಕೆಗೆ ಬದ್ಧವಾಗದ ಸರ್ಕಾರ ಇದು. ಅಲ್ಲದೇ ಮಟ್ಟಹಾಕುವುದು ಇವರಿಗೆ ಬೇಡ. ಸಂಘ ಪರಿವಾರದ ಆಕ್ರಮಣ ಹೆಚ್ಚಿದರೆ ಅಲ್ಪಸಂಖ್ಯಾತರ ಓಟು ನಮ್ಮ ಬುಟ್ಟಿಗೆ ಎಂಬ ಲೆಕ್ಕಾಚಾರವನ್ನೇ ಕಾಂಗ್ರೆಸ್ ಸರ್ಕಾರ ಅನುಸರಿಸುತ್ತಾ ಬಂದಿರೋದು. ಇದಕ್ಕಿಂತ ಹೆಚ್ಚಿಗೆ ಏನಿದೆ ಗೃಹ ಸಚಿವರ ಹೇಳಿಕೆಯಲ್ಲಿ?

ಶಿರಸಿಯಲ್ಲಿ ಕೋಮುದಳ್ಳುರಿ ಹಬ್ಬಿಸಲು ಸಂಘಪರಿವಾರದ ವಿಫಲ ಯತ್ನ

ಎಲ್ಲಾ ಮತ ಧರ್ಮ, ಜಾತಿಯವರೂ ದಾ ಶಾಂತಿ ಸೌಹಾರ್ದತೆಯಿಂದ ಇರುವ ಶಿರಸಿ ುತ್ತರ ಕನ್ನಡ ಜಿಲ್ಲೆಯ ಪ್ರಮುಖ ರಾಜಕೀಯ ುತ್ತು ವಾಣಿಜ್ಯ ಕೇಂದ್ರ, ಸೆಪ್ಟೆಂಬರ್ 16 ರಂದು ಂತವಾಗಿದ್ದ ಶಿರಸಿ ನಗರದ ಸೌಹಾರ್ದತೆ ದಡಿ ಕೋಮು ದಳ್ಳುರಿ ಹಬ್ಬಿಸಲು ಂಘಪರಿವಾರದ ಶಕ್ತಿಗಳು ಫಲ ಪ್ರಯತ್ನ ನಡೆಸಿದವು.

ನಗರದ ಸುವರ್ಣ ಕೋಪ್‌ರೇಟಿವ್ ಸೊಸೈಟಿಯ ದೇವಿಕೆರೆ ಸ್ತೆಯಲ್ಲಿರುವ ಶಾಖಾ ಕಚೇರಿಯಲ್ಲಿ ನಡೆದ ್ಲೆಯ ಘಟನೆಯನ್ನೇ ಕೋಮುದಳ್ಳುರಿ ಬ್ಬಿಸಲು ಈ ಸಮಾಜದ್ರೋಹಿ ಶಕ್ತಿಗಳು ಉಪಯೋಗಿಸಿವೆ. ಸೋಮವಾರ ಕಚೇರಿ ಸದ ವೇಳೆಯಲ್ಲಿ ಒಳನುಗ್ಗಿದ ತಬ್ರೇಜ ುಲ್ಲರಹಿಂ ಮತ್ತು ಗಣೇಶ ಮಡಗಾಂವಕಾರ ಬ್ಬ ವ್ಯಕ್ತಿಗಳು ಮ್ಯಾನೇಜರ್ ವಿಜಯ ಸಾದ ಸಂಗಡ ಸಾಲ ವಸೂಲಿ ಬಂಗಾರ ಿಷಯಕ್ಕೆ ಸಂಬಂಧಿಸಿದಂತೆ ಜಗಳಕಾಯ್ದು ಂತರ ಮ್ಯಾನೇಜರ್ ಅವರ ಮೇಲೆ ದೈಹಿಕ ಹಲ್ಲೆಗೈದರೆನ್ನಲಾಗಿದೆ. ಸಂಜೆ ಒಳಗೆ ಪೊಲೀಸರು ಆ ಇಬ್ಬರೂ ಆರೋಪಿಗಳನ್ನು ದಸ್ತಗಿರಿ ಮಾಡಿದ್ದರು! ಸುವರ್ಣ ಸೊಸೈಟಿ ದೈವಜ್ಞ ಬ್ರಾಹ್ಮಣ ಸಮಾಜದವರ ಹಿಡಿತದಲ್ಲಿದ್ದ ಸಹಕಾರಿ ಸಂಘವಾಗಿದ್ದು ಅನೇಕ ಅನ್ಯ ಜಾತಿಯವರಿಗೂ ಸಾಲಸೌಲಭ್ಯ ನೀಡುತ್ತಿದೆ. ಸಹಜವಾಗಿಯೇ ಈ ಸುದ್ದಿ ನಗರದಲ್ಲಿ ಹಬ್ಬಿ ಸಮಾಜದ ಬಾಂಧವರು ಆಕ್ರೋಶ ಭರಿತರಾಗಿದ್ದರು. ಸಹಕಾರಿ ರಂಗದ ಅನೇಕ ವ್ಯಕ್ತಿಗಳು ಮತ್ತು ಅನೇಕ ಜನ

ಪುಟ 10 ಕ್ಕೆ



ಉರಿವ ಮನೆಯ ಬೆಂಕಿಯಲ್ಲಿ ಚಳಿ ಕಾಯಿಸಿಕೊಳ್ಳುವವರು

ದಕ್ಷಿಣ ಕನ್ನಡ : ವಿಷಜ್ವಾಲೆ ಉಗುಳುತ್ತಿರುವ ಸಂಘ ಪರಿವಾರ

ಬೆಂಗಳೂರಿನಲ್ಲಿ ನಡೆದ ಬಿ.ಜೆ.ಪಿ. ಕಾರ್ಯಕಾರಿ ಸಭೆಯಲ್ಲಿ "ಕರ್ನಾಟಕ ಚಳುವಳಿಯ ರಾಜ್ಯ"ವೆಂದು ಶಹಬಾಸ್‌ಗಿರಿ ನೀಡಿದ ವೆಂಕಯ್ಯ ನಾಯ್ಡು ತಂಡ ಬಹುಶಃ ಆಗಸ್ಟ್, ಸಪ್ಟೆಂಬರ್ ತಿಂಗಳು ರಾಜ್ಯದಲ್ಲಿ ನಡೆದಂತಹ ಕೋಮುವಾದಿ ಪ್ರಚಾರ ಪ್ರಕ್ಷೋಭೆಗಳಿಂದ ಸಾಕಷ್ಟು ಸಮಾಧಾನಪಟ್ಟುಕೊಂಡೇ ಈ ರೀತಿ ಹೇಳಿರಬಹುದು.

ಕಲ್ಲಡ್ಕ ದ.ಕ.ಉಡುಪಿಗೆ ಸಂಘ ಪರಿವಾರದ ಅಜೆಂಡಾವಾದರೆ, ಅತ್ತ ಶಿವಮೊಗ್ಗ ಜಿಲ್ಲೆಯ ವಿಸರ್ಜನೆಗೊಳ್ಳದೆ ನಿಂತಿರುವ ಗಣಪತಿ ಜ್ವಾಲಾಮುಖಿಯಾಗಬಹುದು. ಪಕ್ಕದ ಸಾಗರದಲ್ಲಿ ಈ ಗಣಪತಿ ಸಾಕಷ್ಟು "ಮತ"ಗಳನ್ನು ಬಿಜೆಪಿಗೆ ನೀಡುವಷ್ಟು ಕ್ರಿಯೆ ಮಾಡಿದ್ದಾನೆ. ಅಲ್ಪಸಂಖ್ಯಾತರ ವ್ಯಾಪಾರ ವಹಿವಾಟು ಗಣಪನ ಮೆರವಣಿಗೆ ನೆಪವಾಗಿ ಭಸ್ಮವಾಗಿದೆ. ಕಾಂಗ್ರೆ ಪಕ್ಷದ ಕಛೇರಿ ನಾಶವಾಗಿದೆ. ವಿಜಾಪುರದಲ್ಲಿ ಕೋಮು ಗಲಭೆ ನಡೆದೇ ಹೋಯಿತು. ಅಕ್ಟೋಬರ್ ತಿಂಗಳ ಮಧ್ಯದಲ್ಲಿ ಬಾಬಾಬುಡನ್‌ಗಿರಿಯಲ್ಲಿ ನಡೆಯುವ ದತ್ತ ಉತ್ಸವ ಸಹಜವಾಗಿಯೇ ಸಂಘ ಪರಿವಾರದ ಅಪಪ್ರಚಾರ ವಸ್ತುವಾಗಲಿದೆ. ಈಗಾಗಲೇ ಇರುವ ಗೋಮಾಂಸ, ಇಸ್ಲಾಂ ಭಯೋತ್ಪಾದನೆಗಳ ಕೀರಲು ರಾಗ ಜೋರಾಗಬಹುದು.

ಇವೆಲ್ಲವುಗಳ ಮಧ್ಯೆ ದ.ಕ.ದ ಕಲ್ಲಡ್ಕದಲ್ಲಿ ಆರ್.ಎಸ್.ಎಸ್. ನಾಯಕ ಪ್ರಭಾಕರ ಭಟ್‌ರವರ ಕೋಮು ಜ್ವಾಲೆಯ ತಂತ್ರಗಳ ಬಗ್ಗೆ ಈ ಪತ್ರಿಕೆಯಲ್ಲಿ ನೀವು ಓದಿರಬಹುದು. ಅದರ ಮುಂದುವರಿದ ಭಾಗ ಸೆ. 11 ರ ದ.ಕ ಜಿಲ್ಲಾ ಬಂದ್ ಕರೆಯಾಗಿತ್ತು. ಹೆಚ್ಚು ಕಡಿಮೆ ಬಂದ್ ಯಶಸ್ವಿಯಾಗಿದೆ. ಮೊತ್ತ ಮೊದಲಿಗೆ ಹಿಂದೂ ವಿರೋಧಿ ಎಸ್.ಪಿ.ಯವರ ವಜಾ ಯಾ ವರ್ಗಾವಣೆಗಾಗಿ ಮತ್ತು ಕಾಂಗ್ರೆಸ್ಸು ಕುಮ್ಮಕ್ಕಿನ ವಿರುದ್ಧ ಸೆಪ್ಟೆಂಬರ್ 11 ರಂದು ಬಂದ್ ನಡೆಸುವುದಾಗಿ ಘೋಷಿಸಿತು. ಆದರೆ ಬಂದ್ ಬಗ್ಗೆ ಪ್ರಕಟಿಸಿದ ಕರಪತ್ರದಲ್ಲಿ ಎಸ್.ಪಿ.ಯವರ ಬಗೆಗಿನ ಆರೋಪವಿರಲಿಲ್ಲ. ಅದೇ ಸಮಯದಲ್ಲಿ 3 ಬಾರಿ ಐ.ಜಿ.ಪಿಯವರನ್ನೂ ಭೇಟಿ ಮಾಡಿದ ಬಿ.ಜೆ.ಪಿ ನಿಯೋಗ ಎಸ್.ಪಿ.ಯವರ ವಜಾ ಯಾ ವರ್ಗಾವಣೆಯ ಬೇಡಿಕೆಯನ್ನೇ ಇಡಲಿಲ್ಲ ಎಂದು ಪತ್ರಿಕಾಗೋಷ್ಠಿಯಲ್ಲಿ ಹೇಳಿದರು. ಕರಪತ್ರದಲ್ಲಂತೂ ಅವರು ಪ್ರಿಂಟ್ ಹಾಕಿರುವ ಬೇಡಿಕೆಗಳು 1) ಇಸ್ಲಾಂ ಭಯೋತ್ಪಾದನೆ 2)



ಕಾಂಗ್ರೆಸ್ಸು ಕುಮ್ಮಕ್ಕು ಮತ್ತು 3) ಹಿಂದೂ ವಿರೋಧಿ ದೌರ್ಜನ್ಯ ಎಂದು ಆಗಿತ್ತು. ಒಟ್ಟಾರೆಯಾಗಿ ಮೊದಲಿಗೆ ನೀಡಿದ ಕರೆ, ಅನಂತರ ಪತ್ರಿಕಾ ಗೋಷ್ಠಿಯಲ್ಲಿ ಬಿಜೆಪಿ ನಾಯಕರು ಹೇಳಿದ ಅಂಶ ಮತ್ತು ಪೋಸ್ಟರಿನಲ್ಲಿ ಪ್ರಿಂಟ್ ಆದ ಅಂಶ ಒಂದಕ್ಕೊಂದು ಗೊಂದಲಮಯವಾಗಿತ್ತು.

ಇತ್ತ ಕಾಂಗ್ರೆ ಪಕ್ಷ ಕಳೆದ ತಿಂಗಳು 26 ರಂದು ಕೋಮುವಾದ ವಿರೋಧಿ ರ‍್ಯಾಲಿ ನಡೆಸಿ ಒಂದು 'ಶೋ' ತೋರಿಸಿತು. ಅದರೆ ಈ ಬಂದ್ ವಿರೋಧಿಸಿ ಒಂದೇ ಒಂದು ಪತ್ರಿಕಾ ಹೇಳಿಕೆಯನ್ನು ನೀಡಲಿಲ್ಲ ಎಂಬುದು ವಿಚಿತ್ರವಾದರೂ ಸತ್ಯ. ಸಾಗರದಲ್ಲಿ ಕಾಂಗ್ರೆ ಪಕ್ಷ ಕಛೇರಿ ಧ್ವಂಸವಾದರೂ ಆ ಕ್ಷಣ ಖಂಡಿಸದ ವಿಚಿತ್ರ ವರ್ತನೆ ಕಣ್ಣು ಮುಂದೆ ಇರುವಾಗ ಬಂದ್‌ನ್ನು ವಿಫಲಗೊಳಿಸುವುದರ ಬಗ್ಗೆಯಾಗಲಿ ಚಕಾರವೆತ್ತಲಿಲ್ಲ. ಉದಯವಾಣಿ ಪತ್ರಿಕಾ ಪ್ರತಿನಿಧಿಗಳ ಒತ್ತಡಕ್ಕೆ (ಬಹುಶಃ ಫೋನು ಕರೆ ಇರಬಹುದು) ಅಭಿಪ್ರಾಯ ನೀಡಿದ ಜಿಲ್ಲಾ ಕಾಂಗ್ರೆ ಅಧ್ಯಕ್ಷ ಬ್ಲೇಸಿಯಸ್ ಎಂ.ಡಿಸೋಜಾರವರು ಸಂಘಪರಿವಾರಕ್ಕೆ ಬಂದ್‌ನ ಬದಲು ಬೇರೆ ರೀತಿಯಲ್ಲಿ ಪ್ರತಿಭಟಿಸಲು ಸಲಹೆ ನೀಡಿ ಬಿ.ಜೆ.ಪಿ.ಯ "ಬಿ" ತಂಡದಂತೆ ಆಗಿದ್ದಾರೆ.

ಬಂದ್ ವಿರೋಧಿಸಿದ ಸಿ.ಪಿ.ಐ.(ಎಂ), ಡಿ.ವೈ.ಎಫ್.ಐ ಮತ್ತು ಕೆಲ ಮುಸ್ಲಿಂ ಸಾಹಿತ್ಯ ಸಂಘಟನೆಗಳು

ಬಂದ್‌ನ ಉದ್ದೇಶವನ್ನು ಪ್ರಶ್ನಿಸಿ ಅದರ ರಾಜಕೀಯ ಕುತಂತ್ರವನ್ನು ಬಯಲಿಗೆಳೆದ ಅತ್ಯಂತ ಪ್ರಭಾವಶಾಲಿ ಪ್ರಚಾರ ಸಿಪಿಐ(ಎಂ) ಮತ್ತು ಡಿ.ವೈ.ಎಫ್.ಐ ನಿಂದ ಮಾತ್ರ , ಉಳಿದಂತೆ ಕೆಲವು ಮುಸ್ಲಿಂ ಸಾಹಿತ್ಯ ಸಂಘಟನೆಗಳು ವಿರೋಧಿಸಿದೆ.

ಆದರೆ ಇತರ ಯಾವುದೇ ಜಾತ್ಯಾತೀತ ರಾಜಕೀಯ ಸಂಘಟನೆಗಳು ಶಕ್ತಿಗಳು ನಿರ್ಲಿಪ್ತತೆಯಿಂದ ಇದ್ದವು.

ಬಂದ್‌ನ ದಿವಸ ನಗರ ಮಧ್ಯದಲ್ಲಿ ಇರುವ ಬಂದರು ಪ್ರದೇಶದ ಡಿ.ವೈ.ಎಫ್.ಐ ಕಾರ್ಯಕರ್ತರಾದ ಜಾಕೀರ್‌ರವರ ಮೇಲೆ ಬಜರಂಗ ದಳದ ವ್ಯಕ್ತಿಗಳಿಂದ ಹಲ್ಲೆ ನಡೆದಿದ್ದು ಪೋಲೀಸರು ಕೇಸು ಹಾಕಿದ್ದಾರೆ.

ಬಸ್ಸು ಮಾಲಿಕರ ಸಂಘವು ಬಸ್ ನಿಲ್ಲಿಸಿರುವುದರಿಂದ ಹೊಟೇಲ್ ಇನ್ನಿತರೆ ಅಂಗಡಿ ವ್ಯಾಪಾರಿಗಳ ಸಂಘ ಬಂದನ್ನು ನೇರವಾಗಿ ಬೆಂಬಲಿಸಿರುವುದು ಬಂದ್ ಯಶಸ್ಸಿಗೆ ಪ್ರಮುಖ ಕಾರಣವಾದರೆ ಬಜರಂಗದಳದ ಭಯೋತ್ಪಾದನೆ ಇನ್ನೊಂದು ಪ್ರಮುಖ ಕಾರಣವಾಗಿದೆ.

ಸಂಘ ಪರಿವಾರದ ಮುಂದಿನ ಕೋಮು ವಿಷ ಪ್ರಚಾರ ಮತ್ತೆ ಇದೇ ಕಲ್ಲಡ್ಕದ ಸುತ್ತ ತಿರುಗುತ್ತದೋ ಅಥವಾ ಇನ್ನಾವುದೋ ಅಂಶದ ಮೇಲೆ ಇರುತ್ತದೋ ಎಂಬುದನ್ನು ಕಾದು ನೋಡಬೇಕಾಗಿದೆ.

ಕೃಷ್ಣಪ್ಪ ಕೊಂಚಾಡಿ

ಅರಣ್ಯಭೂಮಿ ಅತಿಕ್ರಮಣದಾ ಪ್ರದರ್ಶನ

ನಾಲ್ಕಾರು ದಶಕಗಳಿಂದ ಅರಣ್ಯ ಭೂಮಿ ಸಾಗುವಳಿ ಮಾಡಿ ಬದುಕು ಸಾಗಿಸ ಬಡವರನ್ನು ಅವರ ಭೂಮಿಯಿಂದ ಒಕ್ಕಲೆಬ್ಬ ಅರಣ್ಯ ಇಲಾಖೆಯ ಕ್ರಮವನ್ನು ಪ್ರತಿಭ ರಾಜ್ಯದ ವಿವಿಧ ಜಿಲ್ಲೆಗಳಿಂದ ಆಗಮಿಸಿದ್ದ ರೈತರು ಮತ್ತು ಕೃಷಿ ಕೂಲಿಕಾರರು ಬೆಂಗಳೂರಿನಲ್ಲಿ ಮುಖ್ಯ ಅ ಸಂರಕ್ಷಣಾಧಿಕಾರಿಗಳ ಕಛೇರಿಯ ಎದುರು ಪ್ರದರ್ಶನ ನಡೆಸಿದರು. ಕರ್ನಾಟಕ ಪ್ರಾಂ ಸಂಘ ಮತ್ತು ಕರ್ನಾಟಕ ಪ್ರಾಂತ ಕೃಷಿ ಕೂಲಿ ಸಂಘಗಳ ಜಂಟಿ ಆಶ್ರಯದಲ್ಲಿ ಈ ಪ್ರತಿಭ ಪ್ರದರ್ಶನ ನಡೆಯಿತು.

ಪ್ರದರ್ಶನಕಾರರನ್ನು ಉದ್ದೇಶಿಸಿ ಮಾತ ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸ ಮುಖಂಡರಾದ ಜಿ.ಎನ್.ನಾಗರಾ ನಿತ್ಯಾನಂದಸ್ವಾಮಿ ಮತ್ತು ಚಂದ್ರಪ್ಪ ಹೊ ಅವರು 1980 ರ ಅರಣ್ಯ ಸಂರಕ್ಷಣಾ ಕಾಯ್ ಸೂಕ್ತವಾಗಿ ತಿದ್ದುಪಡಿ ಮಾಡಿ ಬಡವರ ಸಾಗುವಳಿ ಪ್ರಕರಣಗಳನ್ನು ಸಕ್ರಮಗೊಳಿಸಬ ಒತ್ತಾಯಿಸಿದರು.

ಅಲ್ಲಿಯವರೆಗೆ ಅರಣ್ಯಭೂಮಿ ಸಾ ದಾರರನ್ನು ಬಲವಂತವಾಗಿ ಒಕ್ಕಲೆಬ್ಬಿಸು ನಿಲ್ಲಿಸಬೇಕೆಂದು ಮುಖ್ಯ ಅರಣ್ಯ ಸಂ ಕಾರಿಗಳ ಮೂಲಕ ಮುಖ್ಯಮಂತ್ರಿ ಸಲ್ಲಿಸಲಾದ ಮನವಿಯಲ್ಲಿ ಆಗ್ರಹಿಸಲಾಗಿ

ಮನವಿಯನ್ನು ಸ್ವೀಕರಿಸಿದ ಸಂರಕ್ಷಣಾಧಿಕಾರಿ/ ಯು.ವಿ.ಸಿಂಗ್ ಮನ ಸರ್ಕಾರಕ್ಕೆ ಕಳುಹಿಸುವುದಾಗಿ ಹೇಳಿದರಲ್ಲ ರ ಹಿಂದೆ ಅಕ್ರಮ ಸಾಗುವಳಿ ಪ್ರಕರಣಗಳನ್ನು ಪರಿಶೀಲಿಸಲು ರೈತ ಸಂ ಕೂಲಿಕಾರರ ಸಂಘದ ಮುಖಂಡ ಯೊಂದನ್ನು ಕರೆಯುವುದಾಗಿ ಭರವಸೆ ನಿ

ಇದಕ್ಕೂ ಮೊದಲು ಪ್ರದರ್ಶನಕಾರ ನಿಲ್ದಾಣದಿಂದ ಮೆರವಣಿಗೆಯಲ್ಲಿ " ಸಾಮೂಹಿಕ ಧರಣಿ ಸತ್ಯಾಗ್ರಹ ನಡ ಬೀದರಿನ ಸಂಗ್ರಾಮ ವಕೀಲರು, ಗು ಭೀಮಶೆಟ್ಟಿ ಎಂಪಳ್ಳಿ ಮತ್ತು ಹಾ ಹಕ್ಕಲಗೌಡ ಪಾಟೀಲ್ ಮೆರವಣಿಗೆಯ ವಹಿಸಿದ್ದರು.

ವೈದ್ಯಕೀಯ ವಿಜ್ಞಾನ

ಹಿಂದಿನ ಸಂಚಿಕೆಗಳಲ್ಲಿ ಜನಾರೋಗ್ಯ ಸಂಬಂಧಿಸಿದ ಕೆಲವು ವಿಷಯಗಳನ್ನು ತಿಳಿದಿದ್ದೇವೆ. ಇತ್ತೀಚಿಗೆ ಒಬ್ಬ ವೃದ್ಧರು ಬಂದು ನನಗೆ ವೃದ್ಧಾಪ್ಯದ ಬಗ್ಗೆ ಪ್ರಶ್ನೆಗಳನ್ನು ಕೇಳಿದರು. ಅವರ ಪ್ರಶ್ನೆಗಳಲ್ಲಿಯ ವೃದ್ಧಾಪ್ಯದ ಬಗ್ಗೆ ಇರುವ ಮಿಥ್ಯತೆ ಹಾಗೂ ಸತ್ಯತೆಯ ಬಗ್ಗೆ ಟಿಪ್ಪಣಿ ಮಾಡಿದ್ದೇನೆ ದಿನೇ ದಿನೇ ವೃದ್ಧರ ಸಂಖ್ಯೆ ನಮ್ಮದೇಶದಲ್ಲೂ ಹೆಚ್ಚುತ್ತಿದೆ ಎಂಬುದನ್ನು ಎಲ್ಲರೂ ಗಮನಿಸಬೇಕು.

60 ವರ್ಷದ ನಂತರ ಎಲ್ಲರೂ ದೈಹಿಕವಾಗಿ ಹಾಗೂ ಮಾನಸಿಕವಾಗಿ ಕುಗ್ಗುತ್ತಾರೆ. (ಇತ್ತೀಚಿಗೆ ಅಮೇರಿಕದಲ್ಲಿ ನಡೆದ ಸಂಶೋಧನೆಗಳಿಂದ ಆ ಗುಂಪಿನಲ್ಲಿ ಅಮೇರಿಕನ್ನರು, ಆಫ್ರಿಕನ್ನರು, ಜಪಾನಿ ಜನರು, ಏಶಿಯಾದ ಜನರು ಸೇರಿದ್ದರು) ತಿಳಿದು ಬರುವುದೇನೆಂದರೆ ಶೇ. 60 ರಷ್ಟು ವೃದ್ಧರು ದೈಹಿಕ ಹಾಗೂ ಮಾನಸಿಕವಾಗಿ ಕುಗ್ಗುವುದಿಲ್ಲ.



60 ವರ್ಷಗಳ ನಂತರ ಬುದ್ಧಿ ಭ್ರಮಣೆಯಾಗುವು ದರಿಂದ ಅರಳು ಮರುಳು ಉಂಟಾಗುತ್ತದೆ.

ವೃದ್ಧರು ಇತರರಿಗಿಂತ ನಿಧಾನವಾಗಿ ಸ್ಪಂದಿಸುತ್ತಾರೆ ಸಮಾಜ ವೃದ್ಧರಿಂದ ಯಾವ ವರ್ತನೆಯನ್ನು ಅಪೇಕ್ಷಿಸುತ್ತಾರೆ ಎಂಬುದು ಅವರ ನಡವಳಿಕೆಯನ್ನು ನಿರ್ಧರಿಸುತ್ತದೆ. ಆದರೆ ಬುದ್ಧಿ ಭ್ರಮಣೆಯಾಗುವುದು (seni dementaia) ಅತಿ ವಿರಳ.

ವೃದ್ಧರು ತಮ್ಮ ಲೋಕದಲ್ಲೇ ವಿಹರಿಸುತ್ತಾ ಇಂದಿನದನ್ನು ಮರೆಯುತ್ತಾರೆ. ಇದು ಕೆಲವರಿಗೆ (ಶೇ. 1ಕ್ಕಿಂತ ಕಡಿಮೆ) ಮಾತ್ರ ಅನ್ವಯಿಸುತ್ತದೆ.

ವೃದ್ಧರು ಲೈಂಗಿಕವಾಗಿ ಕ್ರಿಯಾಶೀಲರಾಗಿರುವುದಿಲ್ಲ. ಇದು ತಪ್ಪು ನಂಬಿಕೆ. ವೃದ್ಧರು ಹಾಸಿಗೆ ಹಿಡಿಯುವುದು ಸಾಮಾನ್ಯ. ವೃದ್ಧರು ಅನೇಕ ದೀರ್ಘಕಾಲದ ಕಾಯಿಲೆಗಳಿಂದ ಬಳಲುತ್ತಿರುತ್ತಾರೆ. ನಿಜ. ಆದರೆ ಕೆಲವೇ ಜನ ಬೀಕರ ಹಾಸಿಗೆ ಹಿಡಿಯುವ ಕಾಯಿಲೆಯಿಂದ ಬಳಲುತ್ತಿರುತ್ತಾರೆ. ಅನೇಕ ಹಾಸಿಗೆ ಹಿಡಿದ ರೋಗಿಗಳಿಗೆ ಸ್ವಲ್ಪಸಹಾಯ ಒದಗಿಸಿದಲ್ಲಿ, ಎಲ್ಲರಂತೆಯೇ ಎದ್ದು ಕ್ರಿಯಾಶೀಲರಾಗಿರಬಲ್ಲರು.

ವೃದ್ಧರಿಗೆ ಕಡಿಮೆ ಆಹಾರ ಬೇಕಾಗುತ್ತದೆ. ಎಲ್ಲರಂತೆಯೇ ಅವರಿಗೂ ಪೌಷ್ಟಿಕ ಆಹಾರ ಬೇಕು. ವೃದ್ಧಾಪ್ಯದಲ್ಲಿ ನಿಷ್ಕ್ರಿಯತ ಇದ್ದವರಿಗೆ ಕಡಿಮೆ ಕ್ಯಾಲರಿಯುಕ್ತ (ಕೊಬ್ಬು, ಪಿಷ್ಟ ಕಡಿಮೆ ಇರುವ) ಆಹಾರ ಅಗತ್ಯ. ಹಲ್ಲು ಇಲ್ಲದವರು ಮಾಮೂಲಿನಂತೆ ಬಡತನ ಹಾಗೂ ಅಜ್ಞಾನದಿಂದ ಪೌಷ್ಟಿಕ ಆಹಾರ ತೆಗೆದುಕೊಳ್ಳುವದಿಲ್ಲ. ಆದರೆ, ಎಲ್ಲರಂತೆಯೂ ಅವರಿಗೂ ಪೌಷ್ಟಿಕ ಆಹಾರ ಬೇಕು.

ಕಾರ್ಮಿಕರ ಹಕ್ಕು


ಅನ್ಯಾಯ ನಡೆದಾಗ ಪ್ರತಿಭಟನೆ ಹಕ್ಕು
ಕಸಿಯುವುದು ಅಸಾಧ್ಯ ಇದು ಅಚಲ ಉಕ್ಕು
ಈ ಉಕ್ಕು ಎಂಬುದಕ್ಕೆ ಹಿಡಿಸುವುದೇ ತುಕ್ಕು
ಕುಮ್ಮಕ್ಕು ನೀಡುತಿವೆ ಪರದೇಶಿ ಬೆಕ್ಕು


- ವಿಡಂಬ

ಯಶಸ್ವಿ ಕೃಪಾಂಕ ನೌಕರರ ರಾಜ್ಯ ಸಮಾವೇಶ

ಸೆಪ್ಟೆಂಬರ್ 14 ರಂದು ಬೆಂಗಳೂರಿನಲ್ಲಿ ನಡೆದ ಕೃಪಾಂಕ ನೌಕರರ ರಾಜ್ಯ ಸಮಾವೇಶವನ್ನು ಅಖಿಲ ಭಾರತ ರಾಜ್ಯ ಸರ್ಕಾರಿ ನೌಕರರ ಒಕ್ಕೂಟದ ಗೌರವಾಧ್ಯಕ್ಷರಾದ ಕಾಂ. ಎಂ.ಆರ್. ಅಪ್ಪನ್ ಉದ್ಘಾಟಿಸಿದರು.

ಮಾವೇಶದಲ್ಲಿ ಕಿಕ್ಕಿರಿದು ಸೇರಿದ್ದ ಅಪಾರ ನೌಕರ ಸಮೂಹ





ತೈಲ ಕಂಪನಿಗಳ ಮಾರಾಟಕ್ಕೆ ತಡೆ

ಸುಪ್ರೀಂಕೋರ್ಟ್ ದೇಶದ ಸಾರ್ವಜನಿಕ ವಲಯದ ಎರಡು ದೊಡ್ಡ ಕಂಪನಿಗಳಾದ ಹಿಂದೂಸ್ತಾನ್ ಪೆಟ್ರೋಲಿಯಂ ಕಾರ್ಪೋರೇಷನ್ ಲಿಮಿಟೆಡ್(ಹೆಚ್‌ಪಿಸಿಎಲ್) ಮತ್ತು ಭಾರತ್ ಪೆಟ್ರೋಲಿಯಂ ಕಾರ್ಪೋರೇಷನ್ ಲಿಮಿಟೆಡ್ (ಬಿಪಿಸಿಎಲ್)ನ ಶೇರುಗಳ ಮಾರಾಟಕ್ಕೆ ತಡೆ ಹಾಕಿದೆ. ಈ ನಿಟ್ಟಿನಲ್ಲಿ ಮುಂದುವರೆಯದಂತೆ ಸರಕಾರಕ್ಕೆ ಆದೇಶಿಸಿದೆ.

ಸಾರ್ವಜನಿಕ ವಲಯದ ಉದ್ದಿಮೆಗಳ ಶೇರುಗಳ ಮಾರಾಟ, ಖಾಸಗೀಕರಣ ದೇಶದ ಸಂಪತ್ತಿನ ಅಭೂತಪೂರ್ವ ಲೂಟಿ ಎಂದು ಪರಿಗಣಿಸಿರುವ ಸಿಪಿಐ(ಎಂ), ಈ ಎರಡು ಕಂಪನಿಗಳ ಶೇರುಗಳ ಮಾರಾಟವಂತೂ ಸಂಸತ್ತಿನ ಅನುಮತಿಯಿಲ್ಲದೆ ಸಂವಿಧಾನಬಾಹಿರವಾಗುತ್ತದೆ ಎಂದಿತ್ತು. ಏಕೆಂದರೆ 1974 ರಲ್ಲಿ ವಿದೇಶಿ ತೈಲ ಕಂಪನಿ ಎಸ್ಸೋವನ್ನು ರಾಷ್ಟ್ರೀಕರಿಸಿ ಸಂಸತ್ತಿನ ಒಂದು ಶಾಸನದಡಿಯಲ್ಲಿ ಹೆಚ್‌ಪಿಸಿಎಲ್‌ನ್ನು ಸ್ಥಾಪಿಸಲಾಯಿತು. ಅದೇ ರೀತಿ 1976 ರಲ್ಲಿ ಇನ್ನೊಂದು ವಿದೇಶಿ ತೈಲ ಕಂಪನಿ ಬರ್ಮಾ ಶೆಲ್ ಅನ್ನು ರಾಷ್ಟ್ರೀಕರಿಸಿ ಸಂಸತ್ತು ಬಿಪಿಸಿಎಲ್ ನ್ನು ರಚಿಸಿತ್ತು. ಎಲ್ಲರ ಒಳಿತನ್ನು ಈಡೇರಿಸಲು ಈ ಕಂಪನಿಗಳ ಮಾಲಕತ್ವವನ್ನು ಮತ್ತು ಭಾರತದಲ್ಲಿ ಅವುಗಳ ಪೆಟ್ರೋಲಿಯಂ ಉತ್ಪನ್ನಗಳ ವಿತರಣೆ, ಮಾರಾಟವನ್ನು ಸರಕಾರ ವಹಿಸಿಕೊಳ್ಳುತ್ತಿದೆ ಎಂದು ಹೇಳಲಾಗಿತ್ತು.

ಈಗ ಈ ರೀತಿ ಎಲ್ಲರ ಒಳಿತು ಇದರಿಂದ ಸಾಧ್ಯವಾಗುತ್ತಿಲ್ಲ ಎಂದು ಬಿಜೆಪಿಯ ಅಭಿಪ್ರಾಯವೇ? ಹಾಗಿದ್ದರೆ ಇದನ್ನು ಸಂಸತ್ತಿನಲ್ಲಿ ಮಂಡಿಸಿ ಅದರ ಅನುಮತಿ ಪಡೆಯಬೇಕಾಗಿತ್ತು. ಏಕೆಂದರೆ ಈ ಸಂಸ್ಥೆಗಳನ್ನು ಸೃಷ್ಟಿಸಿದ್ದು ಸಂಸತ್ತು. ಆದರೆ ವಾಜಪೇಯಿ ಸರ್ಕಾರ ಇದಕ್ಕೆ ಸಿದ್ಧವಿರಲಿಲ್ಲ. ಈ ಬಗ್ಗೆ ಸಾರ್ವಜನಿಕ ಚರ್ಚೆ ಆಗಬಾರದೆಂಬುದೇ ಅದರ ಆಶಯ. ಏಕೆಂದರೆ ಹಾಗಾದಾಗ ಒಂದೆಡೆ ಭಾರತದ ಲೂಟಿಗೆ, ಇನ್ನೊಂದೆಡೆ ಮೋಸ, ಭ್ರಷ್ಟಾಚಾರಕ್ಕೆ ಅವಕಾಶವಿರುವುದಿಲ್ಲವಲ್ಲಾ!

ಈ ಎರಡು ಸಂಸ್ಥೆಗಳ ಒಡೆತನದ ಸ್ವರೂಪವನ್ನೇ ಬದಲಾಯಿಸುವ ಶೇರು ಮಾರಾಟ ಸಂಸತ್ತಿನ ಪೂರ್ವಾನುಮತಿಯಿಲ್ಲದೆ ಸಾಧ್ಯವಿಲ್ಲ, ಆದ್ದರಿಂದ ಈ ದಿಕ್ಕಿನಲ್ಲಿ ಮುಂದುವರೆಯಬಾರದು ಎಂದು ಸುಪ್ರೀಂಕೋರ್ಟ್ ಹೇಳಿದೆ. ನಮ್ಮ ಮಟ್ಟಿಗಂತೂ ಇದು ಒಂದು ಸರಳ ಸತ್ಯವನ್ನು ಆಧರಿಸಿದ ತರ್ಕ. ಭಾರತದ ಸಾರ್ವಜನಿಕ ವಲಯ ಭಾರತೀಯ ಜನತೆಯ ಸಾಮೂಹಿಕ ಆಸ್ತಿ. ಸರಕಾರಗಳು ಬರಬಹುದು, ಹೋಗಬಹುದು, ಅವು ಈ ಆಸ್ತಿಗಳ ಮ್ಯಾನೇಜರುಗಳಷ್ಟೇ. ಮ್ಯಾನೇಜರು ಅದನ್ನು ನಡೆಸಲಷ್ಟೇ. ಮಾಲಕನ ಅನುಮತಿಯಿಲ್ಲದೆ ಆತ ಅದನ್ನು ಮಾರುವಂತಿಲ್ಲ. ಜನತೆಯ ಮಾಲಕತ್ವದ ಹಕ್ಕು ಅವರ ಚುನಾಯಿತ ಪ್ರತಿನಿಧಿಗಳಿರುವ ಸಂಸತ್ತಿನ ಮೂಲಕ ಚಲಾಯಿಸಲ್ಪಡುತ್ತದೆ. ಈ ಮೂಲಭೂತ ಸಂಗತಿಯನ್ನೇ ವಾಜಪೇಯಿ ಸರ್ಕಾರ ಬುಡಮೇಲು ಮಾಡಹೊರಟಿತ್ತು.

ಶೌರಿಯ ಎಗರಾಟ

ಸಹಜವಾಗಿಯೇ ಶೇರು ಮಾರಾಟ ಮಂತ್ರಿ (ಅಥವಾ ತಪ್ಪ ಮಾಹಿತಿ ನೀಡುವ ಮಂತ್ರಿಯೋ?) ಅರುಣ್ ಶೌರಿ ಈ ತೀರ್ಪು ಕೇಳಿ ಎಗರಾಡುತ್ತಿದ್ದಾರೆ. ಇಡೀ ಶೇರು ಮಾರಾಟದ ಪ್ರಕ್ರಿಯೆಯೇ ಇದರಿಂದ ಹಳಿ ತಪ್ಪುತ್ತದಂತೆ. ಹಾಗಾಗುವುದಿದ್ದರೆ ಅದರಿಂದ ದೇಶಕ್ಕೆ, ಜನತೆಗೆ ಒಳ್ಳೆಯದೇ. ಕಳೆದ ಐವತ್ತು ವರ್ಷಗಳಿಂದ ಶ್ರಮವಹಿಸಿ ಸೃಷ್ಟಿಸಿದ ಬೆಲೆ ಬಾಳುವ ರಾಷ್ಟ್ರೀಯ ಆಸ್ತಿಗಳನ್ನು ದೇಶೀ, ವಿದೇಶಿ ಖಾಸಗಿ ಬಂಡವಾಳಿಗರಿಗೆ ಮೂರು ಕಾಸಿಗೆ ಮಾರುವ ಬದಲು ಅದನ್ನು ರಕ್ಷಿಸಿ, ಸಮಾಜಕ್ಕೆ ಅವುಗಳಿಂದ ಇನ್ನೂ ಹೆಚ್ಚಿನ ಪ್ರಯೋಜನ ಸಿಗುವಂತೆ ಹೇಗೆ ಮಾಡುವುದು ಎಂಬ ಬಗ್ಗೆ ಆರೋಗ್ಯಕರ ಚರ್ಚೆ ನಡೆದರೆ ಒಳ್ಳೆಯದು.

ಎರಡನೆಯದಾಗಿ, ಸುಪ್ರೀಂಕೋರ್ಟ್‌ನ ಈ ತೀರ್ಪಿನಿಂದಾಗಿ ಸಂಸತ್ತಿನ ವಿಧಾನಮಂಡಲದ ಶಾಸನಗಳ ಮೂಲಕ ರಚನೆಗೊಂಡ ಎಲ್ಲಾ ಸಾರ್ವಜನಿಕ ವಲಯದ ಉದ್ದಿಮೆಗಳನ್ನು ತಟ್ಟುತ್ತದೆ ಎಂಬುದು ಆತನ ಅಳಲು. ಇದು ಕೂಡಾ ದೇಶಕ್ಕೆ ಒಳಿತುಂಟು ಮಾಡುವ ಸಂಗತಿಯೇ. ಏಕೆಂದರೆ ದೇಶದ ಆಸ್ತಿಗಳ ಅಭೂತಪೂರ್ವ ಲೂಟಿ ಇದರಿಂದ ತಪ್ಪುತ್ತದೆ. ಆದರೆ ಅರುಣ್ ಶೌರಿಗೆ ಇದು ಬೇಸರದ ಸಂಗತಿ.

ಈ ತೀರ್ಪಿನ ಹಿನ್ನೆಲೆಯಲ್ಲಿ ಬಾಲ್ಕೊ, ಮಾರುತಿ ಉದ್ಯೋಗ್ ಖಾಸಗೀಕರಣದ

ಸಿಪಿಐ(ಎಂ) ನಿಲುವನ್ನು ಎತ್ತಿಹಿಡಿದ ತೀರ್ಪು

ಪುನರ್ವಿಮರ್ಶೆಯಾಗಬೇಕಾದೀತಂತೆ. ಅರುಣ್ ಶೌರಿ ನಿಜವಾಗಿಯೂ ಇದನ್ನು ಮಾಡಿದರೆ ಬಹಳ ಒಳ್ಳೆಯದು. ಏಕೆಂದರೆ ಬಾಲ್ಕೊ, ಮಾಡರ್ನ್ ಫುಡ್‌ಗಳಂತೂ ನಾಚಿಕೆಗೇಡಿನ ಮಾರಾಟಗಳು.

ಕೊನೆಯದಾಗಿ ಸುಪ್ರೀಂಕೋರ್ಟ್‌ನ ಈ ತೀರ್ಪಿನಿಂದ ದೇಶದ ಹಣಕಾಸು ನಿರ್ವಹಣೆ ತಲೆಕೆಳಗಾಗುತ್ತದಂತೆ. ಈ ವರ್ಷದ ಬಜೆಟ್‌ನಲ್ಲಿ 13200 ಕೋಟಿ ರೂ. ಈ ರೀತಿಯ ಶೇರು ಮಾರಾಟದಿಂದ ಬರುತ್ತದೆ ಎಂದು ಅಂದಾಜು ಮಾಡಲಾಗಿತ್ತು. ಈ ಹಣ ಮುಖ್ಯವಾಗಿ ಈ ಎರಡು ಕಂಪನಿಗಳ ಶೇರುಗಳ ಮಾರಾಟದಿಂದ ಬರಬೇಕಾಗಿತ್ತು. ಆದರೆ ಈಗ ಅದು ಬರುವುದಿಲ್ಲವೆಂದಾದರೆ ಸರ್ಕಾರದ ಹಣಕಾಸು ಕೊರತೆ ಅಪ್ಪರಮಟ್ಟಿಗೆ ಏರುತ್ತದೆಯಂತೆ.



ಇದೊಂದು ಅತ್ಯಂತ ಖೋಟಾ ತರ್ಕ. ಈ ಹಿಂದೆ ನಾವು ಚರ್ಚಿಸಿದಂತೆ ಸರಕಾರದ ದೈನಂದಿನ ಖರ್ಚು ಪೂರೈಸಲು ಈ ಸಾರ್ವಜನಿಕ ಆಸ್ತಿಗಳ ಮಾರಾಟ ಆರ್ಥಿಕ ದೃಷ್ಟಿಯಿಂದಲೂ ಸಾಮಾನ್ಯ ದೃಷ್ಟಿಯಿಂದಲೂ ಮೂರ್ಖತನ. ಒಬ್ಬ ರೈತ ತನ್ನ ದಿನದ ಖರ್ಚಿಗೆ ಜಮೀನನ್ನು ಮಾರುತ್ತಾ ಬಂದಂತೆ. ಕೊನೆಗೆ ಮಾರಲು ಏನೂ ಉಳಿದಿರುವುದಿಲ್ಲ. ಆಗೇನು? 1991 ರಿಂದ 2000 ರ ನಡುವೆ ರಾಷ್ಟ್ರೀಯ ಆಸ್ತಿಗಳ ಮಾರಾಟದಿಂದ ಸರ್ಕಾರಕ್ಕೆ 26148 ಕೋಟಿ ರೂ.ಗಳು ಬಂದವು. ಆದರೆ ಇದರಲ್ಲಿ ಒಂದು ಪೈಸೆಯೂ ಸಾಮಾಜಿಕ, ಆರ್ಥಿಕ ರಚನೆಗೆ ಹೋಗಲಿಲ್ಲ. ಕೇವಲ ಸರ್ಕಾರದ ಹಣಕಾಸು ಕೊರತೆ ಭರ್ತಿ ಮಾಡಲು ಹೋಯಿತು!

ಏನು ಅರ್ಥ? : ಇಷ್ಟೇ ಅಲ್ಲ, ಕಳೆದ ಕೆಲವು ವರ್ಷಗಳಲ್ಲಿ ಬಿಪಿಸಿಎಲ್ ನ ಒಟ್ಟು ವ್ಯವಹಾರ 42294 ಕೋಟಿ ರೂ. ಅದು ತೆತ್ತ ಅಬಕಾರಿ ಸುಂಕ 10513 ಕೋಟಿ ರೂ. ಅದೇ ರೀತಿ ಹೆಚ್‌ಪಿಸಿಎಲ್ ವ್ಯವಹಾರ 45286 ಕೋಟಿ ರೂ. ತೆತ್ತ ಅಬಕಾರಿ ಸುಂಕ 11246 ಕೋಟಿ ರೂ. ಅಂದರೆ **ಇವೆರಡೇ ಸಾರ್ವಜನಿಕ ವಲಯದ ಕಂಪನಿಗಳು ಸೇರಿ ಮಾಡಿದ ವ್ಯವಹಾರ 87580 ಕೋಟಿ ರೂ. ಮತ್ತು ಅದರಿಂದ ಸರಕಾರದ ಬೊಕ್ಕಸಕ್ಕೆ ಬಂದದ್ದು 21759 ಕೋಟಿ ರೂ.** ಈಗ ಖಾಸಗಿ ವಲಯದ ಉದಾಹರಣೆ ತಗೊಳ್ಳೋಣ. ರಿಲೆಯನ್ಸ್, ಗ್ರಾಸಿಮ್, ಬಜಾಜ್ ಆಟೋ, ಟಾಟಾ ಸ್ಟೀಲ್, ಸ್ಟೈರ್ಲೈಟ್, ಕಾಲ್ಗೇಟ್, ಪಾಮೋಲಿವ್, ಎಲ್ ಅಂಡ್ ಟಿ, ರೇಮಂಡ್ ಮತ್ತು ಗ್ಲಾಕ್ಸೋದ **ಒಟ್ಟು ವ್ಯವಹಾರ ಇದೇ ಅವಧಿಯಲ್ಲಿ 88157 ಕೋಟಿ ರೂ. (ಅಂದರೆ ಮೇಲೆ ಹೇಳಿದ ಎರಡು ಸಾರ್ವಜನಿಕ ವಲಯದ ಕಂಪನಿಗಳಷ್ಟು) ಆದರೆ ಇವು ಒಟ್ಟಾಗಿ ತೆತ್ತ ಅಬಕಾರಿ ಸುಂಕ ಕೇವಲ 6840 ಕೋಟಿ ರೂ.** ಸರ್ಕಾರದ ಬೊಕ್ಕಸಕ್ಕೆ ಬಂದದ್ದು ಇಷ್ಟೇ. ಹೀಗೆ ಸರ್ಕಾರದ ಬೊಕ್ಕಸಕ್ಕೆ ಅಪಾರ ಹಣ ತರುತ್ತಿರುವ, ವರ್ಷ-ವರ್ಷ ಹೆಚ್ಚು ಹಣ ತರುತ್ತಿರುವ ಈ ಎರಡು ಸಾರ್ವಜನಿಕ ವಲಯದ ಕಂಪನಿಗಳನ್ನು ಮಾರುವುದೆಂದರೆ ಏನು ಅರ್ಥ?

ಖಾಸಗೀಕರಣದ ಪ್ರಯತ್ನದ ಇನ್ನೂ ಕೆಟ್ಟ ಅಂಶವೆಂದರೆ ಹೆಚ್‌ಪಿಸಿಎಲ್‌ನ್ನು ಅಂಬಾನಿಗಳ ರಿಲೆಯೆನ್ಸ್ ಗೆ ಮಾರುವ ಹುನ್ನಾರವಿದ್ದರೆ, ಬಿಪಿಸಿಎಲ್‌ನ್ನು ಅದೇ ಹಳೆಯ ವಿದೇಶಿ ಕಂಪನಿ ಬರ್ಮಾಶೆಲ್‌ಗೆ ಮಾರುವ ಹುನ್ನಾರವಿತ್ತು. ಈ ಸರ್ಕಾರ ರಾಷ್ಟ್ರೀಯ ಹಿತಾಸಕ್ತಿಗೆ ಎಷ್ಟು ಬದ್ಧವಾಗಿದೆ ಎನ್ನುವುದಕ್ಕೆ ಇನ್ನೇನಾದರೂ ಬೇಕೆ?

ನಮ್ಮ ರಾಷ್ಟ್ರೀಯ ಆಸ್ತಿಗಳ ಲೂಟಿಯನ್ನು ಮುಂದುವರೆಸಲು, ಈಗ ಬಂದಿರುವ ತಡೆಯಿಂದ ತಪ್ಪಿಸಿಕೊಳ್ಳಲು ಅರುಣ್ ಶೌರಿಯ ಮಂತ್ರಾಲಯ ಮತ್ತು ಈ ಸರ್ಕಾರ ಖಂಡಿತಾ ಪ್ರಯತ್ನಿಸುತ್ತದೆ. ಆದರೆ ಇಂತಹ ಬುಡಮೇಲು ಪ್ರಯತ್ನಗಳನ್ನು ಎಲ್ಲಾ ದೇಶಪ್ರೇಮಿಗಳು ಸೇರಿಕೊಂಡು ಬುಡಮೇಲು ಮಾಡಬೇಕಾಗಿದೆ.

ಮೋದಿ ಸರ್ಕಾರಕ್ಕೀಗ ಸುಪ್ರೀಂಕೋರ್ಟ್ ಚಾಟಿಯೇಟು

ಗುಜರಾತಿನ ನರೇಂದ್ರ ಮೋದಿ ಸರ್ಕಾರ ಕುಖ್ಯಾತಿಯ ಒಂದು ಅಭೂತಪೂರ್ವ ದಾಖಲೆಯನ್ನೇ ನಿರ್ಮಿಸ ಹೊರಟಂತಿದೆ. ಬಹುಶಃ ಸ್ವಾತಂತ್ರ್ಯ ಭಾರತದಲ್ಲಿ ಎಲ್ಲಾ ಸಾಂವಿಧಾನಿಕ ಸಂಸ್ಥೆಗಳೊಡನೆ ತಿಕ್ಕಾಟಕ್ಕಿಳಿದ ಏಕೈಕ ರಾಜ್ಯ ಸರ್ಕಾರ ಅದು. ಮೊದಲು ಚುನಾವಣೆ ಆಯೋಗದಿಂದ, ನಂತರ ರಾಷ್ಟ್ರೀಯ ಮಾನವ ಹಕ್ಕು ಆಯೋಗದಿಂದ, ರಾಷ್ಟ್ರೀಯ ಅಲ್ಪಸಂಖ್ಯಾತರ ಆಯೋಗದಿಂದ, ಈಗ ಸ್ವತಃ ದೇಶದ ಸರ್ವೋಚ್ಚ ನ್ಯಾಯಾಲಯದಿಂದಲೇ.

ಬೆಸ್ಟ್ ಬೇಕರಿ ಮೊಕದ್ದಮೆಯಲ್ಲಿ ಆಪಾದಿತರನ್ನೆಲ್ಲಾ ಖುಲಾಸೆ ಮಾಡಿದ ಬಗ್ಗೆ ರಾಜ್ಯ ಸರ್ಕಾರಕ್ಕೆ ಮುಗ್ಧರನ್ನು ರಕ್ಷಿಸಿ, ತಪ್ಪಿತಸ್ಥರನ್ನು ಶಿಕ್ಷಿಸಲು ಸಾಧ್ಯವಿಲ್ಲವಾದರೆ ಅದು ಅಧಿಕಾರ ಬಿಡುವುದೇ ಒಳ್ಳೆಯದು ಎಂದು ಸುಪ್ರೀಂಕೋರ್ಟ್ ಉದ್ಗಾರ ಮಾಡಿದೆ. ಯಾವುದೇ ರಾಜ್ಯ ಸರ್ಕಾರಕ್ಕೆ ಇದಕ್ಕಿಂತ ತೀವ್ರ ಟೀಕೆ ಸಾಧ್ಯವೇ? ರಾಜ್ಯ ಸರ್ಕಾರ ಹೈಕೋರ್ಟ್‌ನಲ್ಲಿ ಸಲ್ಲಿಸಿದ ಮನವಿ ನ್ಯಾಯದ ಅಪಹಾಸ್ಯ, ಕಣ್ಣೊರೆಸುವ ತಂತ್ರ ಎಂದೂ ಅದು ಟಿಪ್ಪಣಿ ಮಾಡಿದೆ.

ಸ್ವಾಭಿಮಾನಿಯಾದ ಯಾವುದೇ ಮುಖ್ಯಮಂತ್ರಿಗೆ ಇಷ್ಟು ಸಾಕಾಗಬೇಕಿತ್ತು. ನ್ಯಾಯಾಲಯದ ಸಲಹೆಯಂತೆ ಆತ ಅಧಿಕಾರ ಬಿಡಬೇಕಾಗಿತ್ತು. ಆದರೆ ಬಿಜೆಪಿ-ಎನ್‌ಡಿಎ ಮುಖಂಡರಿಂದ ಇದನ್ನು ನಿರೀಕ್ಷಿಸುವಂತಿಲ್ಲವಲ್ಲ, ನರೇಂದ್ರ ಮೋದಿಯಿಂದಲಂತೂ ಖಂಡಿತಾ ಇಲ್ಲ. ಆತನ ಅಧಿಕಾರದಡಿ ನಡೆದ ಪ್ರಭುತ್ವ ಪ್ರಾಯೋಜಿತ ನರಹತ್ಯಾಕಾಂಡ ಆತ ಯಾವುದೇ ನೀತಿ, ಮೌಲ್ಯಗಳಿಲ್ಲದ ಒಬ್ಬ ವ್ಯಕ್ತಿ ಎಂಬುದನ್ನು ದೃಢಪಡಿಸಿದೆ. ಆರ್‌ಎಸ್‌ಎಸ್/ ಬಿಜೆಪಿ ಮಂದಿ ತಾವು ಪರಮ ರಾಮಭಕ್ತರೆಂದು ಹೇಳಿಕೊಳ್ಳುತ್ತಾರೆ. ಪ್ರತಿಯೊಬ್ಬ ಭಕ್ತನಿಗೆ ತಾನು ಮಾಡುವ ತಪ್ಪುಗಳಿಗೆ ಶಿಕ್ಷೆ ದೊರೆಯುತ್ತದೆ ಎಂಬ ಭಯ ಇರುತ್ತದೆ. ಆದರೆ ಈ ಮಂದಿಗೆ ಅಂತಹ ಏನೂ ಭಯವಿಲ್ಲ. ಏಕೆಂದರೆ ಅವರ ಭಕ್ತಿ ಕೇವಲ ನಟನೆ. ಆದ್ದರಿಂದ ದೇವರ ಹೆಸರಲ್ಲಿ ಅವರು ಅತಿ ಹೀನ ಅಪರಾಧ ಎಸಗಬಲ್ಲರು!

ದೇಶದ ಇನ್ನೊಂದು ತುದಿಯಿಂದ, ಒರಿಸ್ಸಾದಿಂದ ದಾರಾಸಿಂಗ್ ಮತ್ತು ಕಂಪನಿಯ ಮೇಲಿನ ಮೊಕದ್ದಮೆಯ ತೀರ್ಪು ಬಂದಿದೆ. ಅವರು ಕ್ರಿಶ್ಚಿಯನ್ ಮಿಶಿನರಿ ಗ್ರಹಾಂ ಸ್ಟೈನ್ಸ್ ಮತ್ತು ಆತನ ಚಿಕ್ಕ ಮಕ್ಕಳನ್ನು ಜೀವಂತ ಭಸ್ಮ ನಡೆಸಿದ ಅಪರಾಧ ಎಸಗಿದ್ದಾರೆಂದು ಸಾಬೀತಾಗಿದೆ. ಆರ್‌ಎಸ್‌ಎಸ್



ಪಡೆಗಳು ಈ ತೀರ್ಪಿನ ವಿರುದ್ಧ ಕೊಟ್ಟ ಬಂದ್ ಕರೆಗೆ ಜನ ಏನೇನೂ ಸ್ಪಂದಿಸಿಲ್ಲ ಎಂದು ವರದಿಯಾಗಿದೆ. ಕೇವಲ ತಿಕ್ಕಾಟ, ಗಲಭೆಗಳಿಂದಲೇ ಉದ್ಧಾರವಾಗುವ ಈ ಪಡೆಗಳ ಭಾವೋದ್ರೇಕಗೊಳಿಸುವ ಪ್ರಯತ್ನಗಳಿಂದ ಜನ ಬೇಸತ್ತು ಹೋಗಿದ್ದಾರೆ.

ಆದರೂ ಕೂಡಾ ಆರ್‌ಎಸ್‌ಎಸ್ ಹಾವು ಅಯೋಧ್ಯಾ ಪ್ರಶ್ನೆಯ ಮೇಲೆ ತನ್ನ ಹೆಡೆಯೆತ್ತುತ್ತಲೇ ಇದೆ. ವಿಹೆಚ್‌ಪಿ ಅಕ್ಟೋಬರ್ 15 ರಿಂದ ಒಂದು ರಾಷ್ಟ್ರೀಯ ಆಂದೋಲನ ನಡೆಸುವುದಾಗಿ ಪ್ರಕಟಿಸಿದೆ. ಎಎಸ್‌ಐ ವರದಿಯನ್ನು ಇನ್ನೂ ನ್ಯಾಯಾಲಯ ಒಪ್ಪಿಲ್ಲವಾದರೂ ಅದನ್ನೇ ಆಧಾರ ಮಾಡಿಕೊಂಡು ವಿವಾದಿತ ಸ್ಥಳದಲ್ಲಿ ದೇವಸ್ಥಾನ ಕಟ್ಟಲು ಅನುಮತಿ ನೀಡುವ ಕೇಂದ್ರೀಯ ಶಾಸನವನ್ನು ತರಬೇಕೆಂಬುದು ಅದರ ಒತ್ತಾಯ. ಅಷ್ಟೇ ಅಲ್ಲ, ಅಯೋಧ್ಯೆಯ 'ಪರಿಹಾರ' ದ ನಂತರ ಕಾಶಿ, ಮಥುರಾ ವಿವಾದಗಳನ್ನು ಕೈಗೆತ್ತಿಗೊಳ್ಳುವುದಾಗಿ ಬೆದರಿಸಿದ್ದಾರೆ. ನ್ಯಾಯಾಲಯ ಈ ವಿಷಯಗಳನ್ನು ಪರಿಶೀಲಿಸುತ್ತಿರುವಾಗಲೇ ಈ ಜನ ಕಾನೂನನ್ನು ತಮ್ಮ ಕೈಗೆ ತೆಗೆದುಕೊಳ್ಳುವ ಈ ಪ್ರಯತ್ನಗಳನ್ನು ಬಿಜೆಪಿ ಒಂದು ರಾಜಕೀಯ ಪಕ್ಷವಾಗಿ ವಿರೋಧಿಸಬೇಕಿತ್ತು. ಆದರೆ ಅದು ಮತ್ತೆ ಕೋಮುಭಾವೋದ್ರೇಕಗಳನ್ನು ಬಡಿದೆಬ್ಬಿಸುವ ಈ ಕಸರತ್ತುಗಳ ಭಾಗವೇ ಆಗಿದೆ.

ಜನಗಳ ರಾಜಕೀಯ ಬೆಂಬಲ ಪಡೆಯಬಹುದಾದ ಒಂದೇ ಒಂದು ಪ್ರಶ್ನೆ ಈಗ ತನ್ನ ಬಳಿಯಿಲ್ಲ ಎಂಬ ತೀರ್ಮಾನಕ್ಕೆ ಆರ್‌ಎಸ್‌ಎಸ್/ ಬಿಜೆಪಿ ಬಂದಿದೆಯೆಂಬುದು ಇದರಿಂದ ಸ್ಪಷ್ಟ. ತನ್ನ ದುರಾಡಳಿತ ಶೈಲಿ ಮತ್ತು ಜನ-ವಿರೋಧಿ ನೀತಿಗಳಿಂದಾಗಿ ಅದು ಜನಗಳಲ್ಲಿ ಅಸಂತೃಪ್ತಿಯನ್ನು ಉಂಟು ಮಾಡಿದೆ. ಇದು ದಿನೇ ದಿನೇ ಹೆಚ್ಚುತ್ತಿದೆ. ಆದ್ದರಿಂದ ಅದಕ್ಕೆ ಕಾಣುವ ಆಯ್ಕೆ ಒಂದೇ - ಕಳೆದ ವರ್ಷ ಗುಜರಾತಿನಲ್ಲಿ ಮಾಡಿದಂತೆ ಕೋಮುಭಾವನೆಗಳನ್ನು ಬಡಿದೆಬ್ಬಿಸಿ ಚುನಾವಣಾ ಲಾಭ ಗಿಟ್ಟಿಸುವುದು. ಅವರ ಚುನಾವಣಾ ಪ್ರಯೋಜನಕ್ಕಾಗಿ ಇಡೀ ದೇಶ ಮತ್ತು ಜನತೆಯನ್ನು ಮತ್ತೊಮ್ಮೆ ಕೋಮು ಗಲಭೆಗಳಿಗೆ ತುತ್ತಾಗಿಸುವ ಪ್ರಯತ್ನದಲ್ಲಿ ಅವರಿದ್ದಾರೆ. ಇದರ ಪರಿಣಾಮ ವಿನಾಶಕಾರಿ.

ಇದಕ್ಕೆ ಅವಕಾಶ ಕೊಡಬಾರದು. ನಮ್ಮ ಭಾರತವನ್ನು ರಕ್ಷಿಸಲು ಈ ಆರ್‌ಎಸ್‌ಎಸ್/ ಬಿಜೆಪಿ ಇತ್ಯಾದಿಗಳ ದುಷ್ಟ ಪ್ರಯತ್ನಗಳನ್ನು ಪ್ರತಿರೋಧಿಸಬೇಕು.

ರೈತರ ಆತ್ಮಹತ್ಯೆ ಮತ್ತು ಪ

ಕರ್ನಾಟಕ ರಾಜ್ಯ ಸರ್ಕಾರ ರೈತರ ಆತ್ಮಹತ್ಯೆಗೆ ಪರಿಹಾರಕ್ಕಾಗಿ ಸಮಾಲೋಚನಾ ಸಭೆ ನಡೆಸಿ ರೈತರ ಜಂಗಾಭಲವೇ ಹುಡುಗುವಂತೆ ಮಾಡಿತು. ಇಂತಹ ಸಂದರ್ಭದಲ್ಲಿ ಕರ್ನಾಟಕ ಪ್ರಾಂತ ರೈತ ಸಂಘವು ನಾಡಿನ ವಿವಿಧ ಕ್ಷೇತ್ರಗಳ ಪರಿಣಿತರ ದುಂಡು ಮೇಜಿನ ಸಭೆ ನಡೆಸಿ, ರೈತರ ಆತ್ಮಸ್ಥೈರ್ಯ ಹೆಚ್ಚಿಸುವ ಶ್ಲಾಘನೀಯ ಕಾರ್ಯ ನಡೆಸಿತು. ಅಲ್ಲಿ ಮೂಡಿಬಂದ ಅಭಿಪ್ರಾಯಗಳು ಇಲ್ಲಿವೆ.

ರೈತರ ಆತ್ಮಹತ್ಯೆಗಳು, ರೈತರಲ್ಲಿ ಇತ್ತೀಚೆಗೆ ಹೆಚ್ಚಾಗಿರುವ ದುಶ್ಚಟಗಳಿಂದ ನಡೆಯುತ್ತವೆಂದು, ನಮ್ಮ ದೇಶ ಮತ್ತು ರಾಜ್ಯದಲ್ಲಿ ಸಾಮಾನ್ಯವಾಗಿ ನಡೆಯುತ್ತಿರುವ ಆತ್ಮಹತ್ಯೆಗಳ ಸಂಖ್ಯೆಗೆ ಹೋಲಿಸಿದರೆ ಈ ಸಂಖ್ಯೆ ಭಾರಿ ಹೆಚ್ಚೇನು ಅಲ್ಲವೆಂದು, ಈ ಹಿಂದೆಯೂ ಆತ್ಮಹತ್ಯೆಗಳು ನಡೆದಿದ್ದವು, ಈಗಲೂ ನಡೆಯುತ್ತಿವೆಯೆಂದರು ಒಬ್ಬ ಮುತ್ಸದ್ದಿ. ಆದರೆ ಕೆಲವರು ಈ ಬಗ್ಗೆ ರಾಜಕೀಯ ಲಾಭ ಪಡೆಯಲು ಅಪಪ್ರಚಾರ ನಡೆಸುತ್ತಿದ್ದಾರೆಂದು, ಸರ್ಕಾರ ನೀಡುತ್ತಿರುವ ಪರಿಹಾರದಿಂದಲೂ ಈ ಆತ್ಮಹತ್ಯೆಗಳು ಮತ್ತಷ್ಟು ಹೆಚ್ಚಳವಾಗುತ್ತಿವೆಯೆಂದು ಸರ್ಕಾರಗಳು, ಸರ್ಕಾರಿ ಪೋಷಿತ ಅಧಿಕಾರಿಗಳು, ಬುದ್ಧಿಜೀವಿಗಳಿಂದ ಭಾರೀ ವ್ಯವಸ್ಥಿತವಾದ ಪ್ರಚಾರ ನಡೆಯುತ್ತಿದೆ. ಇದನ್ನು ಸಾಮಾನ್ಯ ಜನ, ರೈತರು ನಂಬುವಂತೆ ಮಾಡಲು, ವಿಚಾರಸಂಕಿರಣಗಳು, ಸಭೆ, ಸಮಾವೇಶಗಳು ನಡೆಯುತ್ತಿವೆ.

ಮೊನ್ನೆ ಅಂದರೆ 15.09.2003 ರಂದು ನಡೆದ ರಾಜ್ಯ ಸರ್ಕಾರಿ ಪ್ರಾಯೋಜಿತ ವಿಚಾರಸಂಕಿರಣದಲ್ಲಿ ಕೃಷಿ ತಜ್ಞರೊಬ್ಬರು ಕೃಷಿ ಉತ್ಪನ್ನಗಳ ಬೆಲೆ ಕುಸಿತ, ಸಾಲದ ಬಾಧೆಯಂತಹ ಅಂಶಗಳಿಗೂ, ರೈತರ ಆತ್ಮಹತ್ಯೆಗಳಿಗೂ ಸಂಬಂಧವೇ ಇಲ್ಲವೆಂದು ಘೋಷಣೆ ಮಾಡಿದ್ದಾರೆ.

ರಾಜ್ಯದ ಮುಖ್ಯಮಂತ್ರಿಯವರು ರೈತರ ಆತ್ಮಹತ್ಯೆಗಳು, ಬರಗಾಲದಲ್ಲಿಯೂ ನಡೆಯುತ್ತಿವೆ, ಬೆಳೆಗಳು ಸಮೃದ್ಧವಾಗಿ ಬಂದ ವರ್ಷದಲ್ಲಿಯೂ ನಡೆಯುತ್ತಿವೆ. ಇದು ಹೇಗೆ ಎಂದು ಗೊತ್ತಾಗುತ್ತಿಲ್ಲವೆಂದು, ಭಾರಿ ಗೊಂದಲಕ್ಕೆ ಸಿಕ್ಕಿದವರಂತೆ ವರ್ತಿಸುತ್ತಾ, ಬೇರೆಯುವರನ್ನು ಗೊಂದಲಕ್ಕೆ ಈಡು ಮಾಡಲು ಪ್ರಯತ್ನಿಸುತ್ತಿದ್ದಾರೆ.

ಈ ಪ್ರಯತ್ನ, ರೈತರ ಆತ್ಮಹತ್ಯೆಗಳಿಗೆ ಕಾರಣವಾಗಿರುವ ನೈಜ ಸಮಸ್ಯೆಗಳನ್ನು ಮುಚ್ಚಿಡುವ ಪ್ರಜ್ಞಾಪೂರ್ವಕ ಪ್ರಯತ್ನವೆಂದು ನಾವಂತೂ ಭಾವಿಸಿದ್ದೇವೆ. ಈ ಆಳುವ ಜನರ ಜಾಣತನ ಯಾವ ಮಟ್ಟಕ್ಕೆ ಹೋಗಿದೆಯೆಂದರೆ, ಇತ್ತೀಚೆಗೆ ಬೆಂಗಳೂರಿಗೆ ಆಗಮಿಸಿದ್ದ ಭಾರತ ಸರ್ಕಾರದ ಕೃಷಿ ಸಚಿವ ರಾಜಾನಾಥ ಸಿಂಗ್‌ರವರು ರಾಜ್ಯದಲ್ಲಿ ನಡೆಯುತ್ತಿರುವ ರೈತರ ಆತ್ಮಹತ್ಯೆಗಳಿಗೆ ನಿಮ್ಮ ಪರಿಹಾರವೇನು? ಎಂದು ಮಾಧ್ಯಮದ ಗೆಳೆಯರು ಪ್ರಶ್ನಿಸಿದಾಗ, ರೈತರ ಆತ್ಮಹತ್ಯೆ ಪ್ರಕರಣಗಳು ನಮ್ಮ ಗಮನಕ್ಕೆ ಬಂದಿಲ್ಲವೆಂದರು. ವಿಚಿತ್ರವೆಂದರೆ ಬಿಜೆಪಿ ಮಹಾನಾಯಕರು, ಮಾಜಿ ಕೇಂದ್ರ ಸಚಿವರುಗಳು ರಾಜ್ಯದಲ್ಲಿ ಆತ್ಮಹತ್ಯೆ ಪ್ರಶ್ನೆ ಎತ್ತಿ ಆಗಾಗ ಬೊಬ್ಬಿಡುತ್ತಿರುತ್ತಾರೆ!

ರೈತರಿಗೆ ಕಷ್ಟ-ಕಾರ್ಪಣ್ಯಗಳು ಹೊಸದೇನು ಅಲ್ಲ. ಬಿಸಿಲು, ಮಳೆ, ಚಳಿ, ಬರಗಾಲ, ಪ್ರವಾಹಗಳನ್ನು ಎದುರಿಸುತ್ತಲೇ ಬದುಕಿದ್ದಾರೆ ಮತ್ತು ಬೇರೆಯುವರು ಬದುಕಲು ಅತಿ ಅಗತ್ಯವಿರುವ 'ಅನ್ನ' ಬೆಳೆಯುತ್ತಿದ್ದಾರೆ. ಹಸಿವಿನಿಂದ ಜನ ಸಾಯುತ್ತಿದ್ದರೂ, ಇವರ ಹಸಿವನ್ನು ನೀಗಿಸಲು ಅಗತ್ಯವಿರುವ ಸುಮಾರು ಐದು ಕೋಟಿ ಟನ್ ಆಹಾರವನ್ನು ರೈತರು ಬೆಳೆದಿದ್ದಾರೆ. ಆದರೆ ಈ ಆಹಾರ ಸರ್ಕಾರದ ಗೋದಾಮುಗಳಲ್ಲಿ ಇದೆ ಎಂಬುದು ಬೇರೆ ವಿಚಾರ. ಹೀಗೆ ದೇಶಕ್ಕೆ ಅಗತ್ಯವಿರುವ ಆಹಾರ ಮತ್ತಿತರೆ ಎಲ್ಲಾ ಕೃಷಿ ಉತ್ಪನ್ನಗಳನ್ನು ಉತ್ಪಾದಿಸುತ್ತಿರುವ ರೈತ, ಹಲವಾರು ಕಷ್ಟಗಳನ್ನು ಎದುರಿಸಿದ್ದಾನೆ, ನಿಜ. ಆದರೆ ಅವನು ಆತ್ಮಹತ್ಯೆಗೆ ಎಂದೂ ಶರಣಾಗಿರಲಿಲ್ಲ. ಈ ಆತ್ಮಹತ್ಯೆಗಳು 1990 ರ ದಶಕದಲ್ಲಿ ಉದ್ಭವಿಸಿದ ಪ್ರಕರಣಗಳಾಗಿವೆ.

ಮುಖ್ಯವಾಗಿ 1994 ರ ಗ್ಯಾಟ್ ಒಪ್ಪಂದ, 1995 ರ ವಿಶ್ವ ವ್ಯಾಪಾರಿ ಸಂಘಟನೆ (WTO)ಯ ಅಸ್ತಿತ್ವ ಮತ್ತು ವಿಶ್ವ ಬ್ಯಾಂಕ್ (WB) ಅಂತರ ರ‍್ರಾಷ್ಟ್ರೀಯ ಹಣಕಾಸು ಸಂಸ್ಥೆ(IMF) ನಿರ್ದೇಶಿತ ಜಾಗತೀಕರಣ, ಉದಾರೀಕರಣ ಮತ್ತು ಖಾಸಗೀಕರಣದ ನೀತಿಗಳನ್ನು ಕೇಂದ್ರ ಮತ್ತು ನಮ್ಮ ರಾಜ್ಯ ಸರ್ಕಾರಗಳು ಜಾರಿ ಮಾಡುತ್ತಿರುವ ಪರಿಣಾಮವಾಗಿ, ದೇಶದ ಶೇ 76 ರಷ್ಟು ಜನರ ಜೀವನಾಧಾರವಾಗಿರುವ ಕೃಷಿರಂಗ ತೀವ್ರತರ ಬಿಕ್ಕಟ್ಟಿಗೆ ಸಿಕ್ಕಿದೆ.

1993-94 ರಲ್ಲಿ ಶೇ 33 ರಷ್ಟು ಇದ್ದ ಕೃಷಿ ರಂಗದಲ್ಲಿನ ಸಾರ್ವಜನಿಕ ಬಂಡವಾಳ ಹೂಡಿಕೆ ಈಗ ಸದ್ಯ ಶೇ 18 ಕ್ಕೆ ಇಳಿದಿದೆ. ಇದರ ಭಾಗವಾಗಿ ನೀರಾವರಿ ಯೋಜನೆಗಳ ಮೇಲಿನ ಬಂಡವಾಳ ಹೂಡಿಕೆ ಕಡಿತವಾಗಿ, ಈತನಕ ಕೇವಲ ಶೇ 35 ರಷ್ಟು ಭೂಮಿಯುನ್ನು ಮಾತ್ರ ನೀರಾವರಿ ಮಾಡಲಾಗಿದೆ. ಈಗಾಗಲೇ ಕೈಗೆತ್ತಿಕೊಂಡಿರುವ ಯೋಜನೆಗಳನ್ನು ಪೂರ್ಣಗೊಳಿಸಲು 10ನೇ ಪಂಚವಾರ್ಷಿಕ ಯೋಜನೆಯಲ್ಲಿ 70,000 ಕೋಟಿ ಮತ್ತು 11ನೇ ಯೋಜನೆಯಲ್ಲಿ 1,10,000 ಕೋಟಿ ಹೀಗೆ ಒಟ್ಟು 1,80,000 ಕೋಟಿ ರೂ.ಗಳು ಬೇಕಾಗಬಹುದೆಂದು ಅಂದಾಜು ಮಾಡಲಾಗಿದೆ. ಗ್ರಾಮೀಣ ಸರ್ಕಾರಿ ಸಾಲ ಸೌಲಭ್ಯದ ಜಾಲ ನಾಶವಾಗಿದೆ. ಈಗ ಸದ್ಯ ಶೇ. 24 ರಷ್ಟು ಮಾತ್ರ ಸಾಂಸ್ಥಿಕ ಸಾಲ ಲಭ್ಯವಾಗುತ್ತಿದ್ದು, ಶೇ. 76 ರಷ್ಟು ಜನ ಸಾಲಕ್ಕಾಗಿ ಖಾಸಗಿ ಬಡ್ಡಿ ಸಾಹುಕಾರರನ್ನ ಅವಲಂಬಿಸಬೇಕಾಗಿದೆ. ಇವುಗಳ ಜೊತೆಗೆ ವಿದ್ಯುತ್, ರಸಗೊಬ್ಬರ, ಬೀಜೋದ್ಯಮ ಇತ್ಯಾದಿ ಕ್ಷೇತ್ರಗಳಿಗೆ ನೀಡುತ್ತಿದ್ದ ಸಬ್ಸಿಡಿಗಳನ್ನು ಕಡಿತ ಮಾಡುತ್ತಾ, ಖಾಸಗಿಕರಣಗೊಳಿಸುತ್ತಿರುವ ಪರಿಣಾಮವಾಗಿ ಎಲ್ಲಾ ಕೃಷಿ ಸಲಕರಣೆಗಳು ವಿಪರೀತ ದುಬಾರಿಯಾಗಿವೆ.

ಆದರೆ, ಅದೇ ಸಮಯದಲ್ಲಿ ನಿಗದಿತ ಸಮಯಕ್ಕೆ ತೀರಾ ಮುಂಚಿತವಾಗಿ ಈಗ ಅಧಿಕಾರದಲ್ಲಿರುವ ಕೇಂದ್ರ ಸರ್ಕಾರ ಕೃಷಿ ಉತ್ಪನ್ನಗಳ ಮೇಲಿನ ಪ್ರಮಾಣಾತ್ಮಕ ನಿರ್ಬಂಧಗಳನ್ನು ತೆಗೆದು ಹಾಕಿ, ಆಮದು ಸುಂಕಗಳ ಕಡಿತ ಮಾಡಿ, ವಿದೇಶಗಳಿಂದ ಸಾವಿರಾರು ಕೃಷಿ ಉತ್ಪನ್ನಗಳು ದೇಶದೊಳಗೆ ಹರಿದುಬರುವಂತೆ ಮಾಡಿದೆ. ಇದರಿಂದ ನಮ್ಮ ರಾಜ್ಯದಲ್ಲಿ ರೇಷ್ಮೆ, ಹಾಲು, ತೊಗರಿ, ಸೂರ್ಯಕಾಂತಿ ಇತ್ಯಾದಿ ಎಣ್ಣೆ ಕಾಳುಗಳು, ಕಾಫಿ, ಟೀ, ಅಡಿಕೆ, ಕಬ್ಬು, ಹತ್ತಿ ಇತ್ಯಾದಿ ಕೃಷಿಗಳು ಭಾರಿ ಬಿಕ್ಕಟ್ಟಿಗೆ ಸಿಲುಕಿವೆ. ಅಮೆರಿಕಾ ಮತ್ತಿತರೆ ಶ್ರೀಮಂತ ರಾಷ್ಟ್ರಗಳಲ್ಲಿ ಇರುವ ಶೇ 50-70 ರಷ್ಟು ವಿಪರೀತ ಕೃಷಿ ಸಬ್ಸಿಡಿಗಳ ಫಲವಾಗಿ ಆ ದೇಶ ಕೃಷಿ ಉತ್ಪನ್ನಗಳು ತೀರ ಅಗ್ಗದ ದರದಲ್ಲಿ ನಮ್ಮ ಊರು ಕೇರಿಗಳಲ್ಲಿ ಲಭ್ಯವಾಗುತ್ತಿರುವ ಪರಿಣಾಮವಾಗಿ, ನಮ್ಮ ರೈತರ ಉತ್ಪನ್ನಗಳಿಗೆ ಕನಿಷ್ಟ ಬೆಲೆಗಳು ಸಿಗದೇ, ಮಾಡಿರುವ ಸಾಲಗಳನ್ನು ತೀರಿಸಲು ಸಾಧ್ಯವಾಗದೆ, ಮಾನ, ಸ್ವಾಭಿಮಾನ, ಲಜ್ಜೆ ಇರುವ ವ್ಯಕ್ತಿಗಳಾಗಿ ರೈತರು ಆತ್ಮಹತ್ಯೆಗೆ ಮೊರೆ ಹೋಗುತ್ತಿದ್ದಾರೆಂಬುದು ನಮ್ಮ ಅನುಭವ ಮತ್ತು ನಾವು ಪರಿಶೀಲಿಸಿದಾಗ ಕಂಡುಬಂದು ಸತ್ಯವಾಗಿದೆ.

ರೈತರ ಆತ್ಮಹತ್ಯೆಗಳಿಗೆ ಇಷ್ಟು ಸ್ಪಷ್ಟವಾದ ಕಾರಣಗಳ್ ಮೇಲುನೋಟಕ್ಕೆ ಗೋಚರಿಸುತ್ತಿದ್ದರೂ, ಗ್ಯಾಟ್ ಒಪ್ಪಂದಕ್ಕೆ ಸಹಿ ಮಾಡಿದ ಪಾಪಪ್ರಜ್ಞೆಯಿಂದ ಬಳಲುತ್ತಾ ರಾಜ್ಯದಲ್ಲಿ ಅಧಿಕಾರ ನಡೆಸುತ್ತಿರುವವರು ವಿಶ್ವ ವ್ಯಾಪಾರಿ ಸಂಘಟನೆ (WTO)ಯಿಂದ ಉಂಟಾಗಿರುವ ಅವಕಾಶಗಳನ್ನು ಹೇಗೆ ಬಳಸಿಕೊಂಡು ಕೃಷಿ ಅಭಿವೃದ್ಧಿ ಮಾಡಬಹುದೆಂದು ಡಾ. ಪ್ರೇಮಾನಾಥ್‌ರವರ ಆಯೋಗವನ್ನು ರಚಿಸಿ WTO ನೀತಿಗಳನ್ನು ಜಾರಿಗೊಳಿಸಲು ಅಗತ್ಯವಿರುವ ಧೋರಣೆಗಳನ್ನು ಜಾರಿ ಮಾಡಿದರು. ಈ ಎಲ್ಲದರ ಫಲವಾಗಿ ಕೃಷಿ ಬಿಕ್ಕಟ್ಟು ಮತ್ತಷ್ಟು ಬಿಗಡಾಯಿಸಿ ಆತ್ಮಹತ್ಯೆಗಳು ಉಲ್ಬಣಗೊಂಡಾಗ ಇವನ್ನು ತಡೆಯಲು ಡಾ. ವೀರೇಶ್‌ರವರ ಆಯೋಗವನ್ನು ಮಾಡಿದ್ದು, ಅವರು ನೀಡಿದ ರೈತವಿರೋಧಿ ಅವಮಾನವೀಯ ಶಿಫಾರಸ್ಸುಗಳು, ಅದರ ಪರಿಣಾಮಗಳು ಜಗಜ್ಜಾಹೀರವಾಗಿವೆ.

ಹೀಗೆ, WTO ನೀತಿಗಳನ್ನು ಮತ್ತಷ್ಟು ಸಮರ್ಥವಾಗಿ ಅನುಷ್ಠಾನಗೊಳಿಸುತ್ತಾ ಸಾಗಿದ ಸರ್ಕಾರಕ್ಕೆ, ಇತ್ತೀಚಿನ ಸಾಮೂಹಿಕ ಸರಣಿ ಆತ್ಮಹತ್ಯೆಗಳನ್ನು ಜೀರ್ಣಿಸಿಕೊಳ್ಳುವುದು ಕಷ್ಟವಾದಾಗ, ರಾಜಕೀಯ ಮತ್ತಿತರೆ ಅಂಶಗಳ ಗಮನದಲ್ಲಿಟ್ಟುಕೊಂಡು ರೈತರಿಗೆ ವಿಶೇಷ ಪ್ಯಾಕೇಜನ್ನು ಘೋಷಿಸಿತು. ಈ ಪ್ಯಾಕೇಜ್ ರೈತರ ಮೂಲ ಸಮಸ್ಯೆಗಳಿಗೆ ಸ್ಪಂದಿಸಲಿಲ್ಲವೆಂಬುದು ಬಹು ಸ್ಪಷ್ಟ. ಪರಿಸ್ಥಿತಿ ಹೀಗಿರುವಾಗ, ಇವರು, ಗ್ಯಾಟ್ ಒಪ್ಪಂದದ ನಂತರ ಅಸ್ತಿತ್ವಕ್ಕೆ ಬಂದಿರುವ ವಿ ವ್ಯಾಪಾರಿ ಸಂಘಟನೆ(WTO) ನೀತಿಗಳನ್ನು ಅ ನಿರೀಕ್ಷೆಗಿಂತ ವೇಗವಾಗಿ ಜಾರಿ ಮಾಡುತ್ತಿರು ಕೇಂದ್ರದ ಎನ್‌ಡಿಎ ಕೂಟದ ಜೊತೆ ಸೇರಿ, ರೈತ ಆತ್ಮಹತ್ಯೆಗಳಿಗೆ ಕಾರಣವಲ್ಲದ ಕಾರಣಗಳ ಹುಡುಕಲು ಶ್ರಮ ಪಡುತ್ತಿದ್ದಾರೆಂದು ನ ಅಭಿಪ್ರಾಯ.

ರೈತರ ಆತ್ಮಹತ್ಯೆಗಳನ್ನು ತಡೆಯಲು ಕೇ ಸರ್ಕಾರ ಮತ್ತು ರಾಜ್ಯ ಸರ್ಕಾರಗಳು ಈ ಕ ಅಂಶಗಳನ್ನು ಜಾರಿ ಮಾಡಬೇಕು -

1. ಈ ವರ್ಷದ ತನಕ ಎಲ್ಲಾ ಬಡರೈತರ ಸಾ ಮನ್ನಾ ಮಾಡಬೇಕು.
2. ಎಲ್ಲಾ ರೈತರ ಸಾಲದ ಮೇಲಿನ ಬಡ್ಡಿ ಮನ್ನಾ ಮಾಡಬೇಕು ಮತ್ತು ಮುಂದೆ ಸಾ ಮೇಲಿನ ಬಡ್ಡಿ ಪ್ರಮಾಣ ಇಳಿಕೆಯಾಗ ಸಾಲ ವಸೂಲಿಯುನ್ನು ಐದು ವ ಮುಂದೂಡಬೇಕು.

ಅಕ್ಟೋಬರ್ 2 ಜಿಲ್ಲಾ ಕೇಂದ್ರಗಳಲ್ಲಿ ಧರಣಿ

ರೈತರನ್ನು ಕಡೆಗಣಿಸಿರುವ ಕೇಂದ್ರ ರಾಜ್ಯ ಸರ್ಕಾರಗಳ ಗಮನ ಸೆಳೆಯಲು ಜಿಲ್ಲಾ ಕೇಂದ್ರಗಳಲ್ಲಿ ಎಲ್ಲಾ ವಿಭಾಗದ ಜನರ ಐಕ್ಯ ದರಣಿ ಕಾರ್ಯಕ್ರಮಕ್ಕೆ ಸಭೆ ತೀರ್ಮಾನಿಸಿದೆ.

ರಾಜಧಾನಿ ಬೆಂಗಳೂರಿನಲ್ಲಿ ಗಾಂಧಿ ಪ್ರತಿಮೆಯೆದುರು ವಿವಿಧ ರೈತ ಸಂಘಟನೆಗಳು, ಸಾ.ಸಂಘಟನೆಗಳು, ಬುದ್ಧಿಜೀವಿಗಳು, ಕಲಾವಿದರು, ಮಹಿಳೆಯರು, ರಾಜಕೀಯ ಪಕ್ಷಗಳ ಮುಖಂಡರು ಧರಣಿ ನಡೆಸಲಿದ್ದಾರೆ.

ಇದರ ಜೊತೆಗೆ ರಾಜ್ಯಾದ್ಯಂತ ಸಹಿ ಸಂಗ್ರಹಿಸಿ ಪರ್ಯಾಯ ಕೃಷಿ ನೀತಿಗಳಿಗಾಗಿ ಆಗ್ರಹಿಸಿ ರಾಷ್ಟ್ರಪತಿಗಳಿಗೆ ಮನವಿ ಸಲ್ಲಿಸುವ ತೀರ್ಮಾನವನ್ನು ಸಹ ಸಭೆ ಕೈಗೊಂಡಿದೆ.

ಆತ್ಮಹತ್ಯೆಗಳ ಸಮಗ್ರ ಆಧ್ಯಯನಕ್ಕೆ, ರೈತರ ನಡುವೆ ಆತ್ಮವಿಶ್ವಾಸ ಮೂಡಿಸುವ ಕಾರ್ಯಕ್ರಮ, ಮಧ್ಯಪ್ರವೇಶಕ್ಕೆ ಸಭೆ ಯೋಜಿಸಿದೆ.

'ರೈತರನ್ನುಳಿಸುವುದು ಬರೀ ಬಾಯಿಮಾತಿನ ಸಾಂತ್ವನದಿಂದಲ್ಲ'

ರೈತರ ಆತ್ಮಹತ್ಯೆಯನ್ನು ತಡೆಯಲು ಮುಖ್ಯಮಂತ್ರಿ ಎಸ್.ಎಂ.ಕೃಷ್ಣರವರ ಅಧ್ಯಕ್ಷತೆಯಲ್ಲಿ ಸೇರಿದ್ದ ಸಭೆಯು ಸಮಸ್ಯೆಯ ಮೂಲಬೇರನ್ನು ಅನ್ವೇಷಿಸಿ ಪರಿಹಾರ ರೂಪಿಸುವಲ್ಲಿ ವಿಫಲವಾಗಿದೆ. ಪರಿಹಾರ ರೂಪಿಸಿ, ರೈತರನ್ನು ಕಾಪಾಡುವ ಯಾವುದೇ ಮನಸ್ಸು ಮತ್ತು ಉದ್ದೇಶವೇ ಸರ್ಕಾರಕ್ಕೆ ಇಲ್ಲದಿರುವುದು ಆತಂಕಕಾರಿ. ಬರಿ ಬಾಯಿಮಾತಿನ ಸಾಂತ್ವನ ಏನೂ ಫಲ ನೀಡುವುದಿಲ್ಲ.

ಇಂದಿನ ಕೃಷಿಯ ಬಿಕ್ಕಟ್ಟಿನ ಸಂದರ್ಭದಲ್ಲಿ ಸಾಲದ ಹೊರೆ ಅತೀ ಭಾದೆ ತರುತ್ತಿದೆ. ಹಾಗಾಗಿ ರೈತರನ್ನು ಉಳಿಸುವ ಸಾಲವನ್ನು ಮನ್ನಾ ಮಾಡದೇ ಪರಿಹಾರವಿಲ್ಲ. ಮಾತ್ರವಲ್ಲ ಹೊಸ ಸಾಲವನ್ನು ನೀಡಬೇಕು. ಆದರೆ ಈ ಪ್ರಶ್ನೆಯನ್ನು ಅತ್ಯಂತ ಹಗುರವಾಗಿ ಪರಿಗಣಿಸಿ, ಉಡಾಫೆಯಿಂದ ಸಾರಾಸಗಟು ತಳ್ಳಿಹಾಕಿ ಪ್ರತಿಕ್ರಿಯೆ ನೀಡಿರುವ ಮುಖ್ಯಮಂತ್ರಿ ಹಾಗೂ ಸಹಕಾರ ಸಚಿವ ವಿಶ್ವನಾಥ್‌ರದ್ದು ಬೇಜವಾಬ್ದಾರಿತನ.

ಸಾಲ ಮನ್ನಾದಂತಹ ಪ್ರಮುಖ ಪ್ರಶ್ನೆಯನ್ನು ರಾಜ್ಯ ಸರ್ಕಾರವೊಂದೇ ಮಾಡಲು ಮಿತಿಗಳಿವೆ ನಿಜ. ತನ್ನ ವ್ಯಾಪ್ತಿಯಲ್ಲಿರುವುದನ್ನು ಮಾಡುತ್ತಲೇ ಕರ್ನಾಟಕದ ರೈತರ ಪರವಾಗಿ ಕೇಂದ್ರ ಸರ್ಕಾರದ ಮೇಲೆ ಸಾಲ ಮನ್ನಾಕ್ಕಾಗಿ ಒತ್ತಾಯ ಹೇರಲು ಮುಂದಾಗಬೇಕು.

ಇದರೊಂದಿಗೆ ಕೃಷಿ ಬಿಕ್ಕಟ್ಟಿಗೆ ಆಮದು ನೀತಿ, ಸಬ್ಸಿಡಿ ಕಡಿತ, ಬೆಂಬಲ ಬೆಲೆಯಂತಹ ಪ್ರಶ್ನೆಗಳ ಬಗ್ಗೆ ಕೇಂದ್ರ ಸರ್ಕಾರವೇ ನಿರ್ಧರಿಸಬೇಕಾಗಿದ್ದು ಕೇಂದ್ರ ಸರ್ಕಾರದ ಹೊಣೆ ಪ್ರಮುಖವಿದೆ. ರಾಜ್ಯ ಸರ್ಕಾರ ಮುಕ್ತ ಆಮದು ನೀತಿಯ ಬಗ್ಗೆ ಒಂದೇ ಒಂದು ಮಾತನಾಡುತ್ತಿಲ್ಲ. ಮಾತ್ರವಲ್ಲ ವಿಶ್ವ ವ್ಯಾಪಾರ ಸಂಸ್ಥೆಯ ಒಪ್ಪಂದಗಳು ರಾಜ್ಯಕ್ಕೆ ಪ್ರಯೋಜನಕಾರಿ ಎಂದು ವರದಿ ಬರೆಸಿಕೊಂಡಿದೆ. ಕೃಷಿ ಉತ್ಪಾದನೆಯ ವೆಚ್ಚ ಏರಿಸಲು, ರೈತು ಜೀವನವೆಚ್ಚ ಏರಲು ರಾಜ್ಯ ಸರ್ಕಾರವೂ ಮುಂದಾಗಿದೆ.

ವಿದ್ಯುಚ್ಛಕ್ತಿ ದರ, ನೀರಾವರಿ ದರ, ಆರೋಗ್ಯ ಶುಲ್ಕ, ಶಿಕ್ಷಣ ಶುಲ್ಕಗಳನ್ನು ನಿರಂತರವಾಗಿ ಏರಿಸಲಾಗುತ್ತಿದೆ. ಸರ್ಕಾರದ ಸಹಾಯಧನ ಮಾತ್ರವೇ ಅಲ್ಲದೇ ಕ್ರಾಸ್ ಸಬ್ಸಿಡಿಗಳನ್ನು ಹಿಂದೆಗೆಯಲಾಗುತ್ತಿದೆ.

ಆಂದೋಲನದಲ್ಲಿ ಧುಮುಕಿ

ಈ ಹಿನ್ನೆಲೆಯಲ್ಲಿ ರೈತ ಸಮುದಾಯ, ಬುದ್ಧಿಜೀವಿಗಳು, ವಿವಿಧ ಕ್ಷೇತ್ರಗಳ ತಜ್ಞರು, ಪ್ರಜಾಸತ್ತಾತ್ಮಕ ಶಕ್ತಿಗಳು, ಸಂಘಟನೆಗಳು, ರೈತರನ್ನು - ಕೃಷಿಯನ್ನು ಉಳಿಸಲು 'ಆತ್ಮಹತ್ಯೆಯಲ್ಲ - ಸಂಘರ್ಷವೊಂದೇ' ಎಂಬ ಆಂದೋಲನಕ್ಕೆ ಧುಮುಕಬೇಕಾಗಿದೆ.

...ರ ಮಾರ್ಗಗಳು

ಹಕಾರಿ ಕ್ಷೇತ್ರವನ್ನು ಬಲಪಡಿಸಿ, ಸಹಕಾರಿ ಮತ್ತು ರಾಷ್ಟ್ರೀಕೃತ ಬ್ಯಾಂಕುಗಳಿಂದ ಸರಳವಾಗಿ ತರಿಗೆ, ವಿಶೇಷವಾಗಿ ಬಡ, ಮಧ್ಯಮ ರೈತರಿಗೆ ಾಲ ಸೌಲಭ್ಯ ವಿಸ್ತರಣೆಯಾಗಬೇಕು.

ಡ ರೈತರಿಗೆ ಸರ್ಕಾರವೇ ಗ್ಯಾರಂಟಿ ನೀಡಿ ಾಲ ಕೊಡಿಸಬೇಕು.

ಾಸಗಿ ಸಾಲದ ವ್ಯಾಪಾರ ಪಾರದರ್ಶಕವಾಗಿರ ಬೇಕು, ವಿಪರೀತ ಬಡ್ಡಿ ವಿಧಿಸುವುದಕ್ಕೆ ಸಂಪೂರ್ಣ ತಡೆ ಹಾಕಬೇಕು.

ದ್ಯುತ್, ರಸಗೊಬ್ಬರ, ನೀರಾವರಿ, ೀಜೋದ್ಯಮ ಕ್ಷೇತ್ರಕ್ಕೆ ಸಾರ್ವಜನಿಕ ಂಡವಾಳ ಹೂಡಿಕೆ ಹೆಚ್ಚಾಗಬೇಕು, ಖಾಸಗೀ ರಣ ಮತ್ತು ಸಬ್ಸಿಡಿ ಕಡಿತ ನಿಲ್ಲಬೇಕು. ಕೃಷಿ ಸಂಶೋಧನೆಗೆ ಹೆಚ್ಚಿನ ಹಣ ತೊಡಗಿಸಬೇಕು.

7. ಅಮೆರಿಕಾ ಮತ್ತಿತರೆ ಶ್ರೀಮಂತ ರಾಷ್ಟ್ರಗಳ ಕೃಷಿ ಸಬ್ಸಿಡಿ ಕಡಿತಕ್ಕೆ WTO ನಲ್ಲಿ ಗಂಭೀರ ಪ್ರಯತ್ನ ನಡೆಸಬೇಕು. ಆಮದಾಗುವ ಕೃಷಿ ಉತ್ಪನ್ನಗಳ ಮೇಲೆ ಗರಿಷ್ಟ ಆಮದು ಸುಂಕಗಳನ್ನು ಹಾಕಬೇಕು.
8. ಕೃಷಿ ಉತ್ಪನ್ನಗಳ ಆಮದನ್ನು ನಿಯಂತ್ರಿಸಲು ಮತ್ತೆ ಪ್ರಮಾಣಾತ್ಮಕ ನಿರ್ಬಂಧಗಳನ್ನು ಜಾರಿಗೆ ತರಬೇಕು.
9. ಕೃಷಿ ಉತ್ಪನ್ನಗಳಿಗೆ ಬೆಂಬಲ ಬೆಲೆ ಘೋಷಿಸ ಬೇಕು. ಬೆಲೆ ಕುಸಿತ ಸಂದರ್ಭದಲ್ಲಿ ಸರ್ಕಾರಗಳೇ ಮಾರುಕಟ್ಟೆಗೆ ಮಧ್ಯಪ್ರವೇಶಿಸಿ, ಖರೀದಿ ಮಾಡಬೇಕು. ಮಾರುಕಟ್ಟೆ ಮಧ್ಯ ಪ್ರವೇಶಕ್ಕೆ ಅಗತ್ಯವಿರುವ ಆವರ್ತ ನಿಧಿಯನ್ನು ಮೀಸಲಿಡಬೇಕು.
10. ಕೃಷಿ ಉತ್ಪನ್ನಗಳನ್ನು ದಾಸ್ತಾನು ಮಾಡಲು ಅಗತ್ಯವಿರುವ ಗೋದಾಮುಗಳನ್ನು ತೆರೆಯ ಬೇಕು. ಗೋದಾಮುಗಳಲ್ಲಿ ಇರುವ ಉತ್ಪನ್ನಗಳ ಮೌಲ್ಯಗಳನ್ನು ಆಧರಿಸಿ ಕಡಿಮೆ ಬಡ್ಡಿಯಲ್ಲಿ ರೈತರಿಗೆ ಸಾಲ ಸಿಗಬೇಕು.
11. ಗ್ರಾಮ/ ಗ್ರಾಮಪಂಚಾಯತಿಯನ್ನು ಘಟಕವಾಗಿ ಪರಿಗಣಿಸಿ, ಬೆಳೆ ವಿಮೆ ಯೋಜನೆ ಜಾರಿಯಾಗಬೇಕು. ವಿಮೆಯ ಪ್ರೀಮಿಯಂ ಹಣ ಕಡಿಮೆ ಮಾಡಬೇಕು. ವಿಮೆ ಹಣ ರೈತನ ಮುಂದಿನ ಬೆಳೆಗೆ ತೊಡಗಿಸುವ ರೀತಿಯಲ್ಲಿ ನಿಗದಿತ ಅವಧಿಯೊಳಗೆ ಪಾವತಿ ಮಾಡಬೇಕು.
12. ಈಗಾಗಲೇ ಕೈಗೆತ್ತಿಕೊಂಡಿರುವ ನೀರಾವರಿ ಯೋಜನೆಗಳನ್ನು ಶೀಘ್ರವಾಗಿ ಪೂರ್ಣ ಗೊಳಿಸಬೇಕು. ಮಳೆ ನೀರು, ನೀರಿನ ನಿರ್ವಹಣೆಯ ಬಗ್ಗೆ ಆಂದೋಲನ ಕಾರ್ಯಕ್ರಮ ರೂಪಿಸಬೇಕು. ಅಂತರಜಲ ಮಟ್ಟವನ್ನು ರಕ್ಷಿಸಲು ಯೋಜನೆಯನ್ನು ರೂಪಿಸಬೇಕು.
13. ಬೆಳೆಗಳಿಗೆ ಹನಿ ನೀರಾವರಿಗಾಗಿ ನೀಡುತ್ತಿರುವ ಸಬ್ಸಿಡಿಯನ್ನು ಹೆಚ್ಚಿಸಬೇಕು.
14. ಬಲಗಾಲ ಕಾಮಗಾರಿಗಳನ್ನು ವ್ಯಾಪಕವಾಗಿ ಕೈಗೆತ್ತಿಕೊಳ್ಳಬೇಕು. 'ಕೂಲಿಗಾಗಿ ಕಾಳು' ಯೋಜನೆಯನ್ನು ಸಮರ್ಪಕವಾಗಿ ಜಾರಿಗೆ ತರಬೇಕು. ಕಾಮಗಾರಿಗಳಲ್ಲಿ ಯಂತ್ರಗಳ ಉಪಯೋಗವನ್ನು ನಿಲ್ಲಿಸಬೇಕು. ಪ್ರತಿ ಪಂಚಾಯತಿಯಲ್ಲಿ ಜಾನುವಾರಗಳಿಗೆ ಮೇವು ಒದಗಿಸಲು ಗೋಶಾಲೆಗಳನ್ನು ತೆರೆಯಬೇಕು.
15. ರಾಜ್ಯದಲ್ಲಿ ವಿದ್ಯುತ್ ಕ್ಷೇತ್ರದ ಖಾಸಗೀಕರಣ ನಿಲ್ಲಬೇಕು. ನೀರಾವರಿ ಪಂಪ್‌ಸೆಟ್ ವಿದ್ಯುತ್ ದರ ಏರಿಕೆಯ ಪ್ರಯತ್ನ ಕೈಬಿಡಬೇಕು. H.P. ಗೆ 300-00 ರೂ. ದರ ನಿಗದಿ ಮಾಡಬೇಕು. ಬರಗಾಲದ ಹಿನ್ನೆಲೆಯಲ್ಲಿ ವಿದ್ಯುತ್ ಬಾಕಿಯ ಸೌಲಭ್ಯವನ್ನು 2003 ರ ತನಕ ವಿಸ್ತರಿಸಬೇಕು.

...ಸಾಯುವುದಲ್ಲ - ಸಂಘರ್ಷ

ದುಂಡು ಮೇಜಿನ ಸಭೆ ನಿರ್ಧಾರ

ಪ್ರತಿವರ್ಷ ಸರಾಸರಿ 10 ರಿಂದ 11 ಸಾವಿರ ರಾಜ್ಯದಲ್ಲಿ ಆತ್ಮಹತ್ಯೆ ಮಾಡ್ಕೊಂಡು ತ್ತಾರೆ, ಅದ್ರಲ್ಲಿ ಈ ವರ್ಷದ ರೈತರ ಆತ್ಮಹತ್ಯೆ ೇಷ ಏನೂ ಅಲ್ಲ. ಇದನ್ನು ಅಷ್ಟೊಂದು ೀರವಾಗಿ ಪರಿಗಣಿಸಬೇಕಿಲ್ಲ - ಹೀಗೆಂದವರು ್ಯದ ಗೃಹಮಂತ್ರಿ ಖರ್ಗೆ.

ನಮ್ಮ ರಾಜ್ಯದಲ್ಲಿ ಹೆಚ್ಚಾಗ್ತಾ ಇರೋ ರೈತರ ಿ ಆತ್ಮಹತ್ಯೆಗಳ ಕುರಿತು ಚರ್ಚೆ ನಡೆಸಿ ಾಯ ಹುಡುಕಬೇಕೆಂದು ರಾಜ್ಯ ಸರ್ಕಾರ ರೈತ ಘಗಳು, ಬುದ್ಧಿಜೀವಿಗಳು, ರಾಜಕೀಯ ಖಂಡರು ವಿವಿಧ ಸಂಘಟನೆಗಳವರನ್ನು ಾನಸೌಧದ ಬ್ಯಾಕ್ವೆಟ್ ಹಾಲ್‌ನಲ್ಲಿ ಸಭೆ ತ್ತು.

ಈ ಸಭೆ ನಡೆದ ವಾರನೆಯು ದಿನ ಧ್ಯಮಗಳಲ್ಲಿ ಖರ್ಗೆಯವರ ಮೇಲ್ಕಂಡ ಹೇಳಿಕೆ ರವಾಯಿತು. ರೈತರ ಆತ್ಮಹತ್ಯೆಗಳಿಗೆ ಗೋಪಾಯವಾಗಿ ಸರ್ಕಾರ ಹುಡುಕಿರುವ ಪಾಯ ಯಾವುದೆಂದು ತಮಗೀಗಾಗಲೇ ವರಿಕೆಯಾಯಿತಲ್ಲವೆ.

ಇದೇ ಸಂದರ್ಭಕ್ಕೆ ರಾಜ್ಯದೆಲ್ಲೆಡೆ ವ್ಯವಸ್ಥಿತ ಾರವೊಂದು ಚಾಲ್ತಿಯಲ್ಲಿದೆ. ಅದೇನೆಂದರೆ, ದು ಲಕ್ಷ ಹಣ ಸಿಗುವ ಆಸೆಯಿಂದಾಗಿ ರೈತರು ಗೆ ಶರಣಾಗುತ್ತಿದ್ದಾರೆಂಬುದು.

ಗೃಹಮಂತ್ರಿಗಳ ಹೇಳಿಕೆಗೂ ಮತ್ತು ಈ ಯ ಪ್ರಚಾರಕ್ಕೂ ಸಂಬಂಧವಿಲ್ಲದೆ ಇದೆಯೇ? ಬಂಡವಾಳಿಗರು, ಅಗರ್ಭ ಶ್ರೀಮಂತರು, ೂಕುದಾರಿ ಸುಲಿಗೆಕೋರರು, ಬಹುರಾಷ್ಟ್ರೀಯ ್ಪೆಗಳ 'ಖಣಜ'ವಾಗಿರುವ ವಿಧಾನಸೌಧ ದಲೇ, ರೈತರನ್ನು ಕೊಲ್ಲುವ ದತ್ತೂರಿ ಬೀಜಗಳು ್ಯಾದ್ಯಂತ ಬಿತ್ತಲ್ಪಡುತ್ತಿವೆಯೆನ್ನಲು ಇದಕ್ಕಿಂತ ್ತಮ ಉದಾಹರಣೆ ಬೇಕೆ?

ಅನ್ನದಾತ ರೈತನನ್ನು ಅವಮಾನಿಸುವ, ಗಿಸುವ, ಲಕ್ಷಕ್ಕೆ ಬೆಲೆಕಟ್ಟಿ ಹೀಯಾಳಿಸುವಂತಹ ಪ್ರಚಾರ ಇಷ್ಟೊಂದು ಸಂಘಟಿತವಾಗಿ ಯುತ್ತಿರುವಾಗ, ಸರ್ಕಾರವೇ ಇವುಗಳನ್ನು ಯೋಜಿಸುತ್ತಿರುವಾಗ ಬ್ಯಾಂಕ್ವೆಟ್ ಹಾಲ್‌ನ ನಡೆದಿದ್ದು ಯಾರ ಹಿತಕ್ಕಾಗಿ? ಯಾರನ್ನು ಪಡಿಸುವ ಸಲುವಾಗಿ. ಕಾಂಗ್ರೆಸ್ ಸರ್ಕಾರ, .ಎಂ.ಕೃಷ್ಣ ಮಲ್ಲಿಕಾರ್ಜುನ ಖರ್ಗೆ ರಾಜ್ಯದ ಗೆ ಉತ್ತರ ಹೇಳಬಲ್ಲರೆ? ಸರ್ಕಾರದ ಸಭೆ ಲ ನಾಟಕವಷ್ಟೆ. ರೈತರನ್ನು ಉಳಿಸುವ ಯಾವ ತೀರ್ಮಾನಗಳು ಇಲ್ಲಿ ಮೂಡಿಬರಲಾರವೆಂಬ ಸತ್ಯದ ಅರಿವಿದ್ದ ರಾಜ್ಯದ ರೈತ ಸಂಘಟನೆಗಳು ನಾಟಕದಲ್ಲಿ ಭಾಗವಹಿಸಬಾರದೆಂದು ರ್ಮಾನಿಸಿ, ದೂರ ಉಳಿದವು. ದೂರವಷ್ಟೇ ಉಳಿದರೆ ಸರ್ಕಾರಕ್ಕೆ ನಷ್ಟವೂ ಇಲ್ಲ, ರೈತರಿಗೆ ಲಾಭವೂ ಇಲ್ಲ ಎಂದು ಆಲೋಚಿಸಿ ಪರ್ಯಾಯ ಮಾರ್ಗೋಪಾಯಗಳಿಗೆ ಮುಂದಾದವು.

ಕರ್ನಾಟಕ ಪ್ರಾಂತ ರೈತ ಸಂಘದ ನೇತೃತ್ವದಲ್ಲಿ ಬುದ್ಧಿಜೀವಿಗಳು, ಕಾಂಗ್ರೆಸ್-ಬಿಜೆಪಿಯೇತರ ರಾಜಕೀಯ ಪಕ್ಷಗಳ ಮುಖಂಡರು, ಕೃಷಿ ತಜ್ಞರು, ವಿ.ವಿದ್ಯಾಲಯಗಳ ಪರಿಣತರು, ಕಲಾವಿದರು, ವಿವಿಧ ಸಂಘಟನೆಗಳ ಮುಖಂಡರ ಸಭೆಯನ್ನು ಪರ್ಯಾಯವಾಗಿ ನಡೆಸಲಾಯಿತು.

ಸೆಪ್ಟೆಂಬರ್ 17 ರಂದು ಬೆಂಗಳೂರಿನಲ್ಲಿ ಜರುಗಿದ ಈ ಸಭೆ ರೈತರ ಆತ್ಮಹತ್ಯೆಗಳನ್ನು ತಡೆಯಲು ಇರುವ ಮಾರ್ಗೋಪಾಯಗಳ ಕುರಿತು ಪ್ರಾಮಾಣಿಕ ಚಿಂತನೆ ನಡೆಸಿ ರೈತರನ್ನು ಉಳಿಸುವ ಸಲುವಾಗಿ ಐಕ್ಯ ಪ್ರಯತ್ನಗಳಿಗೆ ತೀರ್ಮಾನಿಸಿತು.

ರೈತರು ಅಳಿದರೆ ದೇಶ ಉಳಿಯದು, ಕೃಷಿ ಪ್ರಧಾನವಾಗಿರುವ ದೇಶ, ಭಾರತವನ್ನು ಉಳಿಸಬೇಕಾದರೆ ರೈತನನ್ನು, ಕೃಷಿ ರಂಗವನ್ನು ಉಳಿಸಬೇಕು. ಇದಕ್ಕಾಗಿ ನಮ್ಮೆಲ್ಲ ಬೇಧಗಳನ್ನು ಬದಿಗಿಟ್ಟು ಐಕ್ಯ ಸಂಘರ್ಷಕ್ಕೆ ಮುಂದಾಗಬೇಕೆಂದು ಒಕ್ಕೊರಲಿನ ಅಭಿಪ್ರಾಯ ಪಟ್ಟರು. ಕೇಂದ್ರದ ಮಂತ್ರಿಗಳು ಕರ್ನಾಟಕದಲ್ಲಿ ಆತ್ಮಹತ್ಯೆಗಳು ಸಂಭವಿಸುತ್ತಿರುವ ಬಗ್ಗೆ ನಮಗೆ ಮಾಹಿತಿಯೇ ಇಲ್ಲವೆನ್ನುತ್ತಾರೆ. ರಾಜ್ಯದ ಮಂತ್ರಿಗಳು ರೈತ ಆತ್ಮಹತ್ಯೆಗಳನ್ನು ಗಂಭೀರವಾಗಿ ಪರಿಗಣಿಸ ಬೇಕಿಲ್ಲವೆನ್ನುತ್ತಾರೆ. ದೇಶದ ಜನತೆ ರಾಜ್ಯದ ರೈತರು ಈ ಹೇಳಿಕೆಗಳನ್ನಂತು ಗಂಭೀರವಾಗಿ ಪರಿ ಶೀಲಿಸಬೇಕೆಂದು ಸಭೆಯಲ್ಲಿ ಪ್ರಸ್ತಾಪಿಸಲಾಯಿತು.

ಆಂಧ್ರ ಮುಂತಾದಂತಹ ರಾಜ್ಯಗಳಲ್ಲಿ ಆತ್ಮಹತ್ಯೆ ಪ್ರಕರಣಗಳು ಕಡಿಮೆಯಾಗುತ್ತಿರುವಾಗ ನಮ್ಮ ರಾಜ್ಯದಲ್ಲಿ ಏರುತ್ತಿವೆ. ರಾಜ್ಯ ಸರ್ಕಾರದ ದಿವ್ಯ ನಿರ್ಲಕ್ಷ್ಯ ರೈತವಿರೋಧಿ ಧೋರಣೆಗಳು ಇದಕ್ಕೆ ಒಂದು ಪ್ರಮುಖ ಕಾರಣವಾಗಿದೆ ಎಂದು ಜೆ.ಡಿ.ಯು ನ ಸಿಂದ್ಯಾರವರು ಅಭಿಪ್ರಾಯಪಟ್ಟರು.

ಉದಾರೀಕರಣದ ದಾಳಿ, ನಿಯಂತ್ರಣವಿಲ್ಲದ ಆಮದು ನೀತಿ ಅದೇ ಸಂದರ್ಭಕ್ಕೆ ಬಡವಾಗುತ್ತಿ ರುವ ಜನತೆಯ ಬಂಡಾಯ, ರೈತರನ್ನು ಹತಾಶರ ನ್ನಾಗಿಸಿ ಆತ್ಮಹತ್ಯೆಗೆ ದೂಡುತ್ತಿವೆಯೆಂದು ಸಿಪಿಐ(ಎಂ)ನ ಜಿ.ಎನ್.ನಾಗರಾಜ್ ವಿವರಿಸಿ ದರು. ಸಂಘರ್ಷದ ರಣಕಹಳೆ ಮೊಳಗಿಸ ಬೇಕೆಂದರು.

ರಾಜ್ಯದಲ್ಲಿ, ರೈತ ಆತ್ಮಹತ್ಯೆಗಳ 3ನೇ ಇನ್ನಿಂಗ್ಸ್ ಪ್ರಾರಂಭವಾಗಿದೆ. ಆಳುವ ಸರ್ಕಾರಗಳ ಧೋರಣೆ ಮಾತ್ರ ಪ್ರಕರಣಗಳು ಶುರುವಾದಾಗಿನಿಂದ ಈವರೆಗೆ ಒಂದೇ ರೀತಿ ಇದೆ. ಈ ಬಗ್ಗೆ ನೀಡುತ್ತಿರುವ ಪರಿಹಾರವೆಂಬುದು ಕ್ಯಾನ್ಸರ್ ರೋಗಿಗೆ ತಕ್ಷಣದ ಶಮನವಷ್ಟೇ ಆಗಿದೆ. ಅದೂ ಸಹ ಬಾಧಿಸಲ್ಪಟ್ಟ ಎಲ್ಲರಿಗೇನು ದಕ್ಕುತ್ತಿಲ್ಲ. ಬೇರು ಮಟ್ಟದ ಚಿಕಿತ್ಸೆ ಬೇಕೆಂದು ಕೃಷಿ ವಿ.ವಿ. ಯ ಡಾ. ಡಿ.ಎನ್.ಪ್ರಕಾಶ್ ಅಭಿಪ್ರಾಯಪಟ್ಟರು. ಪ್ರಮಾಣಾತ್ಮಕ ನಿರ್ಬಂಧದ ಪಟ್ಟಿಯಲ್ಲಿ ರಾಗಿಹಿಟ್ಟನ್ನು ಸೇರಿಸಿರುವಾಗ ನಮ್ಮ ರೈತನಿಗೆ ಉಳಿಗಾಲವೆಲ್ಲಿ ಎಂದು ಪ್ರಶ್ನಿಸಿದರು.

ಸಮಾಜದೊಳಗೆ ನೈತಿಕ ಅಧಃಪತನ ತಾಂಡವವಾಡುತ್ತಿದೆ. ರೈತರಲ್ಲಿ ಹತಾಶ ಮನೋಭಾವ ಹೆಚ್ಚಾಗುತ್ತಿದೆ. ಅಧಿಕಾರಿಗಳು ಸರ್ಕಾರ ಮತ್ತು ವ್ಯವಸ್ಥೆಯ ಪರವಾಗಿಯೇ ಆರೋಚಿಸುತ್ತಾರೆ. ಮತ್ತು ಅನುಷ್ಠಾನ ಗೊಳಿಸುತ್ತಾರೆ. ಆಂದೋಲನದ ಮೂಲಕವೇ ಈ ಖಾಯಿಲೆಗಳಿಗೆ ಚಿಕಿತ್ಸೆ ಹುಡುಕಬೇಕೆಂದರು ಪ್ರಗತಿಪರ ದಳದ ಎಂ.ಪಿ.ಪ್ರಕಾಶ್.



ರೈತರನ್ನು ಅಲಕ್ಷಿಸಿರುವ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಕಟುಕ ನೀತಿಗಳನ್ನು ತರಾಟೆಗೆ ತೆಗೆದು ಕೊಂಡ ಜೆ.ಡಿ.ಎಸ್. ನ ನಾರಾಯಣ ಸ್ವಾಮಿ ಯವರು ಪರ್ಯಾಯ ವ್ಯವಸ್ಥೆಗಾಗಿ ಒಗ್ಗಟ್ಟಿನಿಂದ ಕೆಲಸ ಮಾಡುವ ಮೂಲಕ ಕೃಷಿ ಹಾಗೂ ಕೃಷಿಕರನ್ನು ಕಾಪಾಡಬೇಕೆಂದು ಅಭಿಪ್ರಾಯಪಟ್ಟರು.

ರೈತರು ಶವಗಳಾಗಿ ಉರುಳುತ್ತಿದ್ದರೆ ಕೃಷಿ ಕೂಲಿಕಾರರು ಜೀವಂತ ಶವಗಳಾಗಿ ಸೊರಗಿ ಹೋಗುತ್ತಿದ್ದಾರೆ. ಕೂಲಿಯ ಸಲುವಾಗಿ ಇವರ ಅಲೆದಾಟ ಕರುಳು ಹಿಂಡುತ್ತದೆ. ಆಳುವ ದೊರೆಗಳ ಕ್ರೌರ್ಯ ಪರಿಸ್ಥಿತಿಗೆ ತಂದು ಮುಟ್ಟಿಸಿದೆ. ರೈತರು, ರೈತರನ್ನವಲಂಬಿಸಿರುವ ಕೂಲಿಕಾರರು ಎರಡು ಸಮುದಾಯಗಳನ್ನು ಉಳಿಸುವ ನಿರ್ಣಾಯಕ ಹೋರಾಟಗಳು ಮೂಡಿಬರಬೇಕೆಂದವರು ಕ.ಪ್ರಾ.ಕೃಷಿ ಕೂಲಿಕಾರರ ಸಂಘದ ನಿತ್ಯಾನಂದ ಸ್ವಾಮಿಯವರು. ಕೂಲಿಗಾಗಿ ಕಾಳು ಯೋಜನೆ ಯನ್ನು ವ್ಯವಸ್ಥಿತಗೊಳಿಸಬೇಕೆಂದು ಆಗ್ರಹಿಸಿದರು.

ಸಹಕಾರಿ ಸಂಘಗಳಲ್ಲಿ ರೈತರ ಪಾಲು ಇಪ್ಪತ್ತನೇ ಒಂದು ಭಾಗ ಮಾತ್ರ. ರಾಜಕೀಯ ಪಕ್ಷಗಳ ಗಿಡುಗಗಳು ಸಹಕಾರಿ ಸಂಘಗಳನ್ನಾವರಿಸಿವೆ. ಸಾರ್ವಜನಿಕ ಹಣ ಲೂಟಿಯಾಗುತ್ತಿದೆ. ಲಕ್ಷಾಂತರ ರೂಪಾಯಿಗಳ ಸಾಲಮಾಡಿದ, ಬಾಕಿ ಉಳಿಸಿ ಕೊಂಡ ಜನ ಗೌರವಾನ್ವಿತರಾಗಿದ್ದಾರೆ. ಸಾವಿರಾರು ರೂಪಾಯಿ ಸಾಲ ಪಡೆದ ರೈತ ಬೀದಿ ಪಾಲಾಗಿ ದ್ದಾನೆಂದು ಮಾಜಿ ಸಭಾಧ್ಯಕ್ಷ ರಮೇಶ್‌ಕುಮಾರ್ ಕುಟುಕಿದರು. ಒಂದು ಲಕ್ಷ ರೂಪಾಯಿ ಪರಿಹಾರಕ್ಕೆ ಮಾನದಂಡವೇನು ಎಂದು ತಿಳಿಯುತ್ತಿಲ್ಲವೆಂದು ಪ್ರಶ್ನಿಸಿದರು.

80,000 ಕೋಟಿ ಸಾಲ ಪಡೆದ ಸಾಲಗಾರರು ಗೌರವ ಸ್ಥಾನ-ಮಾನ ಗಳಿಸಿಕೊಂಡಿರುತ್ತಾರೆ. ಸಂಶೋಧನೆಗಳಿಗೆ ಬಿಡುವಿಲ್ಲ. ಆದರೆ ನುಸಿಪೀಡೆ, ರೋಗಬಾಧೆ, ಕೀಟಬಾಧೆಗಳಿಗೆ ಪರಿಹಾರವಿಲ್ಲ, ಸುಬ್ರಮಣ್ಯಸ್ವಾಮಿಯಂತವರಿಗೆ ಅಮೆರಿಕಾ, ಇಂಗ್ಲೆಂಡ್ ಜೊತೆ ಸ್ಪರ್ಧಿಸುವ ಆತುರ. ಗ್ರಾಮಾಂತರ ಆತ್ಮಹತ್ಯೆಗಳು ನಾಳೆ ನಗರಕ್ಕೆ ಲಗ್ಗೆ ಇಡುತ್ತವೆ. ಪರ್ಯಾಯ ಹೋರಾಟವೆ ಬದಲಿ ಉತ್ತರವೆಂದು ನೊಂದು ನುಡಿದವರು ಡಾ. ಜಿ.ಆರ್. ಸಮಗ್ರ ಕೃಷಿ ನೀತಿಗೆ ಆಗ್ರಹಿಸಿದ ಇವರು ಸಾಮುದಾಯಿಕ ಮಧ್ಯ ಪ್ರವೇಶ ಬೇಕೆಂದರು.

ದುಂಡುಮೇಜಿನ ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದ ಕ.ಪ್ರಾ.ರೈತ ಸಂಘದ ರಾಜ್ಯ ಅಧ್ಯಕ್ಷರಾದ ಮಾರುತಿ ಮಾನ್ಪಡೆ ಹಾಗೂ ಮಾನವ ಧರ್ಮಪೀಠದ ನಿಡುಮಾಮಿಡಿ ಸ್ವಾಮೀಜಿಯವರು ಮುಂದಿನ ದಾರಿ ಸಂಘರ್ಷವೆಂದು ಸಾರಿದರು: ಸಭೆಯ ಪ್ರಾಸ್ತಾವಿಕ ಮಾತುಗಳನ್ನಾಡಿದ ಕ.ಪ್ರಾ.ರೈತ ಸಂಘದ ಪ್ರ.ಕಾರ್ಯದರ್ಶಿ ಜಿ.ಸಿ.ಬಯ್ಯಾರೆಡ್ಡಿ ಯವರು ಸಬ್ಸಿಡಿ ಕಡಿತ, ವೇಗಗೊಳ್ಳುತ್ತಿರುವ ಎಲ್‌ಪಿಜಿ, ನಿಯಂತ್ರಣವಿಲ್ಲದ ಆಮದು ಒಪ್ಪಂದಗಳು, ವಿನಾಶಕಾರಿ ವಿದ್ಯುತ್ ನೀತಿಗಳು, ಸಾಲದ ವಿಷ ವರ್ತುಲಗಳ ಬಗ್ಗೆ ಗಮನ ಸೆಳೆದರು.

ದುಂಡುಮೇಜಿನ ಸಭೆಯಲ್ಲಿ ಡಾ. ದೇವರಾಜ್, ಸಿ.ಜಿ.ಕೆ., ಚಂಪಾ, ಡಾ. ಕೆ.ಮರಳುಸಿದ್ದಪ್ಪ, ಇಂಧೂದರ ಹೊನ್ನಾಪುರ, ಮಾವಳ್ಳಿ ಶಂಕರ್, ಡಿ.ಜಿ.ಸಾಗರ್, ಎಐಕೆಎಸ್‌ನ ಗೋಪಾಲ್, ಪ್ರಗತಿಪರ ರೈತರು, ಆತ್ಮಹತ್ಯೆ ಮಾಡಿಕೊಂಡ ಕುಟುಂಬ ವರ್ಗದವರು, ಸಾಮೂಹಿಕ ಸಂಘಟನೆಗಳ ಮುಖಂಡರು ಪಾಲ್ಗೊಂಡಿದ್ದರು.

ವರದಿ : **ಎನ್.ಪ್ರಭಾ**

ಖಾಲಿ ಇರುವ ಬ್ಯಾಕ್‌ಲಾಗ್ ಹುದ್ದೆಗೆ ನಡೆದ ಸಂದರ್ಶನದಲ್ಲಿ ವಿಠ್ಠಪ್ಪ ಲಮಾಣಿ ಆಯ್ಕೆಯಾದರು. ಶಿಕ್ಷಣಾಧಿಕಾರಿಯವರು ಎಲ್ಲಾ ಕಾಗದ ಪತ್ರಗಳನ್ನು, ಅಂಕಪಟ್ಟಿಯನ್ನು ಕೂಲಂಕುಷವಾಗಿ ಪರಿಶೀಲಿಸಿ, ಡಿ.ಡಿ.ಪಿ.ಐ. ಕಛೇರಿಗೆ ಅನುಮೋದನೆಗಾಗಿ ಕಳುಹಿಸಿದರು. ಹುದ್ದೆಗೆ ನಿಗದಿಪಡಿಸಿದ ವಿದ್ಯಾರ್ಹತೆಯ ಪ್ರಕಾರ ಪದವಿಯನ್ನು ಹಾಗೂ ತರಬೇತಿಯಲ್ಲಿನ ವಿಷಯಗಳನ್ನು ಹೊಂದಿಲ್ಲ. ಇದು ಕಾನೂನು ಬಾಹಿರವಾಗಿದೆ ಎಂದು ಡಿ.ಡಿ.ಪಿ.ಐ. ಅವರ ಕಛೇರಿಯ ಪತ್ರ ಲಮಾಣಿಯವರ ಕೈ ಸೇರಿತು. ಕಾಯಮಾತಿಯ ಕನಸು ಕಾಣುತ್ತಿದ್ದ ಲಮಾಣಿಯವರು ಕಂಗಾಲಾದರು. ಇಲ್ಲಿ ನಿಜಕ್ಕೂ ನಡೆದಿದ್ದೇನು?

ಶಿಕ್ಷಣ ಇಲಾಖೆಯ ಧನದಾಹಿಗಳ ಮೋಸಕ್ಕೆ ಬಲಿಯಾದ

ದಲಿತ ಶಿಕ್ಷಕ ವಿಠ್ಠಪ್ಪ ಪೀರಪ್ಪ ಲಮಾಣಿ


ಉತ್ತರಕನ್ನಡದ ಕಾರವಾರದ ಡಿ.ಡಿ.ಪಿ.ಐ ಕಛೇರಿಯಲ್ಲಿ ನಡೆಯುತ್ತಿರುವ ಅಕ್ರಮ, ಅವ್ಯವಹಾರಗಳಿಗೆ, ಧನದಾಹಿಗಳ ಅಟ್ಟಹಾಸಕ್ಕೆ ಬಲಿಯಾದ ಪರಿಶಿಷ್ಟ ವರ್ಗದ ಶಿಕ್ಷಕ ವಿಠ್ಠಪ್ಪ ಪೀರಪ್ಪ ಲಮಾಣಿ ಹಾನಗಲ್ ತಾಲೂಕಿನ ಕರೆಕ್ಯಾತನ ಹಳ್ಳಿಯ ಒಂದು ಬಡ ಲಮಾಣಿ ತಾಂಡಾಕ್ಕೆ ಸೇರಿದವರು. ಅತ್ಯಂತ ಬಡತನದಲ್ಲಿ ವಿದ್ಯಾಭ್ಯಾಸ ಮುಗಿಸಿ, ನೌಕರಿ ಮಾಡಬೇಕೆಂದು ಆ ಮೂಲಕ ಕುಟುಂಬದ ಬಡತನ ನಿವಾರಿಸಬೇಕೆಂದು ಕನಸು ಹೊತ್ತು ಇವರು ಬಂದಿದ್ದು ಹೊನ್ನಾವರ ತಾಲೂಕಿನ ಖರ್ವಾದ ಎಸ್.ವಿ.ಹೈಸ್ಕೂಲಿಗೆ 'ಸಿದ್ಧಿವಿನಾಯಕ ವಿವಿಧೋದ್ದೇಶ ವಿದ್ಯಾ ಪ್ರಸಾರ ಮಂಡಲಿ' ನಡೆಸುವ ಈ ಪ್ರೌಢಶಾಲೆಯಲ್ಲಿ ಖಾಲಿ ಇರುವ ಹಿಂದಿ ವಿಷಯದ ಬ್ಯಾಕ್‌ಲಾಗ್ ಹುದ್ದೆಗೆ 26-10-2002 ರಂದು ನಡೆದ ಸಂದರ್ಶನದಲ್ಲಿ ವಿಠ್ಠಪ್ಪ ಲಮಾಣಿ ಆಯ್ಕೆಯಾದರು. ಆಡಳಿತ ಮಂಡಲಿಯಿಂದ ಆಯ್ಕೆಯಾದ ಆದೇಶ (ನಂ.ಎಸ್.ವಿ.ಹೆಚ್.ಎಸ್/ ಎ.ಪಿ.ಟಿ/ 0.2/ 2002-03) ಪಡೆದು 6-11-2002 ರಿಂದ ಶಿಕ್ಷಕರಾಗಿ ಕರ್ತವ್ಯಕ್ಕೆ ಹಾಜರಾದರು. ಸಂದರ್ಶನ ಸಮಿತಿಯಲ್ಲಿ ಶಿಕ್ಷಣ ಇಲಾಖೆಯ ಪರವಾಗಿ ಹೊನ್ನಾವರದ ಕ್ಷೇತ್ರ ಶಿಕ್ಷಣಾಧಿಕಾರಿ (ಬಿ.ಇ.ಒ) ಯವರು ಇದ್ದು ಎಲ್ಲಾ ಕಾಗದ ಪತ್ರಗಳನ್ನು, ಅಂಕಪಟ್ಟಿಯನ್ನು ಕೂಲಂಕುಷವಾಗಿ ಪರಿಶೀಲಿಸಿ, ಅಗತ್ಯವಿರುವ ಎಲ್ಲವನ್ನೂ ಜೊತೆಯಲ್ಲಿಟ್ಟು ಡಿ.ಡಿ.ಪಿ.ಐ. ಕಛೇರಿಗೆ ಅನುಮೋದನೆಗಾಗಿ ಕಳುಹಿಸಿದರು.

ಅಂಕಪಟ್ಟಿಯನ್ನು ಒಳಗೊಂಡಂತೆ ಎಲ್ಲಾ ದಾಖಲೆಪತ್ರಗಳು ಸರಿಯಾಗಿರುವುದರಿಂದ ಇನ್ನೇನು ಆಯ್ಕೆ ಅನುಮೋದನೆ ಆಗಿ ಬರುತ್ತದೆ; ಜೀವನದ ಮೊದಲ ಸಂಬಳ ಹೊಸ ವರ್ಷಕ್ಕೆ ಸಂಭ್ರಮ ಮೂಡಿಸುತ್ತದೆಂದು ತಿಳಿದಿದ್ದರು. ಮೊದಲ ತಿಂಗಳ ಸಂಬಳದಿಂದ ಹಿಂದೆ ಮಾಡಿದ ಸಾಲ ತೀರಿಸಬೇಕೋ, ಸಾಲದ ಬಡ್ಡಿ ತೀರಿಸಬೇಕೋ, ತನ್ನ ಕುಟುಂಬಕ್ಕೆ ಕೊಡಬೇಕೋ ಎಂದು ಭಾಗಾಕಾರ-ಗುಣಾಕಾರ ಮಾಡುತ್ತಿದ್ದ ಲಮಾಣಿಯವರ ಕೈಸೇರಿದ್ದು ಆಘಾತಕಾರಿಯಾದ ಸುದ್ದಿಯನ್ನು ಹೊತ್ತ ಡಿ.ಡಿ.ಪಿ.ಐ. ಅವರ ಕಛೇರಿಯ ಪತ್ರ. ದಿನಾಂಕ 28.12.2002 ರಂದು ಉಪನಿರ್ದೇಶಕರ ಸಹಿ ಇರುವ ಪತ್ರದಲ್ಲಿ ಹುದ್ದೆಗೆ ನಿಗದಿಪಡಿಸಿದ ವಿದ್ಯಾರ್ಹತೆಯ ಪ್ರಕಾರ ಪದವಿಯನ್ನು ಹಾಗೂ ತರಬೇತಿಯಲ್ಲಿನ ವಿಷಯಗಳನ್ನು ಹೊಂದಿಲ್ಲ. ಇದು ಕಾನೂನು ಬಾಹಿರವಾಗಿದೆ" ಎಂದು ನಮೂದಿಸಲಾಗಿತ್ತು. ಕಾಯಮಾತಿಯ ಕನಸು ಕಾಣುತ್ತಿದ್ದ ಲಮಾಣಿಯವರು ಕಂಗಾಲಾದರು.

ತಕ್ಷಣದಲ್ಲಿ ಡಿ.ಡಿ.ಪಿ.ಐ ಕಛೇರಿಗೆ ಹೋದರೆ ಅತ್ಯಂತ ಮಹತ್ವದ ಅಗತ್ಯವಾದ ಪ್ರಮಾಣಪತ್ರಗಳೇ ಮಾಯ! ಇದ್ದ ಪ್ರಮಾಣಪತ್ರಗಳು ಮೌಲಿಕವಲ್ಲವೆಂದು ತಿರಸ್ಕರಿಸಿದರು. ಅನುಮೋದನೆ ಯಾಕೆ ತಡವಾಗಿದೆ ಎಂದು ಕೇಳಲು ಹೋದ ಆಡಳಿತ ಸಮಿತಿಯವರಿಗೆ ಬ್ಯಾಕ್‌ಲಾಗ್ ಹುದ್ದೆಗೆ ತಕ್ಷಣ ಬೇರೆ ಅಭ್ಯರ್ಥಿಗಳನ್ನು ನೇಮಿಸಿಕೊಳ್ಳದಿದ್ದರೆ ಕ್ರಿಮಿನಲ್ ಅಪರಾಧವಾಗುತ್ತದೆಂದು ಹೆದರಿಸಿ ಕಳುಹಿಸಿದರೆಂದು ಪ್ರತ್ಯಕ್ಷದರ್ಶಿಗಳು ಹೇಳುತ್ತಾರೆ. ಬಹುಶಃ ಅನುಮೋದನೆಯ ಪ್ರಸ್ತಾವನೆಯನ್ನು ಕಳುಹಿಸಿದ ತಕ್ಷಣ ಲಮಾಣಿಯವರು ಸಂಬಂಧಪಟ್ಟ ಅಧಿಕಾರಿಗಳ ಹಿಂದೆ ತಿರುಗುತ್ತಾ, ಅವರ ಆಸೆ ಪೂರೈಸಿದ್ದರೆ ಕಹಿಯಾದ ಆದೇಶ ಬರುತ್ತಿರಲಿಲ್ಲವೇನೋ?

ಸಂದರ್ಶನದಲ್ಲಿ ಹಾಜರಿದ್ದ ಆಯ್ಕೆ ಸಮಿತಿ ಸದಸ್ಯರು, ಆಡಳಿತ ಮಂಡಳಿಯವರು ಮತ್ತು ಕ್ಷೇತ್ರ ಶಿಕ್ಷಣಾಧಿಕಾರಿಗಳು ಎಲ್ಲಾ ದಾಖಲೆ ಪರಿಶೀಲಿಸಿ, ಉತ್ತಮ ಪಾಠ ಮಾಡುವುದನ್ನು ಖಾತ್ರಿಪಡಿಸಿಕೊಂಡು ಆಯ್ಕೆ ಆದೇಶ ಕೊಟ್ಟಿದೆ. ನಿರ್ದೇಶಕರು ಹಾಗೂ ಮೇಲ್ಮನವಿ ಪ್ರಾಧಿಕಾರ, ಪ್ರೌಢಶಿಕ್ಷಣ ಇಲಾಖೆಗೆ ಬರೆದ ಪತ್ರದಲ್ಲಿ "ಉಪನಿರ್ದೇಶಕರು ಸಾ.ಶಿ.ಇಲಾಖೆ ಉ.ಕ.ಕಾರವಾರ ಇವರಿಗೆ ಆಯ್ಕೆಗೊಂಡ ಅಭ್ಯರ್ಥಿಯ ಪ್ರಸ್ತಾವನೆಯನ್ನು ದೃಢೀಕರಿಸಿ ಸಲ್ಲಿಸುವಂತೆ ಮನವಿ ಮಾಡಿಕೊಂಡ ಪ್ರಕಾರ ಮೂಲ ದಾಖಲೆಗಳನ್ನು ಪರಿಶೀಲಿಸಿ, ದೃಢೀಕರಿಸಿ ಉಪನಿರ್ದೇಶಕರು ಸಾ.ಶಿ.ಇಲಾಖೆ ಇವರಿಗೆ ನೇಮಕಾತಿಯ ಅನುಮೋದನೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ ಮತ್ತು "ಅರ್ಜಿದಾರರು ಒದಗಿಸಿದ ವಿದ್ಯಾರ್ಹತೆಯ ಪ್ರಮಾಣಪತ್ರ ಅವರ ಹೇಳಿಕೆಯಂತೆ ಸರಿ ಇರುವುದು" ಎಂದು ಮೇಲಾಧಿಕಾರಿಗಳಿಗೆ ಉತ್ತರಿಸಿದ್ದಾರೆ. ಹೀಗಿದ್ದೂ ದಾಖಲೆಪತ್ರ ಮಾಯವಾದದ್ದು ಯಾರಿಂದ? ಹೇಗೆ? ಯಾಕೆ ಎಂಬ ಯಕ್ಷ ಪ್ರಶ್ನೆಗೆ ಉತ್ತರ ಹೇಳುವವರಾರು?

28-12-2002 ರಂದು ಡಿ.ಡಿ.ಪಿ.ಐ. ಕಛೇರಿಯ ಪತ್ರ ಬಂದ ತಕ್ಷಣ ವಿಠ್ಠಪ್ಪ ಲಮಾಣಿಯವರು "ನನಗೆ ಅ[illegible]ಯ ಆಗಿದೆ, ನನ್ನ ಎಲ್ಲಾ ದಾಖಲಾತಿಯು ಅನುಮೋದನೆ ಪ್ರಸ್ತಾವನೆಯೊಂದಿಗೆ ಇದೆ, ಅದನ್ನು ಮರುಪರಿಶೀಲನೆ ನಡೆಸಿ ನ್ಯಾಯ ಒದಗಿಸಿಕೊಡಬೇಕು" ಎಂದು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ (ಸಿ.ಇ.ಓ) ಡಿ.ಮಲ್ಲು ಅವರು ಅಧ್ಯಕ್ಷರಾಗಿರುವ ಪರಿಶೀಲನಾ ಸಮಿತಿಗೆ ಮನವಿ ಮಾಡಿಕೊಂಡರು. ಈ ಸಮಿತಿಗೆ ಡಿ.ಡಿ.ಪಿ.ಐ. ಅವರು (ಆಗ ಆರ್.ಟಿ.ದೇಸಾಯಿಯವರಿದ್ದರು) ಸದಸ್ಯರಾಗಿ ಶಿಕ್ಷಣಾಧಿಕಾರಿ ಬಿ.ಸಿ.ಬಸವರಾಜಪ್ಪ ಕಾರ್ಯದರ್ಶಿಯಾಗಿ ಕೆಲಸ ನಿರ್ವಹಿಸುತ್ತಾರೆ. ಈ ಸಮಿತಿ ಬಿ.ಸಿ.ಬಸವರಾಜಪ್ಪನ ಮಾತನ್ನು ನಂಬಿತೇ ಹೊರತಾಗಿ ದಾಖಲೆ ಪರಿಶೀಲಿಸಿದಂತೆ ಕಾಣುವುದಿಲ್ಲ. 10.03.2003 ರಂದು ಅವರು ಕೊಟ್ಟ ವರದಿಯಲ್ಲಿ ಅಂಗೀಕೃತ ವಿಶ್ವವಿದ್ಯಾಲಯದ ಪದವಿಯನ್ನು, ಹಿಂದಿ ವಿಷಯವನ್ನು ಪಡೆದು ಅಭ್ಯಸಿಸಿದ್ದು ದಾಖಲೆ ಇರುವುದಿಲ್ಲ..... ಸದರಿ ಆಯ್ಕೆಯನ್ನು ಅನರ್ಹಗೊಳಿಸಿ ಹಿಂತಿರುಗಿಸಲಾಗಿದೆ" ಎಂದು ಕಾರ್ಯದರ್ಶಿಯಿಂದ ಸಹಿ ಇರುವ ಉತ್ತರ ಬಂದಿದೆ. ಆದರೆ ಸಂಸತ್ ಮಾನ್ಯತೆ ಪಡೆದ, ಸರ್ಕಾರದ ಅನುದಾನ ಪಡೆಯುತ್ತಿರುವ ಎನ್.ಸಿ.ಟಿ.ಇ.ಯಿಂದ ಮಾನ್ಯತೆ ಪಡೆದ ಧಾರವಾಡದ ರಾಜೀವ ಗಾಂಧಿ ಶಿಕ್ಷಣ ಮಹಾವಿದ್ಯಾಲಯದಲ್ಲಿ ಬಿ.ಇ.ಡಿ ಪದವಿಯನ್ನು 1000 ಕ್ಕೆ 688 ಅಂಕಗಳೊಂದಿಗೆ ಪ್ರಥಮ ದರ್ಜೆಯಲ್ಲಿ ಪಾಸಾದ ಬಗ್ಗೆ ಅಂಕಪಟ್ಟಿಯೇ ಇದೆ. ಕಾಲೇಜಿನಿಂದ ಪಡೆದ ಟಿ.ಸಿ.ಯಲ್ಲಿ Methods Offered ಎನ್ನುವ ಕಾಲಂನ ಮುಂದೆ 1. Hindi 2. History ಎಂದು ದಾಖಲಾದ ವರ್ಗಾವಣೆ ಪಾತ್ರವು ಇದೆ. ಕರ್ನಾಟಕ ವಿಶ್ವವಿದ್ಯಾಲಯದಲ್ಲಿಯೇ ಪದವಿ ಮುಗಿಸಿ ರಾಷ್ಟ್ರ ಭಾಷಾ ವಿದ್ವಾನ್ ಹಿಂದಿ ಪರೀಕ್ಷೆಯನ್ನು ಕರ್ನಾಟಕ ಹಿಂದಿ ಪ್ರಚಾರ ಸಮಿತಿಯಡಿ ಮುಗಿಸಿದ್ದು, ಈ ಪದವಿ ಯಾವುದೇ ವಿಶ್ವವಿದ್ಯಾಲಯದ ಹಿಂದಿ ಪದವಿಗೆ ತತ್ಸಮಾನವೆಂದು ಕರ್ನಾಟಕ ರಾಜ್ಯ ಮತ್ತು ಕೇಂದ್ರ ಸರ್ಕಾರ ಮಾನ್ಯತೆ ನೀಡಿದೆ. ಈ ಎಲ್ಲಾ ದಾಖಲೆಯೊಂದಿಗೆ ಈ ಎರಡೂ ಪದವಿಯನ್ನು ಕರ್ನಾಟಕ ಸರ್ಕಾರ ಮಾತ್ರವಲ್ಲ ಎಲ್ಲಾ ಅಂಗೀಕೃತ ವಿಶ್ವವಿದ್ಯಾಲಯಗಳು ಮಾನ್ಯ ಮಾಡುವ ಕುರಿತು ಇರುವ ಆದೇಶದ ಪ್ರತಿ ಇಡಲಾಗಿದೆ. ಇಷ್ಟಿದ್ದೂ ಲಮಾಣಿಯವರ ಅರ್ಜಿಯೊಂದಿಗೆ ದಾಖಲಾತಿಯೇ ಇಲ್ಲ, ಹಿಂದಿ ವಿಷಯ ತೆಗೆದುಕೊಂಡ ಬಗ್ಗೆ ವಿವರವೇ ಇಲ್ಲ ಎನ್ನುವ ವಾದ ಮಂಡಿಸಿದ್ದು ಯಾಕೆ? ಇಲ್ಲಿ ಯಾವ



ವಿಠ್ಠಪ್ಪ ಪೀರಪ್ಪ ಲಮಾಣಿ

ಹಿತಾಸಕ್ತಿ ಕೆಲಸ ಮಾಡಿದೆ? ಇದು ಸೂಕ್ತ ತನಿಖೆಯಿಂದ ಬಯಲಾಗಬೇಕಾಗಿದೆ.

ನಡೆದದ್ದೇನು? ಈ ಬಗ್ಗೆ ಮತ್ತೆ ಜಿ.ಪ.ಉ.ಕ ದ ಮುಖ್ಯ ಕಾರ್ಯದರ್ಶಿ ಡಿ.ಮಲ್ಲು ಅವರು ಮನವಿ ಮಾಡಿಕೊಂಡರೂ ಅವರು ಇದನ್ನು ಗಂಭೀರವಾಗಿ ತೆಗೆದುಕೊಳ್ಳದೆ ಇರುವುದು ಒಬ್ಬ ಪರಿಶಿಷ್ಟ ವರ್ಗದ ಬಡ ಪದವೀಧರನಿಗೆ ಅನ್ಯಾಯ ಮಾಡಿದಂತಾಗಲಿಲ್ಲವೆ?

ಲಮಾಣಿಯವರು ಮತ್ತು ಹೊನ್ನಾವರದ ಬಿ.ಇ.ಓ ಕಛೇರಿಯಿಂದ ಎಲ್ಲಾ ದಾಖಲೆ ಪತ್ರಗಳನ್ನು ಕಳುಹಿಸಿದರೂ ಕೂಡ ಡಿ.ಡಿ.ಪಿ.ಐ ಕಛೇರಿಯ ಭಾರೀ ಕುಳ ಬಿ.ಸಿ.ಬಸವರಾಜಪ್ಪ ಮತ್ತು ಸೂಪರಿಂಟೆಂಡೆಂಟ್ ಹುಲುಪ್ಪಾರ ಅವರ ಕೈಚಳಕ ಇಷ್ಟೆಲ್ಲ ಅವಾಂತರಗಳಿಗೆ ಕಾರಣ ಆಗಿದೆ ಎಂದು ತನಿಖೆಯಿಂದ ತಿಳಿಯಬಹುದು. ಲಮಾಣಿಯವರಿಗೆ ಬದಲು ಮೂರನೇ ಸ್ಥಾನದಲ್ಲಿದ್ದ ಕಾಂಭಿ ಎನ್ನುವ ಅಭ್ಯರ್ಥಿಯನ್ನು ನೇಮಕಾತಿ ಮಾಡಲು ಬಸವರಾಜಪ್ಪ ಹೆಚ್ಚು ಆಸಕ್ತರಾಗಿದ್ದರೆಂದು ಮತ್ತು ಕುರುಡು ಕಾಂಚಾಣದ ಮಹಿಮೆಯೇ ಇಷ್ಟಕ್ಕೆಲ್ಲ ಕಾರಣ ಎನ್ನಲಾಗಿದೆ. ಏನಾದರೂ ನೆವಹೇಳಿ ಲಮಾಣಿಯವರನ್ನು 'ಡಿಸ್‌ಕ್ವಾಲಿಫೈ' ಮಾಡಿದರೆ ಮುಂದಿನ ಹಾದಿ ಸುಗಮ ಎನ್ನುವುದು ಈ ಭಾರಿ ಕುಳಗಳ ಲೆಕ್ಕಾಚಾರ.

ಕಾರವಾರದಲ್ಲಿ ನ್ಯಾಯ ಸಿಗದಿದ್ದಾಗ ಬೆಂಗಳೂರಿನಲ್ಲಿ ನಿರ್ದೇಶಕರಿಗೆ ಲಮಾಣಿಯವರು ಮೇಲ್ಮನವಿ ಮಾಡಿಕೊಂಡರು. ಈಗ ಅಲ್ಲಿ ವಿಚಾರಣೆಯಲ್ಲಿದೆ. ಅಲ್ಲಾದರೂ ನ್ಯಾಯ ಸಿಗುವುದೋ ನೋಡಬೇಕು.

'ಕುರುಡು ಕಾಂಚಾಣ'ದ ಮಹಿಮೆ ಎಷ್ಟಿದೆಯೆಂದರೆ ಸಿಪಿಐ ಕಛೇರಿಗೆ ಆಡಳಿತ ಮಂಡಲಿಯಿಂದ ಸೂಕ್ತ ದಾಖಲೆಪತ್ರಗಳೊಂದಿಗೆ 30-1-2003 ರಂದು ಕಳುಹಿಸಿದ ಅರ್ಜಿಯ ದಾಖಲೆಪತ್ರಗಳೇ ಮಾಯ ಆಗಿವೆ. ಪತ್ರಕ್ಕೆ ಇನ್‌ವಾರ್ಡ್ ನಂಬರ್ ಹಾಕಲೇ ಇಲ್ಲ ಅಂದಮೇಲೆ ಎಲ್ಲಿಂದ ಎಲ್ಲಿಗೆ ಕುರುಡು ಕಾಂಚಾಣ ತನ್ನ ಕಬಂಧ ಬಾಹುಗಳನ್ನು ಚಾಚಿರಬಹುದು. ಕೊರಿಯರ್‌ನಲ್ಲಿ ಬಳಸಿದ ಸಹಿ ಆಧಾರದಲ್ಲಿ ಕಛೇರಿಯಲ್ಲಿ ಗಲಾಟೆ ಎಬ್ಬಿಸಿದ ಎರಡನೇ ದಿನಕ್ಕೆ ಎಲ್ಲಾ ಕಾಗದಪತ್ರಗಳು ಲಭ್ಯವಾದವು. ಆದರೆ ಅಲ್ಲೂ ಕೆಲವು ದಾಖಲೆ ಪತ್ರವಿಲ್ಲವೆಂಬ ದೂ[illegible] ಕರ್ನಾಟಕದಾದ್ಯಂತ ಓಡಾಡಿ ಅವರು ಹೇ[illegible] ಎಲ್ಲಾ ದಾಖಲೆ ಒದಗಿಸಿದರೂ (ದಾಖ[illegible] ಸಂಗ್ರಹಕ್ಕಾಗಿಯೇ 10-12 ಸಾ[illegible] ರೂ.ಖರ್ಚಾಗಿದೆ) ನ್ಯಾಯ ತಿ[illegible] ವಿಳಂಬವಾಗುತ್ತಿದೆ. ಎಲ್ಲರೂ ಲಮಾಣಿಯ[illegible] ಪಡೆದ ಪದವಿಯ ಮಾನ್ಯತೆಯನ್ನೇ ಕೇಳುತ್ತಾ[illegible] ಹಾಗಾದರೆ ಅಧಿಕಾರಿಗಳ ಭಾಷೆಯಲ್ಲಿ ಮಾ[illegible] ಎಂದರೆ ಏನು?


ಹೆಚ್ಚುತ್ತಿರುವ ಕಿರುಕುಳ: ಏನೋ ತಪ್ಪಾ[illegible] ಹೊಂದಾಣಿಕೆ ಮಾಡಿಕೊಳ್ಳೋಣ; ಕೋ[illegible] ಕಛೇರಿ ಎಂದು ಹೋಗುವುದು ಬೇಡ ಎ[illegible] ಕೆಲವರು ತಿಂಗಳುಗಳ ಕಾಲ ಒತ್ತಡ ಹೇರಿದ[illegible] ಬ್ಯಾಕ್‌ಲಾಗ್‌ನ ನೆವವಾಗಿಟ್ಟುಕೊಂ[illegible] ಶಿಕ್ಷಕ-ಸಿಬ್ಬಂದಿಗಳ (ಇಡೀ ಶಾಲೆಯ) ಸಂಬಳ[illegible] ಕೆಲವು ತಿಂಗಳುಗಳ ಕಾಲ ಹಿಡಿದಿಟ್ಟರು. ಈ ಶಾಲೆಗೆ ಮಂಜೂರಿ ಆಗಿರುವ ವಿವಿಧ ಹು[illegible] ನೇಮಕಾತಿಗೆ ತಡೆ ಹಾಕಿ ಇಟ್ಟಿದ್ದಾರೆ. ಇದ[illegible] ಊರಜನ, ಆಡಳಿತ ಮಂಡಳಿ, ಶಿಕ್ಷ[illegible] ಲಮಾಣಿಯ ವಿರುದ್ಧ ಬೀಳಲಿ ಎಂಬ ಹು[illegible] ಇರಬಹುದು.

ಮುಂದೇನು? ಮುಂದೇನು ಎನ್ನುವುದೇ [illegible] ಜುಲೈ 25 ರಂದು ಈಗಿನ ಡಿ.ಡಿ[illegible] ಜಿ.ಎಸ್.ನಾಯ್ಕ ಅವರಲ್ಲಿ ಲಮಾಣಿಯ[illegible] ಮನವಿ ಮಾಡಿಕೊಂಡು ನನಗೆ ನ್ಯಾಯ ಕೊಡ[illegible] ಮತ್ತು ತಪ್ಪಿತಸ್ಥರ ಮೇಲೆ ಕ್ರಮ ಕೈಗೊ[illegible] ವಿನಂತಿಸಿದ್ದಾರೆ. ತಪ್ಪನ್ನು ತಿದ್ದಿ ಇವರಾ[illegible] ನ್ಯಾಯ ಕೊಡುತ್ತಾರೆಯೋ ನೋಡಬೇಕು. ಸಭಾಪತಿ ಡಾ.ಮನೋಹರ ತಹಶೀ[illegible] (ಲಮಾಣಿಯವರ ಕ್ಷೇತ್ರದ ಎಂ.ಎಲ್.ಎ) [illegible] ಸ್ಪಂಧಿಸಿ ವಿವಿಧ ಅಧಿಕಾರಿಗಳಿಗೆ [illegible] ತಿದ್ದಿಕೊಳ್ಳುವಂತೆ ಆದೇಶಿಸಿದ್ದಾರೆ. ಕಾರ್ಯರೂಪಕ್ಕೆ ಬರುತ್ತದೆಯೋ ನೋಡಬೇಕಾ[illegible] 8-9 ತಿಂಗಳಿಂದ ಪಾಠ ಮಾಡಿ ವಿದ್ಯಾರ್ಥಿ[illegible] ಮೆಚ್ಚುಗೆ ಗಳಿಸಿರುವ ಲಮಾಣಿಯವರಿಗೆ ಆ[illegible] ಮಂಡಲಿ ಅವರ ಊಟ ಮತ್ತಿತರ ಮೂಲ[illegible] ಅವಶ್ಯಕತೆಗಳ ಪೂರೈಕೆಗಾಗುವಷ್ಟಾದರೂ ಸ[illegible] ಗೌರವಧನ/ ಸಹಾಯಧನ ಯಾವುದನ್ನಾ[illegible] ಕೊಡುವ ಮಾನವೀಯತೆ ಮೆರೆಯುತ್ತದೆ[illegible] ನೋಡಬೇಕಾಗಿದೆ.

ಆರ್ಥಿಕ ಸಂಕಷ್ಟದಿಂದ, ಶಿಕ್ಷಣ ಇಲಾ[illegible] ವಂಚನೆಯಿಂದ ಬೇಸತ್ತು, ಈ ನೌಕ[illegible] ಉಸಾಬರಿಯೇ ಬೇಡ ಎಂದು ಹೊ[illegible] ಲಮಾಣಿಯವರಿಗೆ ಸ್ಥಳೀಯರಾದ ಕೇಶವ ಭ[illegible] ಬೆಂಬಲಕ್ಕೆ ನಿಂತು, ಧೈರ್ಯ ಹೇಳಿ, ಕೆಲವು ದಿನ[illegible] ಮನೆಯಲ್ಲೇ ಉಳಿಸಿಕೊಂಡು, ಕೋರ್ಟು, [illegible] ವ್ಯವಹಾರಕ್ಕಾಗಿ ಸ್ವತಃ ತಾವೇ ಓಡ[illegible] ಅನ್ಯಾಯಕ್ಕೊಳಗಾದ ದಲಿತನಿಗೆ ನ್ಯಾ[illegible] ಕೊಡಿಸಲು ಹೆಣಗುತ್ತಿರುವುದು ಅಭಿನಂದನೀ[illegible] ಕಾರವಾರ, ಬೆಂಗಳೂರು, ಮೇಲ್ಮನವಿ, ವಕೀ[illegible] ಇತ್ಯಾದಿಗಳಿಗಾಗಿ ಈಗಾಗಲೇ 30-40 [illegible] ಸಾಲ ಮಾಡಿಕೊಂಡ ಲಮಾಣಿಯವರು [illegible] ನ್ಯಾಯ ಸಿಗದಿದ್ದರೆ ಕಛೇರಿಯೆದು[illegible] ಕುಟುಂಬದೊಂದಿಗೆ ಸೇರಿ ಉಪ[illegible] ಕೂಡುವುದೊಂದೇ ನನಗಿರುವ ದಾರಿ [illegible] ನೊಂದು ನುಡಿಯುತ್ತಿದ್ದಾರೆ.

ಲಮಾಣಿಯವರಿಗೆ ಆದ ಅನ್ಯಾಯ [illegible] ಕೆಲವು ಜನಪರ ಸಂಘಟನೆಗಳು ಡಿ.ಡಿ.[illegible] ಕಛೇರಿ ಎದುರು ಹೋರಾಟ ನಡೆಲು [illegible] ನಡೆಸಿದ್ದಾರೆ. ಈ ಬಗ್ಗೆ ವಿವಿಧ ಸಂಘಟ[illegible] (ದಲಿತ ಸಂಘರ್ಷ ಸಮಿತಿ ಇಲ್ಲ!) ಮಾನ[illegible] ದೃಷ್ಟಿಯಿಂದ ಲಮಾಣಿಯವರ ಪರ ಒತ್ತಡ[illegible] ನ್ಯಾಯ ಒದಗಿಸಿಕೊಡಬೇಕಾಗಿದೆ. ಯಾ[illegible] ಇಂದು ಲಮಾಣಿ.... ನಾಳೆ ಇನ್ನೊಬ್ಬರು[illegible]

ವರದಿ: [illegible]



ಸಂಯುಕ್ತ ಕರ್ನಾಟಕ ದಿನಪತ್ರಿಕೆಯುವರು ಕಮ್ಯುನಿಸ್ಟರ ವಿರುದ್ಧ ಮತ್ತೆ ಮತ್ತೆ ಸುಳ್ಳು ಬರೆಯಲು ಸಿ.ಸೀತಾರಾಂ ಎಂಬ ಗೋಬೆಲ್ಸ್‌ನನ್ನು ನೇಮಕ ಮಾಡಿಕೊಂಡಿದ್ದಾರೆ. ಈತ ನನ್ನ ಪ್ರತಿಯೊಂದು ಬರಹದಲ್ಲಿ ಎಡಪಂಥೀಯ, ಪ್ರಗತಿಪರ ಧೋರಣೆಗಳ ವಿರುದ್ಧ ಅಪಪ್ರಚಾರ ಮಾಡುವ ಗುರಿ ಇಟ್ಟುಕೊಂಡಿರುತ್ತಾನೆ. ಸೆಪ್ಟೆಂಬರ್ 10 ರ ಸಂಚಿಕೆಯಲ್ಲಿ ಕಮ್ಯುನಿಸ್ಟರ ವಿರುದ್ಧ ಸುಳ್ಳುಗಳ ಸರಮಾಲೆಯನ್ನು ಹೆಣೆದಿದ್ದಾನೆ. ಆ ಸುಳ್ಳುಗಳಿಗೆ ಇಲ್ಲಿದೆ ಉತ್ತರ

ಸಂಯುಕ್ತ ಕರ್ನಾಟಕದಲ್ಲಿ ಮತ್ತೆ ಗೋಬೆಲ್ಸ್ ಪ್ರಲಾಪ

ನಿತ್ಯಾನಂದಸ್ವಾಮಿ

"ಒಂದು ಸುಳ್ಳನ್ನು ಸಾಕಷ್ಟು ಬಾರಿ ಮತ್ತೆ ಮತ್ತೆ ಹೇಳಿದರೆ ಅದು ಸತ್ಯವಾಗುತ್ತದೆ" ಇದು ಫ್ಯಾಸಿಸ್ಟ್ ಸರ್ವಾಧಿಕಾರಿ ಹಿಟ್ಲರ್‌ನ ಕುಖ್ಯಾತ ಪ್ರಚಾರ ಮಂತ್ರಿ ಗೋಬೆಲ್ಸ್ ನೀಡಿದ ಕುಪ್ರಸಿದ್ಧ ಸಲಹೆ. ಈ ಸಲಹೆಯನ್ನು ಉಚಿತವಾಗಿ ಸ್ವೀಕರಿಸಿರುವ ಸಂಯುಕ್ತ ಕರ್ನಾಟಕ ದಿನಪತ್ರಿಕೆಯವರು ಕಮ್ಯುನಿಸ್ಟರ ವಿರುದ್ಧ ಮತ್ತೆ ಮತ್ತೆ ಸುಳ್ಳು ಬರೆಯಲು ಸಿ.ಸೀತಾರಾಂ ಎಂಬ ಗೋಬೆಲ್ಸ್‌ನನ್ನು ನೇಮಕ ಮಾಡಿಕೊಂಡಿದ್ದಾರೆ. ಈತ ವಾರಕ್ಕೊಮ್ಮೆಯಾದರೂ ವಕ್ಕರಿಸುತ್ತಾನೆ. ಈತ ತನ್ನ ಪ್ರತಿಯೊಂದು ಬರಹದಲ್ಲಿ ಎಡಪಂಥೀಯ, ಪ್ರಗತಿಪರ ಧೋರಣೆಗಳ ವಿರುದ್ಧ ಅಪಪ್ರಚಾರ ಮಾಡುವ ಗುರಿ ಇಟ್ಟುಕೊಂಡಿರುತ್ತಾನೆ. ಸೆಪ್ಟೆಂಬರ್ 10 ರ ಸಂಚಿಕೆಯಲ್ಲಿ ಕಮ್ಯುನಿಸ್ಟರ ವಿರುದ್ಧ ಸುಳ್ಳುಗಳ ಸರಮಾಲೆಯನ್ನು ಹೆಣೆದಿದ್ದಾನೆ. ಸಂಯುಕ್ತ ಕರ್ನಾಟಕದ ಓದುಗರೆಲ್ಲ ಆತನ ಮಾತುಗಳನ್ನೆಲ್ಲ 'ವೇದವಾಕ್ಯ'ಗಳೆಂದು ಪರಿಗಣಿಸುತ್ತಾರೆ ಎಂದು ಆತ ತಿಳಿದಿದ್ದರೆ ಅದು ಆತನ ಭ್ರಮೆಯಷ್ಟೆ.

ಸಂಘ ಪರಿವಾರಕ್ಕೆ ಸೇರಿದ ಸಂಸತ್ ಸದಸ್ಯನೊಬ್ಬನ ಲೇಖನವನ್ನು ಉಲ್ಲೇಖಿಸುತ್ತಾ 1948 ರಲ್ಲಿ ಹೈದರಾಬಾದಿನಲ್ಲಿ ರಜಾಕಾರರ ಪುಂಡಾಟಿಕೆ ನಡೆದಾಗ ಭಾರತೀಯ ಸೇನೆಯ ಕಾರ್ಯಾಚರಣೆಯ ವಿರುದ್ಧ ನಿಂತವರು ಕಮ್ಯುನಿಸ್ಟರು' ಎಂಬ ಮಿಥ್ಯಾರೋಪ ಮಾಡಿದ್ದಾನೆ. 'ತೆಲಂಗಾಣ ರೈತರ ಸಶಸ್ತ್ರ ಹೋರಾಟ' ಎಂದೇ ಪ್ರಸಿದ್ಧವಾದ ಹೋರಾಟದ ಇತಿಹಾಸವನ್ನು ಅಳಿಸಿಹಾಕಲು ಈ ಚಡ್ಡಿಚತುರರು ಇನ್ನೊಮ್ಮೆ ಹುಟ್ಟಿಬಂದರೂ ಅದು ಅವರಿಂದಾಗದು. ನಿಜಾಮನ ಪಾಳೇಗಾರಿ ಶೋಷಣೆಯ ವಿರುದ್ಧ ಕಮ್ಯುನಿಸ್ಟ್ ಪಕ್ಷದ ನೇತೃತ್ವದಲ್ಲಿ ರೈತರು ನಡೆಸಿದ ಆ ಐತಿಹಾಸಿಕ ಹೋರಾಟದ ಫಲವಾಗಿ ಇಡೀ ತೆಲಂಗಾಣ ಪ್ರದೇಶ ನಿಜಾಮನ ಆಳ್ವಿಕೆಯಿಂದ ಸ್ವತಂತ್ರವಾಗಿತ್ತು. ರಜಾಕಾರರ ಪುಂಡಾಟಿಕೆಯನ್ನು ಎದುರಿಸಿ ತಮ್ಮ ಪ್ರಾಣವನ್ನೇ ಬಲಿಕೊಟ್ಟವರು ಕಮ್ಯುನಿಸ್ಟರು. ಭಾರತೀಯ ಸೇನೆಯ ದೌರ್ಜನ್ಯಕ್ಕೂ ಬಲಿಯಾದವರು ಕಮ್ಯುನಿಸ್ಟರು. ದೇಶದ ಸ್ವಾತಂತ್ರ್ಯಕ್ಕಾಗಿ, ಸ್ಥಳೀಯ ಸಂಸ್ಥಾನಗಳ ವಿಲೀನಕ್ಕಾಗಿ, ಗೋವಾ ವಿಮೋಚನೆಗಾಗಿ, ಬಾಷಾವಾರು ಪ್ರಾಂತ್ಯಗಳ ರಚನೆಗಾಗಿ ಕಮ್ಯುನಿಸ್ಟರು ಮಾಡಿದ ತ್ಯಾಗ ಬಲಿದಾನದ ಚರಿತ್ರೆಯನ್ನು ಅಳಿಸಿಹಾಕಲು ಯಾರಿಂದಲೂ ಸಾಧ್ಯವಿಲ್ಲ.

ಕಮ್ಯುನಿಸ್ಟರಿಗೆ ಹಿಂದುಗಳಿಗಿಂತ ಮುಸಲ್ಮಾನರ ಬಗ್ಗೆ, ಕ್ರಿಶ್ಚಿಯನ್ನರ ಬಗ್ಗೆ ಹೆಚ್ಚು ಅನುಕಂಪ ಎಂಬುದು ಇವರ ಇನ್ನೊಂದು ಆರೋಪ. ಗುಜರಾತ್‌ನಲ್ಲಿ ಕೊಲ್ಲಲ್ಪಟ್ಟ ಮುಸಲ್ಮಾನರ ಬಗ್ಗೆ ಕಮ್ಯುನಿಸ್ಟರಿಗೆ ಆದಷ್ಟು ದುಃಖ ಕಾಶ್ಮೀರದ ಪಂಡಿತರ ಹತ್ಯೆಯಾದಾಗ ಆಗಿರುವುದಿಲ್ಲ ಎಂದು ಇವರ ಪ್ರಚಾರ. ಈ ಹಸಿ ಹಸಿ ಸುಳ್ಳನ್ನು ಹಲವು ಬಾರಿ ಹೇಳುವ ಮೂಲಕ ಅದನ್ನು ಸತ್ಯವಾಗಿಸುವ ಅನಗತ್ಯ ಪ್ರಯಾಸಕ್ಕೆ ಇವರು ಸಿಕ್ಕಿಹಾಕಿಕೊಂಡಿದ್ದಾರೆ. ಕಮ್ಯುನಿಸ್ಟರು ಮನುಷ್ಯರನ್ನು ಹಿಂದುಗಳಾಗಿ, ಮುಸಲ್ಮಾನರಾಗಿ ಕ್ರಿಶ್ಚಿಯನ್ನರಾಗಿ ಕಾಣುವುದಿಲ್ಲ. ಕಮ್ಯುನಿಸ್ಟರಿಗೆ ಚೀನಿಯರು, ಜಪಾನಿಯರು, ಆಫ್ರಿಕನ್ನರು, ಅಮೇರಿಕನ್ನರು ಎಂಬ ಬೇದವಿಲ್ಲ. ಮನುಷ್ಯರೆಲ್ಲರೂ ಸಮಾನರು, ಯಾರೂ ಮೇಲಲ್ಲ, ಕೀಳಲ್ಲ. ವರ್ಗಬೇದಗಳಿಲ್ಲದ, ವರ್ಗ ಶೋಷಣೆ ಇಲ್ಲದ ಸಮತಾ ಸಮಾಜವೇ ಕಮ್ಯುನಿಸ್ಟರ ಗುರಿ. ಆ ಗುರಿಸಾಧನೆಗಾಗಿ ಅನ್ಯಾಯ, ಅಸಮಾನತೆ, ಸುಲಿಗೆ, ಶೋಷಣೆಯ ಪರವಾದ ಶಕ್ತಿಗಳ ವಿರುದ್ಧ ಕಮ್ಯುನಿಸ್ಟರು ರಾಜಿ ಇಲ್ಲದ ಹೋರಾಟವನ್ನು ನಡೆಸುತ್ತಲೇ ಇರುತ್ತಾರೆ. ಯಾವ ಅಪಪ್ರಚಾರವೂ ಅವರನ್ನು ವಿಮುಖರಾಗಿಸದು.

ಭಾರತದ ಸಂದರ್ಭದಲ್ಲಿ ಮತಾಂಧತೆಯು ಮುಗ್ಧ ಜನರನ್ನು ಬಲಿತೆಗೆದುಕೊಳ್ಳುತ್ತಿರುವ ಬಗ್ಗೆ ಕಮ್ಯುನಿಸ್ಟರಿಗೆ ಬೇರೆ ಯಾರಿಗೂ ಇಲ್ಲದ ಆತಂಕ. ಮತಾಂಧತೆ ಹಿಂದುಗಳದ್ದೇ ಇರಲಿ, ಮುಸಲ್ಮಾನರದೇ ಇರಲಿ, ಎಲ್ಲ ಮತಾಂಧತೆ ಅಪಾಯಕಾರಿಯಾಗಿದೆ. ಒಂದು ಇನ್ನೊಂದನ್ನು ಬೆಳೆಸುತ್ತದೆ. ಒಂದು ಇನ್ನೊಂದನ್ನು ಪ್ರಚೋಧಿಸುತ್ತದೆ. ಹಿಂದು ಮತಾಂಧತೆ ಮತ್ತು ಇತರ ಎಲ್ಲಾ ಮತಾಂಧತೆಗಳನ್ನು ಕಮ್ಯುನಿಸ್ಟರು ಒಂದೇ ಸ್ವರದಿಂದ ಖಂಡಿಸುತ್ತಾರೆ.

ಕಾಶ್ಮೀರದಲ್ಲಿ ನಡೆಯುತ್ತಿರುವ ಹಿಂಸಾಚಾರಕ್ಕೂ ಗುಜರಾತ್‌ನಲ್ಲಿ ನಡೆದ ಹಿಂಸಾಚಾರಕ್ಕೂ ವ್ಯತ್ಯಾಸವಿದೆ. ಕಾಶ್ಮೀರದಲ್ಲಿ ನಡೆಯುತ್ತಿರುವುದು ಮತೀಯ ಭಯೋತ್ಪಾದನೆ ಎನ್ನಲಾಗುವುದಿಲ್ಲ. ಅಲ್ಲಿ ಭಯೋತ್ಪಾದಕರಾಗಿ ಎರಗಿ ಅಮಾಯಕರನ್ನು ಸಾಯಿಸುತ್ತಿರುವವರು ಮುಸ್ಲಿಂ ಮತಕ್ಕೆ ಸೇರಿದವರಾಗಿದ್ದರೂ ಅವರು ಕೇವಲ ಹಿಂದುಗಳನ್ನು ಮಾತ್ರ ಕೊಲ್ಲುತ್ತಿಲ್ಲ; ಕಾಶ್ಮೀರದ ವಿಷಯದಲ್ಲಿ ಅವರೊಂದಿಗೆ ಸಹಕರಿಸದ ಮುಸಲ್ಮಾನರನ್ನು ಸಹ ಅವರು ಕೊಲ್ಲುತ್ತಿದ್ದಾರೆ. ಅದೊಂದು ರಾಜಕೀಯ ವಿವಾದ. ಅಲ್ಲಿ ಮತ ಧರ್ಮದ ಪ್ರಶ್ನೆ ಮುಖ್ಯವಲ್ಲ. ಈ ವಿವಾದಕ್ಕೆ ರಾಜಕೀಯ ಪರಿಹಾರ ಸಾಧ್ಯವಿದೆ. ಅದು ಎರಡೂ ದೇಶಗಳ ನಡುವೆ ಮಾತುಕತೆಯ ಮೂಲಕ ಇತ್ಯರ್ಥವಾಗಬೇಕಾಗಿದೆ.

ಕಾಶ್ಮೀರದಲ್ಲಿ ಗಡಿಯಾಚೆಯಿಂದ ನಡೆಯುತ್ತಿರುವ ಭಯೋತ್ಪಾದನೆಯನ್ನು ಕಮ್ಯುನಿಸ್ಟರೂ ಸೇರಿದಂತೆ ಎಲ್ಲಾ ಪ್ರಜಾಪ್ರಭುತ್ವ ಪ್ರೇಮಿಗಳು ವಿರೋಧಿಸುತ್ತಾರೆ. ಪಾಕ್ ಬೆಂಬಲಿತ ಭಯೋತ್ಪಾದನೆಯನ್ನು ವಿರೋಧಿಸಿ ಅನೇಕ ಕಮ್ಯುನಿಸ್ಟ್ ಕಾರ್ಯಕರ್ತರು ತಮ್ಮ ಪ್ರಾಣ ಕಳೆದುಕೊಂಡಿರುವ ಸತ್ಯವನ್ನು ಸಂಯುಕ್ತ ಕರ್ನಾಟಕದ ಗೋಬೆಲ್ಸ್ ಮರೆ ಮಾಡುತ್ತಿದ್ದಾನೆ.

ಜಮ್ಮುಕಾಶ್ಮೀರ ವಿಧಾನಸಭೆಯಲ್ಲಿ ಸಿಪಿಐ(ಎಂ) ಸದಸ್ಯರಾಗಿರುವ ಕಾಮ್ರೇಡ್ ತರಿಗಾಮಿಯವರನ್ನು ಕೊಲೆಮಾಡಲು ಭಯೋತ್ಪಾದಕರು ಹಲವು ಸಲ ಪ್ರಯತ್ನಪಟ್ಟಿದ್ದಾರೆ ಎಂಬುದು ಗುಟ್ಟಿನ ವಿಷಯವಲ್ಲ. ಕಾಶ್ಮೀರದ ಜನತೆಯನ್ನು ಹೆಚ್ಚೆಚ್ಚು ವಿಶ್ವಾಸಕ್ಕೆ ತೆಗೆದುಕೊಂಡು, ದೇಶದ ಸಂವಿಧಾನದ ಚೌಕಟ್ಟಿನೊಳಗೆ ಅವರಿಗೆ ಗರಿಷ್ಠ ಸ್ವಾಯತ್ತತೆಯನ್ನು ನೀಡುವ ಮೂಲಕ ಕಾಶ್ಮೀರ ಸಮಸ್ಯೆಗೆ ಪರಿಹಾರ ಸಾಧ್ಯ ಎನ್ನುವುದು ಸಿಪಿಐ(ಎಂ)ನ ಬದಲಾಗದ ನಿಲುವು.

ಕಮ್ಯುನಿಸ್ಟರು ಮನುಷ್ಯರನ್ನು ಹಿಂದುಗಳಾಗಿ, ಮುಸಲ್ಮಾನರಾಗಿ ಕ್ರಿಶ್ಚಿಯನ್ನರಾಗಿ ಕಾಣುವುದಿಲ್ಲ. ಕಮ್ಯುನಿಸ್ಟರಿಗೆ ಚೀನಿಯರು, ಜಪಾನಿಯರು, ಆಫ್ರಿಕನ್ನರು, ಅಮೇರಿಕನ್ನರು ಎಂಬ ಬೇದವಿಲ್ಲ. ಮನುಷ್ಯರೆಲ್ಲರೂ ಸಮಾನರು, ಯಾರೂ ಮೇಲಲ್ಲ, ಕೀಳಲ್ಲ. ವರ್ಗಬೇದಗಳಿಲ್ಲದ, ವರ್ಗ ಶೋಷಣೆ ಇಲ್ಲದ ಸಮತಾ ಸಮಾಜವೇ ಕಮ್ಯುನಿಸ್ಟರ ಗುರಿ. ಆ ಗುರಿಸಾಧನೆಗಾಗಿ ಅನ್ಯಾಯ, ಅಸಮಾನತೆ, ಸುಲಿಗೆ, ಶೋಷಣೆಯ ಪರವಾದ ಶಕ್ತಿಗಳ ವಿರುದ್ಧ ಕಮ್ಯುನಿಸ್ಟರು ರಾಜಿ ಇಲ್ಲದ ಹೋರಾಟ ನಡೆಸುತ್ತಲೇ ಇರುತ್ತಾರೆ.

ಕಾಶ್ಮೀರಕ್ಕೆ ವಿಶೇಷ ಸ್ಥಾನಮಾನ ಕೊಟ್ಟಿರುವುದು 'ನೆಹರುರವರು ಕಾಶ್ಮೀರದವರು ಎಂಬ ಕಾರಣಕ್ಕಾಗಿ' ಎಂದು ಹೇಳುವ ಮೂಲಕ ಸಂಯುಕ್ತ ಕರ್ನಾಟಕದ ಈ ಗೋಬೇಲ್ಸ್ ಕಾಶ್ಮೀರಿ ಜನತೆಯ ತ್ಯಾಗಬಲಿದಾನದ ಚರಿತ್ರೆಯನ್ನು ಅಲ್ಲಗಳೆಯುವ ದುಸ್ಸಾಹಸಕ್ಕೆ ಕೈಹಾಕಿದ್ದಾರೆ. ಭಾರತದೊಳಗೆ ವಿಲೀನವಾಗಲು ಒಪ್ಪದ ಹಿಂದು ಅರಸ ರಾಜಾ ಹರಿಸಿಂಗ್ ವಿರುದ್ಧ ಹಾಗೂ ಗಡಿಯಾಚೆಗಿನ ಪುಂಡಾಟಿಕೆಯ ವಿರುದ್ಧ ಕಾಶ್ಮೀರದ ಹುಲಿ ಶೇಖ್ ಅಬ್ದುಲ್ಲಾರವರ ನೇತೃತ್ವದಲ್ಲಿ ಕಾಶ್ಮೀರಿ ಜನತೆ ನಡೆಸಿದ ಹೋರಾಟಕ್ಕೆ ಪ್ರತಿಯಾಗಿ ಕಾಶ್ಮೀರಕ್ಕೆ ವಿಶೇಷ ಸ್ಥಾನಮಾನ ದೊರಕಿದ್ದು. ಆದರೆ ಅಂದು ಕೊಟ್ಟ ಭರವಸೆಯನ್ನು ಆನಂತರ ನೆಹರು ಸರ್ಕಾರ ಜಾರಿಗೊಳಿಸದೆ ಹೋದದ್ದು, ಅಂದಿನಿಂದ ಇಲ್ಲಿಯವರೆಗೆ ಕಾಶ್ಮೀರಿ ಜನತೆಗೆ ಭಾರತ ಸರ್ಕಾರ ಮೋಸ ಮಾಡುತ್ತಾ ಬಂದದ್ದು ಇಂದಿನ ಈ ಪರಿಸ್ಥಿತಿಗೆ ಕಾರಣವಾಗಿದೆ. ಮುಸಲ್ಮಾನರ ಬಗ್ಗೆ ಕುರುಡು ದ್ವೇಷ ಸಾಧಿಸುತ್ತಿರುವ ಬಿಜೆಪಿ ಸರ್ಕಾರ ಈ ತಪ್ಪನ್ನು ಸರಿಪಡಿಸೀತೆ?

ಈ ಕುರುಡು ದ್ವೇಷವನ್ನು ಸಾಧಿಸುವ ಮೂಲಕ ಅಧಿಕಾರಕ್ಕೆ ಬರುವುದು ಬಹಳ ಸುಲಭ ಎಂದು ಗುಜರಾತ್ ಪ್ರಯೋಗವನ್ನು ವಾಜಪೇಯಿ ಅಡ್ವಾನಿಗಳು ಸಮರ್ಥಿಸುತ್ತಿದ್ದಾರೆ. ಗೋದ್ರಾದಲ್ಲಿ ನಡೆದ ಘಟನೆಯನ್ನು ಇಡೀ ಜಗತ್ತೆ ಖಂಡಿಸಿದೆ. ತಪ್ಪಿತಸ್ಥರಿಗೆ ಉಗ್ರಶಿಕ್ಷೆ ಆಗಲೇಬೇಕು. ಗೋದ್ರಾ ಘಟನೆಗೆ ಕೆಲವು ಮತಾಂಧ ಮುಸಲ್ಮಾನರು ಕಾರಣರಾಗಿದ್ದರೆ ಅವರನ್ನು ಪತ್ತೆಹಚ್ಚಿ ಶಿಕ್ಷಿಸಲೇಬೇಕು. ಆದರೆ ಗೋದ್ರಾ ಘಟನೆಯನ್ನು ನೆಪ ಮಾಡಿಕೊಂಡು ಗುಜರಾತ್ ಸರ್ಕಾರವೇ ಮುಸ್ಲಿಂ ಅಲ್ಪಸಂಖ್ಯಾತರ ಮಾರಣಹೋಮ ಮಾಡಿದ್ದು ಅಕ್ಷಮ್ಯ ಅಪರಾಧ. ಮುಖ್ಯಮಂತ್ರಿ ಮೋದಿಯನ್ನು ಗಲ್ಲಿಗೆ ಹಾಕಿದರೂ ಈ ಘೋರ ಅಪರಾಧಕ್ಕೆ ತಕ್ಕ ಶಿಕ್ಷೆಯಾಗದು. ಒಂದು ಕೋಮಿನವರು ಇನ್ನೊಂದು ಕೋಮಿನವರನ್ನು ಸಹಿಸದಿರುವ ಈ ಪ್ರವೃತ್ತಿ ನಮ್ಮ ದೇಶದ ಸಂವಿಧಾನದ ಮೂಲ ಆಶಯಗಳಿಗೆ ವಿರುದ್ಧವಾದುದು. ಮಾನವೀಯತೆಯನ್ನು ಪ್ರೀತಿಸುವ ಪ್ರತಿಯೊಬ್ಬ ಕಮ್ಯುನಿಸ್ಟ್ ಗುಜರಾತ್ ಜನಾಂಗ ಹತ್ಯೆಯನ್ನು ಉಗ್ರವಾಗಿ ಖಂಡಿಸುತ್ತಾನೆ. ಬೆಸ್ಟ್‌ಬೇಕರಿ ಪ್ರಕರಣದಲ್ಲಿ ಸುಪ್ರಿಂ ಕೋರ್ಟಿನ ತೀರ್ಪನ್ನು ಕಮ್ಯುನಿಸ್ಟರು ಸ್ವಾಗತಿಸಿದ್ದಾರೆ. ಆದರಿಂದ ಮುಖಭಂಗ ಅನುಭವಿಸಿರುವ ಚಡ್ಡಿ ಪತ್ರಕರ್ತ ಹೀಗೆ ಪ್ರಲಾಪಿಸಿದ್ದರಲ್ಲಿ ಆಶ್ಚರ್ಯವಿಲ್ಲ.

ಸಿಬಿಐ ಪಕ್ಷಪಾತದಿಂದ ಆಡ್ವಾಣಿ ನಿರ್ದೋಷಿ!


ಬಾಬ್ರಿ ಮಸೀದಿ ಧ್ವಂಸ ಪ್ರಕರಣದಲ್ಲಿ ಕೇಂದ್ರ ತನಿಖಾದಳ (ಸಿ.ಬಿ.ಐ) ವು ಅನುಸರಿಸಿದ ಪಕ್ಷಪಾತದಿಂದಾಗಿ ರಾಯಬರೇಲಿ ನ್ಯಾಯಾಲಯವು ಎಲ್.ಕೆ. ಆಡ್ವಾಣಿ ಅವರನ್ನು ದೋಷ ಮುಕ್ತರನ್ನಾಗಿ ಪರಿಗಣಿಸಿದೆ. ಇಂಡಿಯನ್ ಪಿನಲ್‌ಕೋಡ್‌ನ ಕಲಂ 120 (ಬಿ) ಪ್ರಕಾರ 'ಕ್ರಿಮಿನಲ್ ಕುತಂತ್ರ' ದ ಆರೋಪವನ್ನು ಆರೋಪ ಪಟ್ಟಿಯಿಂದ ಸಿ.ಬಿ.ಐ. ಕೈ ಬಿಟ್ಟಿತ್ತು. ಅಲ್ಲದೆ ಮುಖ್ಯ ಆರೋಪಿಯಾದ ಎಲ್.ಕೆ. ಆದ್ವಾನಿ ವಿರುದ್ಧ ಯಾವುದೇ ಶ್ರವಣ ಮಾಧ್ಯಮ ಅಥವಾ ದೃಶ್ಯಮಾಧ್ಯಮದ ಸಾಕ್ಷಿ ದೊರೆತಿಲ್ಲ ಎಂದು ಸಿಬಿಐ ನ್ಯಾಯಾಲಯಕ್ಕೆ ತಿಳಿಸಿತ್ತು.

1997ರ ಸೆಪ್ಟೆಂಬರ್ 9 ರಂದು ಸಿಬಿಐ ಹಾಕಿದ ಆರೋಪಪಟ್ಟಿ (chargesheet) ಆಧಾರದಲ್ಲಿ ಲಕ್ನೋ ಸೆಷನ್ಸ್ ನ್ಯಾಯಾಲಯವು ಎಲ್.ಕೆ. ಅದ್ವಾನಿ ಸಹಿತ 49 ಮಂದಿ ಬಿಜೆಪಿ ಮತ್ತು ವಿ.ಹೆಚ್.ಪಿ. ಮುಖಂಡರ ಮೇಲೆ ಚಾರ್ಜ್‌ಶೀಟ್ ಹಾಕಿತ್ತು. ಆ ಸಂದರ್ಭದಲ್ಲಿ ಅಲ್ಲಿನ ಹೆಚ್ಚುವರಿ ಸೆಷನ್ಸ್ ನ್ಯಾಯಾಧೀಶರು, ನಮಗೆ ಒದಗಿಸಿದ ಮಾಹಿತಿಯ ಪ್ರಕಾರ, ಈ ಕೇಸಿನಲ್ಲಿರುವ ಆರೋಪಿತರು, ರಾಮ ಜನ್ಮಭೂಮಿ / ಬಾಬ್ರಿ ಮಸೀದಿ ವಿವಾದಿತ ಕಟ್ಟಡವನ್ನು ಧ್ವಂಸಗೊಳಿಸಲು ಕ್ರಿಮಿನಲ್ ಕುತಂತ್ರವನ್ನು ನಡೆಸಿದ್ದು, 1990ರಲ್ಲಿ ಆರಂಭಿಸಿ 1992ರ ಡಿಸೆಂಬರ್6 ರಂದು ಪೂರ್ಣ ಗೊಳಿಸಿದರು. ಬೇರೆ ಬೇರೆ ಸಂದರ್ಭದಲ್ಲಿ, ವಿವಿಧ ಸ್ಥಳಗಳಲ್ಲಿ, ಲಾಲ್‌ಕೃಷ್ಣ ಅದ್ವಾನಿ ಮತ್ತಿತರರು ವಿವಾದಿತ ಕಟ್ಟಡವನ್ನು ಧ್ವಂಸಗೊಳಿಸಲು ಸಂಚುಹೂಡಿದ್ದಾರೆ." ಎಂದು ಹೇಳಿದ್ದರು.

ಅಂದರೆ ಮೊದಲನೋಟಕ್ಕೆ ದೊರೆತ ಖಚಿತವಾದ ಆಧಾರಗಳ ಮೇಲೆ ಎಲ್.ಕೆ. ಆದ್ವಾನಿ, ಮುರಳಿಮನೋಹರ ಜೋಷಿ, ಉಮಾ ಭಾರತಿ ಮತ್ತಿತರರ ಮೇಲೆ ಆರೋಪಗಳನ್ನು ಹೇರಲಾಗಿತ್ತು. ಈ ಆರೋಪ ಪಟ್ಟಿಯನ್ನು ಉಚ್ಚ ನ್ಯಾಯಾಲಯದಲ್ಲಿ ಪ್ರಶ್ನಿಸಲಾಗಿದ್ದು, ರಾಜ್ಯ ಸರಕಾರದ ದೋಷದಿಂದಾಗಿ, ತಾಂತ್ರಿಕ ಕಾರಣಗಳನ್ನು ನೀಡಿ ಅದನ್ನು ವಜಾ ಗೊಳಿಸಲಾಗಿತ್ತು. ಅಂದಿನ (ಬಿಜೆಪಿ ನೇತೃತ್ವದ) ರಾಜನಾಥ್ ಸಿಂಗ್ ಸರಕಾರವು ಅಗತ್ಯವಾದ ದೋಷಗಳನ್ನು ಸರಿಪಡಿಸಿ ಹೊಸ ನೋಟಿಫಿಕೇಶನ್ ಮಾಡಲಿಲ್ಲ. ನಂತರ ಸುಪ್ರೀಂ ಕೋರ್ಟಿನಲ್ಲಿ ಅದನ್ನು ಕೊಂಡೊಯ್ದಾಗ ಬಿಜೆಪಿಯ ಮೇಲೆ ಅವಲಂಬಿತವಾಗಿದ್ದ ಮಾಯಾವತಿ ಸರಕಾರವು ಹೊಸ ನೋಟಿಫಿಕೇಶನ್ ನೀಡಿದರೂ ಕೂಡಾ, ಅದನ್ನು ರಾಯಬರೇಲಿ ಕೋರ್ಟಿಗೆ ಕಳಿಹಿಸಿ ಪುನಃ ಹೊಸತಾಗಿ ವಿಚಾರಣೆ ಆರಂಭಿಸುವಂತೆ ವಿನಂತಿಮಾಡಿತು.

ಕೇಂದ್ರ ತನಿಖಾದಳ (ಸಿಬಿಐ) ತನ್ನ ಮೂಲ ಆರೋಪ ಪಟ್ಟಿಯಿಂದ ದೂರಸರಿದು ವಿಕೃತಗಳಿಸಿದ ಆರೋಪ ಪಟ್ಟಿಯನ್ನು ಸಿದ್ಧಗೊಳಿಸಿದುದರಿಂದ ರಾಯಬರೀಲಿ ನ್ಯಾಯಾಲಯವು ಅದ್ವಾನಿಯವರನ್ನು ದೋಷಮುಕ್ತರನ್ನಾಗಿಸಿದೆ. ಅಂದರೆ ಸಿಬಿಐನ ಪಕ್ಷಪಾತದಿಂದಾಗಿ ನ್ಯಾಯಾಲಯವು ಅಧ್ವಾನಿಯವರನ್ನು ನಿರ್ದೋಷಿ ಎಂದು ಹೇಳಿದೆ.

ಬಾಬ್ರಿ ಮಸೀದಿ ಧ್ವಂಸಗೊಳಿಸಲು ಕಾರಣರಾದವರನ್ನು ನ್ಯಾಯಾಲಯದ ಕಟಕಟೆಯ ಮುಂದೆ ನಿಲ್ಲಿಸಿ, ಆರೋಪಗಳಿಗೆ ಉತ್ತರಿಸುವಂತೆ ಮಾಡದೇಹೋದಲ್ಲಿ, ಅದು ಅನ್ಯಾಯದ ಪರಮಾವಧಿಯಾಗುತ್ತದೆ. ಆದ್ದರಿಂದ ಸಿಬಿಐ ಕೂಡಲೇ ಸೂಕ್ತ ಕ್ರಮ ಕೈಗೊಳ್ಳಬೇಕು. ಕಾನೂನಿನ ಪ್ರಾಧಾನ್ಯತೆ ಉಳಿಯಬೇಕೆಂದಾದಲ್ಲಿ 1997ರಲ್ಲಿ ಸಿಬಿಐ ಹಾಕಿದ ಮೂಲ ಆರೋಪ ಪಟ್ಟಿಯ ಆಧಾರದಲ್ಲಿ ಎಲ್.ಕೆ. ಆಡ್ವಾನಿಯವರು ಆರೋಪವನ್ನು ಎದುರಿಸಬೇಕು.



ದಕ್ಷಿಣ ಕನ್ನಡ ಜಿಲ್ಲೆಯ ಇತಿಹಾಸ ಪ್ರಸಿದ್ಧವಾದ


ಮುಲ್ಕಿ ರೈತ ಸತ್ಯಾಗ್ರಹ

ಮುಲ್ಕಿಯಲ್ಲಿ ಚಿನ್ನ ಪೂಜಾರಿ ಎಂಬುವರನ್ನು ಒಕ್ಕಲೆಬ್ಬಿಸಿದ್ದನ್ನು ವಿರೋಧಿಸಿ, ಪ್ರಬಲವಾಗಿ ಪ್ರತಿಭಟನೆ ಹೋರಾಟ ನಡೆಸಲು ನಿರ್ಧರಿಸಲು ರೈತ ಸಂಘ ಮತ್ತು ಪಕ್ಷದಲ್ಲಿ ತೀರ್ಮಾನಿಸಲಾಯಿತು. ಅದರಂತೆ ಮಂಗಳೂರು ತಾಲೂಕಿನ ಮುಲ್ಕಿ ಪ್ರದೇಶದ ಗ್ರಾಮಭಾಗದಲ್ಲಿ ಹೋರಾಟ ಪ್ರಾರಂಭವಾಯಿತು. ಕಾನೂನಿನ ಯಾವುದೇ ರಕ್ಷಣೆ ಇರದಿದ್ದ 1955 ರಲ್ಲಿ ಈ ಹೋರಾಟ ಹಮ್ಮಿಕೊಂಡು ದಿನ ಕಳೆದಂತೆ ಹೋರಾಟದ ಸ್ವರೂಪ ತೀವ್ರಗೊಂಡಿತು. ದಕ್ಷಿಣ ಕನ್ನಡ ಜಿಲ್ಲೆ ಎಲ್ಲೆಡೆಗಳಿಂದ ಕಾರ್ಮಿಕರ ಬೆಂಬಲದೊಂದಿಗೆ ರೈತರು ತಂಡತಂಡಗಳಲ್ಲಿ ಬಂದು ದಿನಂಪ್ರತಿ ಪ್ರಬಲ ಪ್ರತಿಭಟನೆಯೊಂದಿಗೆ ಸತ್ಯಾಗ್ರಹ ನಡೆಸಿ ಬಂಧನಕ್ಕೊಳಗಾದರು. ಬಂಧಿಸಲ್ಪಟ್ಟವರನ್ನು ಉಡುಪಿಯ ನ್ಯಾಯಾಲಯದಲ್ಲಿ ವಿಚಾರಣೆ ನಡೆಸಿ ಒಂದು ತಿಂಗಳ ಸಜೆಯನ್ನು ನೀಡುವುದು ನಡೆಯಿತು. ನೂರಾರು ಕಾರ್ಯಕರ್ತರು ಹುರುಪಿನಿಂದ ಮುಂದೆ ಬಂದು ಸತ್ಯಾಗ್ರಹದಲ್ಲಿ ಭಾಗವಹಿಸುವ ಮೂಲಕ ಬಂಧನಕ್ಕೊಳಗಾಗಿ ಶಿಕ್ಷಿಸಲ್ಪಟ್ಟು ಜೈಲು ಸೇರಿದರು.

ಈ ರೀತಿಯಾಗಿ ಬಂಧಿಸಲ್ಪಟ್ಟವರಲ್ಲಿ ಸಂಗಾತಿಗಳಾದ ಎ.ಕೃಷ್ಣಶೆಟ್ಟರು, ಪುತ್ತೂರಿನ ಕೆ.ಸಂಜೀವ ರೈ ಮೊದಲಾದವರ ಮೇಲೆ ಕಟ್ಲೆ ಹಾಕಲಾಯಿತು. ಸತ್ಯಾಗ್ರಹದ ಕೊನೆಯ ಹಂತವಾಗಿ ಮುಲ್ಕಿಗೆ ಜಿಲ್ಲೆಯಾದ್ಯಂತದ ಕಾರ್ಯಕರ್ತರು ಮುಖಂಡರು ಸೇರಿದಂತೆ ಸಾವಿರಾರು ಮಂದಿ ಸೇರಿ ಮುತ್ತಿಗೆ ಹಾಕುವ ಕಾರ್ಯಕ್ರಮ ನಿರ್ಧರಿಸಲಾಯಿತು. ಈ ಹೋರಾಟ ನಡೆಯದಂತೆ ಪೋಲೀಸರು ಮುಲ್ಕಿಯ ಎಲ್ಲಾ ದಾರಿಗಳಲ್ಲಿ ಸುತ್ತುವರಿದು ಸತ್ಯಾಗ್ರಹದಲ್ಲಿ ಭಾಗವಹಿಸಿದವರನ್ನು ಬಂಧಿಸಲಾಯಿತು. ಹೀಗೆ ಸಾವಿರಾರು ಮಂದಿ ಸಾಮೂಹಿಕ ಬಂಧನಕ್ಕೊಳಗಾದರು. ಅಷ್ಟು ಮಂದಿಯನ್ನು ಬಂಧಿಸಿಡಲು ಸಾಧ್ಯವಾಗದೆ ಸಂಜೆಗೆ ಬಿಡುಗಡೆಗೊಳಿಸಲಾಯಿತು. ಈ ಹೋರಾಟದ ತೀವ್ರತೆ ಎಷ್ಟಿತ್ತೆಂದರೆ ಎಲ್ಲೆಲ್ಲೂ ಪೋಲಿಸರದೆ ರಾಜ್ಯವೆಂಬಂತಾಯಿತು. ಆದರೆ ಮತ್ತೆ ಆ ರೀತಿಯಾಗಿ ರೈತರನ್ನು ಒಕ್ಕಲೆಬ್ಬಿಸುವುದು ಬಹಳಷ್ಟು ಕಡಿಮೆಯಾಯಿತೆಂದು ನನ್ನ ಸ್ವಂತ ಅನುಭವದಿಂದ ಹೇಳಬಹುದು.

ಹೋರಾಟದಲ್ಲಿ ಜಯ ಲಭಿಸದೇ ಇದ್ದರೂ ಎಲ್ಲಾ ಕಡೆಗಳಲ್ಲಿ ರೈತರಲ್ಲಿ ಹುರುಪು ಬಂದು ಅನೇಕ ಕಾರ್ಯಕರ್ತರು ಮುಂದೆ ಬರುವಂತಾಯಿತು. ಮುಲ್ಕಿಯಲ್ಲಿ ಭೂಮಿ ಕಳಕೊಂಡು ನಿರ್ಗತಿಕರಾದ ಕಾಂ.ಚಿನ್ನ ಪೂಜಾರಿಯವರು ರೈತಸಂಘದ ಕಾರ್ಯಕರ್ತರಾಗಿ ನಂತರದಲ್ಲಿ ಮುಖಂಡನಾಗಿ ಬೆಳೆದುಬಂದು ಮುಲ್ಕಿ ಮತ್ತದರ ಆಸುಪಾಸಿನ ಹಲವಾರು ಗ್ರಾಮಗಳಲ್ಲಿ ರೈತ ಸಂಘಟನೆ ಕಟ್ಟಿ ಬೆಳೆಸಲು ಕಾರಣರಾದರು. ಅಂದಿನ ಕಾಲದಲ್ಲಿ ಕುಟುಂಬಕ್ಕೆ ನಾಲ್ಕೈದು ಮಕ್ಕಳಿರುವುದು ವಾಡಿಕೆ. ಅದರಂತೆ ಚಿನ್ನ ಪೂಜಾರಿಯವರಿಗೆ 5 ಮಂದಿ ಚಿಕ್ಕ ಮಕ್ಕಳು 12 ವರ್ಷದ ಕೆಳಗಿನವರಿದ್ದರು. ಅವರ ಬದುಕಿನ ದಾರಿ ಏನೆಂದು ಚಿಂತಿಸದೆ ಪ್ರಾರಂಭದಲ್ಲಿ ರೈತರೊಡನೆ ಕಷ್ಟವನ್ನು ಹಂಚಿಕೊಂಡು ಅವರೊಡನೆ ಬೆರೆತು ಅವರಲ್ಲಿ ಒಬ್ಬರಾಗಿ ರೈತರ ಪ್ರೀತಿ ವಿಶ್ವಾಸ ಗಳಿಸಿದ ಮುಖಂಡರಾಗಿ ಅನೇಕ ಸಭೆ ಸಮ್ಮೇಳನಗಳಲ್ಲಿ ಭಾಗವಹಿಸಿದ್ದರು. 1956 ರಲ್ಲಿ ಸೇರಿದ ಪ್ರಥಮ ಕರ್ನಾಟಕ ರಾಜ್ಯ ಸಮ್ಮೇಳನದಲ್ಲಿಯೂ ಪ್ರತಿನಿಧಿಯಾಗಿ ಭಾಗವಹಿಸಿದ್ದರು. ನಂತರದಲ್ಲಿ ರೈತ ಸಂಘದ ಪೂರ್ಣ ಕಾಲದ ಕಾರ್ಯಕರ್ತರೆಂದು ಗುರುತಿಸಲ್ಪಟ್ಟು ತಮ್ಮ ಜೀವನದ ಕೊನೆಯ ದಿನದವರೆಗೆ ಪಕ್ಷದ ಮೇಲಿನ ನಿಷ್ಠೆಯನ್ನು ಉಳಿಸಿಕೊಂಡಿದ್ದರು. ಇಂತಹ ಕಾರ್ಯಕರ್ತರನ್ನು ಪಡೆದ ಹೆಮ್ಮೆಯ ಜಿಲ್ಲೆ ನಮ್ಮದು.

ಈ ಹೋರಾಟದ ಯಶಸ್ಸಿಗಾಗಿ ಜಿಲ್ಲೆಯ ಎಲ್ಲೆಡೆಯಿಂದ ಕಾಲ್ನಡಿಗೆ ಜಾಥಾಗಳನ್ನು ಮುಲ್ಕಿಗೆ ಸಂಘಟಿಸಲಾಯಿತು. ಉಡುಪಿಯಿಂದ



ಡೇವಿಡ್ ಕರ್ಕಡ, ಉಡುಪಿ

ಮುಲ್ಕಿಗೆ ಹೊರಟ ನೂರಕ್ಕೂ ಹೆಚ್ಚಿನ ಮಂದಿ ಭಾಗವಹಿಸಿದ ಜಾಥಾದ ಮುಖಂಡ ನಾಗಿ ನಾನು ಭಾಗವಹಿಸಿದ್ದನ್ನು ನೆನಪಿಸಿಕೊಂಡಾಗ ನಾವು ಸಾಗಿ ಬಂದ ದಾರಿ ಎಷ್ಟು ಕಠಿಣವಾಗಿತ್ತು ಎಂಬುದು ತಿಳಿಯುತ್ತದೆ. ಮಂಗಳೂರು, ಬಂಟ್ವಾಳ ಮೊದಲಾದೆಡೆಗಳಿಂದಲೂ ಕಾಲ್ನಡಿಗೆ ಜಾಥಾಗಳು ಮುಲ್ಕಿಗೆ ಬಂದಿದ್ದವು. ಕಾರ್ಮಿಕ ನಾಯಕರಾದ ಕಾಂ. ಬಿ.ವಿ.ಕಕ್ಕಿಲ್ಲಾಯ, ಕಾಂ.ಶಾಂತಾರಾಮ ಪೈಯವರು ಹೋರಾಟದಲ್ಲಿ ಕಾರ್ಮಿಕ ವರ್ಗದ ಬೆಂಬಲದೊಂದಿಗೆ ಭಾಗಿಯಾಗಿದ್ದರು.

ಎರಡನೇ ದಕ್ಷಿಣ ಕನ್ನಡ ಜಿಲ್ಲಾ ರೈತ ಸಮ್ಮೇಳನ ಮಂಗಳೂರಿನಲ್ಲಿ ಸೇರಿದಾಗ 50 ಕ್ಕೂ ಮಿಕ್ಕಿದ ಎತ್ತಿನ ಗಾಡಿಗಳಲ್ಲಿ ರೈತರ ಹೊರೆ ಕಾಣಿಕೆ ಮೆರವಣಿಗೆ ಮಂಗಳೂರಿಗೆ ಬಂದಿತ್ತು. ಬಲಾತ್ಕಾರದ ಒಕ್ಕಲೆಬ್ಬಿಸುವಿಕೆಯ ವಿರೋಧವಾಗಿ ಎಲ್ಲಾ ತಾಲೂಕುಗಳಲ್ಲಿ ಪ್ರಬಲವಾದ ಹೋರಾಟಗಳು ನಡೆದು ಬಂದವು ಮತ್ತು ಎಲ್ಲಾ ಹೆಚ್ಚಿನ ಹೋರಾಟಗಳಲ್ಲಿ ಜಯಗಳಿಸಲು ಸಾಧ್ಯವಾಯಿತು.

ರೈತರು ಬೆಳೆದ ಬೆಳೆಗಳನ್ನು ಕಟಾವು ಮಾಡಲು ಭೂಮಾಲಿಕರ ಗೂಂಡಾಪಡೆಗಳಿಗೂ ಹೆದರದೆ ರೈತ ಬೆಳೆದ ಫಸಲು ರೈತನ ಮನೆಗೆ ಎಂಬ ರೀತಿಯಲ್ಲಿ ಹೋರಾಟವನ್ನು ಮುಂದುವರಿಸಲು ಹಂಚಿನ ಕಾರ್ಮಿಕರು, ನೇಕಾರ ಕಾರ್ಮಿಕರು, ಬೀಡಿ ಕಾರ್ಮಿಕರು ಮುಂದೆ ಬಂದರು. ಅನೇಕ ಕಡೆಗಳಲ್ಲಿ ತೀವ್ರತರದ ಹೋರಾಟಗಳೂ ನಡೆದವು. ಯಾವುದೇ ದಬ್ಬಾಳಿಕೆಗೂ ಬಗ್ಗದೇ ಕಾರ್ಮಿಕ ಸಖ್ಯತೆಯಿಂದ, ಕಾರ್ಮಿಕರ ನೇತೃತ್ವದಲ್ಲಿ ಈ ರೀತಿಯಾಗಿ ಹೋರಾಟ ಬೆಳೆದುಬಂದು "ಭೂಸುಧಾರಣಾ ಕಾನೂನು ಜ್ಯಾರಿಯಾಗುವಂತೆ ಒತ್ತಾಯಿಸು... ಪ್ರಬಲವಾದ ಚಳುವಳಿ ಬೆಳೆದುಬಂತು. ಒತ್ತಾಯ ತೀವ್ರಗೊಂಡಿತು.

ಪರಿಸ್ಥಿತಿಯ ತೀವ್ರತೆಯನ್ನರಿತ ಹಲವಾರು ಭೂಮಾಲಿಕರು ಸಂಧಾನಕ್ಕಾಗಿ ಮುಂದೆ ಬಂದು ರೈತಸಂಘದ ಕಛೇರಿಗಳಿಗೆ ಎಲ್ಲ... ಬರುವಂತಾಯಿತು. ಕಾನೂನುಗಳೇ ಇಲ್ಲದೆ ... ಅಂದಿನ ದಿನಗಳಲ್ಲಿ ಪ್ರಬಲವಾದ ಸಂಘಟ... ಚಳುವಳಿ, ಹೋರಾಟದ ಫಲವಾಗಿ ಈ ರೀತಿಗ... ಹಲವಾರು ಕಡೆಗಳಲ್ಲಿ ರೈತರ ಭೂಮಿ ಉಳಿಸ... ಸಾಧ್ಯವಾಯಿತು.


ಶಿರಸಿಯಲ್ಲಿ ಕೋಮುದಳ್ಳುರಿ ಹಬ್ಬಿಸಲು ವಿಫಲ ಯತ್ನ....

ಪುಟ 3 ರಿಂದ

ವ್ಯಾಪಾರಸ್ಥರು ಕೂಡಲೇ ಇವರ ದೈಹಿಕ ಹಲ್ಲೆಯನ್ನು ಖಂಡಿಸಿದ್ದರು. ಕಳೆದ ವರ್ಷಗಳಲ್ಲಿ ಸಾಲವಸೂಲಿಗೆ ಹೋದ ಸಾರ್ವಜನಿಕ ಬ್ಯಾಂಕ್ ಸಿಬ್ಬಂದಿಗಳ ಮೇಲೆ ಹಲ್ಲೆ ನಡೆದ ಅನೇಕ ಪ್ರಕರಣಗಳು ನಡೆದಿದ್ದು ವರದಿಯಾಗಿದೆ. ಅಂತಹ ಸಂದರ್ಭಗಳಲ್ಲಿ ಸಹಜವಾಗಿಯೇ ಜನ ಪೋಲೀಸ್ ಇಲಾಖೆಗಳಿಗೆ ಮನವಿ ಸಲ್ಲಿಸಿ ಸೂಕ್ತ ರಕ್ಷಣೆಗೆ ಕೇಳಿಕೊಳ್ಳುತ್ತಿದ್ದರು.

ಆದರೆ ಈ ಬಾರಿ ಈ ಪ್ರಕರಣದಲ್ಲಿ ಎರಡೂ ಕೋಮಿನ ವ್ಯಕ್ತಿಗಳು ಈ ಹಲ್ಲೆಗೈದವರ ಗುಂಪಿನಲ್ಲಿದ್ದರೂ, ಜನತೆ ಅದರಲ್ಲೂ ಒಂದು ಪ್ರಮುಖ ವ್ಯಾಪಾರಿ ಸಮುದಾಯದ ಜನತೆಯ ಆಕ್ರೋಶವನ್ನರಿತ ಸಂಘ ಪರಿವಾರದ ದುಷ್ಟಶಕ್ತಿಗಳು ಕೂಡಲೇ ಚುರುಕಾದರು. ಮರುದಿನ ಶಾಂತವಾಗಿ ಪ್ರತಿಭಟನೆ ಮನವಿಸಲ್ಲಿಸಲು ಸಿದ್ದರಾಗುತ್ತಿದ್ದ ದೈವಜ್ಞ ಬ್ರಾಹ್ಮಣ ಸಮಾಜದವರನ್ನು ಮನವೊಲಿಸಿ ಮಂಗಳವಾರ ಬಂದ್‌ಗೆ ಕರೆ ನೀಡಿದ ಈ ದುಷ್ಟ ಶಕ್ತಿಗಳು ಕೂಡಲೇ ತಾವೇ ಪತ್ರಿಕೆಗೆ ಹೇಳಿಕೆ ನೀಡಿದವು. ಬಂಧಿತರನ್ನು ಇಟ್ಟಿದ್ದ ಗ್ರಾಮೀಣ ಪೋಲೀಸ್ ಠಾಣೆಗೆ ದೌಡಾಯಿಸಿದ ಈ ದುಷ್ಟ ಶಕ್ತಿಗಳು ಅಲ್ಲಿ ಹೆಚ್ಚು ಸಂಖ್ಯೆಯಲ್ಲಿ ದೈವಜ್ಞ ಬ್ರಾಹ್ಮಣ ಸಮುದಾಯದ ಪ್ರಜ್ಞಾಯುತ ಹಿರಿಯರಿದ್ದ ಕಾರಣ ಏನು ಗಲಭೆ ನಡೆಸಲು ಸಾಧ್ಯವಾಗಿಲ್ಲ. ಅಂದೇ ಪೋಲೀಸ್ ಠಾಣೆ ಸುಡುವ ಇಚ್ಛೆ ಇತ್ತು ಎಂದು ಅವರಲ್ಲಿ ಕೆಲವರು ಹೇಳುತ್ತಿದ್ದದನ್ನು ಪತ್ರಕರ್ತರೊಬ್ಬರು ಕೇಳಿದ್ದರು. ಪೋಲೀಸ್ ಸ್ಟೇಷನ್‌ನಲ್ಲಿಯೇ ಪತ್ರಿಕಾ ಗೋಷ್ಠಿ ನಡೆಸಿದ ಸಂಘ ಪರಿವಾರಗಳು 'ಬಂದ್' ನಿರ್ಣಯವನ್ನು ದೈವಜ್ಞ ಬ್ರಾಹ್ಮಣ ಸಮಾಜದ ಮೇಲೆ ಹೇರಿದರು.

ಮಂಗಳವಾರ 16 ರಂದು ಎಲ್ಲ ಕೋಮಿನ ವ್ಯಾಪಾರಸ್ಥರು 'ಬಂದ್' ಕರೆಯನ್ನು ಬೆಂಬಲಿಸಿದ್ದರು. ಶಿರಸಿ ನಗರಕ್ಕೆ ಸಂಬಂಧಿಸಿದ ಇಬ್ಬರು ಎಂ.ಎಲ್.ಎ. ಗಳು ಭಾಜಪದವರಿದ್ದು ಅವರನ್ನು 'ಮಂದಗಾಮಿ'ಗಳೆಂದು ಗುರುತಿಸಲಾಗುತ್ತಿದ್ದು ಅವರು ಶಿರಸಿಯಿಂದ ಹೊರಗಿದ್ದರು. ಆ ಸಂದರ್ಭವನ್ನೇ ಉಪಯೋಗಿಸಿಕೊಂಡು ಮಾಜಿ ಸಂಸದರ ನೇತೃತ್ವದ 'ತೀವ್ರಗಾಮಿ'ಗಳ ಪಡೆ ರಾತ್ರಿಯೆಲ್ಲಾ ಕೆಲಸ ಮಾಡಿ ಶಾಂತಿ ಭಂಗದ ಬಾರಿ ಪ್ಲಾನ್ ಸಿದ್ದಪಡಿಸಿತು. ಬೆಳಿಗ್ಗೆ ಅಂಚೆ ಸರ್ಕಲ್‌ನಲ್ಲಿ ನೂರಾರು ಜನ ಮುಗ್ಧ ಯುವಕರು ಶಾಂತವಾಗಿ



ಪ್ರತಿಭಟನೆಗೆ ಸಿದ್ದರಾಗಿ ಸೇರಿದ್ದರು. ಶಾಂತವಾಗಿ ಮೆರವಣಿಗೆ ಮೂಲಕ ಎ ಸಿ ಕಚೇರಿಗೆ ಸಾಗಿ ಮನವಿ ಅರ್ಪಿಸಿ ತಪ್ಪಿತಸ್ಥರಿಗೆ ಶಿಕ್ಷೆಗೆ ಆಗ್ರಹಿಸುವ ಆಶಯ ಅವರದಾಗಿದ್ದರೆ, ಈ ಸಂದರ್ಭ ದುರುಪಯೋಗ ಪಡಿಸಿಕೊಂಡು ತಮ್ಮ ಕೋಮುದಳ್ಳುರಿ ಹಬ್ಬಿಸುವ ಆಶಯ ಈಡೇರಿಸಿಕೊಳ್ಳುವ ಆಶಯ ಸಂಘ ಪರಿವಾರಿಗಳದಾಗಿತ್ತು. ಪ್ರಮುಖ ಬೀದಿಯಲ್ಲಿ ಸಾಗಿಬಂದ ಮೆರವಣಿಗೆಯೊಡನೆ ಸೇರಿಕೊಂಡ ಈ ದುಷ್ಟಶಕ್ತಿಗಳು ಸಾಲಾಗಿ ಒಂದು ಕೋಮಿನ ಮುಚ್ಚಿದ್ದ ಅಂಗಡಿಗಳ ಮೇಲೆ ಕಲ್ಲು ತೂರಿದರು, ಕಾಂಗ್ರೆಸ್ ಪಕ್ಷದ ಸ್ಥಳೀಯ ಕಚೇರಿಗಳ ಮೇಲೆ ಕಲ್ಲೆಸಲಾಯಿತು. ರಕ್ಷಣೆಗಾಗಿದ್ದ ಭಾರಿ ಸಂಖ್ಯೆಯ ಪೋಲೀಸರು ತಾಳ್ಮೆಯಿಂದ ನಡೆದುಕೊಂಡರು. ದೇವಿಕೆರೆ ಹತ್ತಿರದ ಸೊಸೈಟಿಯ ಕಚೇರಿ ಎದುರಿಂದ ಸಾಗಿ ಬಂದ ಮೆರವಣಿಗೆ ಅಲ್ಲಿಂದ ತಿರುಗಿ ಬಸ್ತಿಗಲ್ಲಿ ಮೂಲಕ ಎ ಸಿ ಕಚೇರಿಗೆ ಹೋಗುವದೆಂದು ಪೂರ್ವ ನಿಶ್ಚಯವಾಗಿತ್ತು. ಈ ಸಂದರ್ಭ ನೂರಾರು ಗುಂಡಾ ಪರಿವಾರದ ಸಂಘಗಳು (ಅನೇಕರು ಕಲ್ಲು, ಮಾರಕ ಅಸ್ತ್ರಗಳನ್ನು ಸಾಕಷ್ಟು ಪ್ರಮಾಣದಲ್ಲಿ ಸಂಗ್ರಹಿಸಿಕೊಂಡು ಬಂದಿದ್ದರು ಎಂದು ಪ್ರತ್ಯಕ್ಷದರ್ಶಿಗಳೇ ತಿಳಿಸಿದ್ದಾರೆ) ಸೇರಿಕೊಂಡು ಮೆರವಣಿಗೆ ಅಲ್ಪಸಂಖ್ಯಾತರ ಹೊಟೆಲ್ ಇದ್ದ ನಟರಾಜ ರಸ್ತೆಯಿಂದ ಸಾಗಬೇಕೆಂದು ಒತ್ತಾಯಿಸಿದರು. ದೈವಜ್ಞ ಬ್ರಾಹ್ಮಣ ಸಮಾಜದ ಹಿರಿಯರು ಮೆರವಣಿಗೆ ಪೂರ್ವನಿಯೋಜಿತ ರಸ್ತೆಯಲ್ಲಿ ಸಾಗುವುದೆಂದು ನಿರ್ಧರಿಸುವದರೊಳಗೆ ಹಿಂದಿನಿಂದ ಪೊಲಿಸರ ಮೇಲೆ, ಜನರ ಮೇಲೆ ಕಲ್ಲು ತೂರಿಬಂದವು. ಕ್ಷಣಾರ್ಧದಲ್ಲಿ ರ್‍ಯಾಲಿ ರಣರಂಗವಾಯಿತು. ಜನರನ್ನೂ ಚದುರಿಸಲು ಸಾಕಷ್ಟು ತಾಳ್ಮೆಯಿಂದ ಸಮಯ ನೀಡಿ ಪೊಲಿಸರು ಅಶ್ರುವಾಯು- ಲಾಠಿಚಾರ್ಜ್ ಮಾಡಿದರೆನ್ನಲಾಗಿದೆ. 60ಕ್ಕೂ ಹೆಚ್ಚು ಮುಗ್ಧರು ಗಾಯಾಳುಗಳಾದರು. ಮೊದಲೇ ತಯಾರಾಗಿ ಗಲಭೆ ಎಬ್ಬಿಸಿದ್ದ ಸಂಘ ಪರಿವಾರಿಗಳಾರಿಗೂ ಹೊಡೆತಬಿದ್ದಿಲ್ಲ ಎನ್ನುವದೇ ಅವರ ಕುತಂತ್ರಕ್ಕೆ ಸಾಕ್ಷಿ. ಅಮಾಯಕ ಜನರು ಸಂಕಷ್ಟಕ್ಕೆ ಈಡಾಗಿದ್ದಾರೆ. ಅನೇಕರು ಆಸ್ಪತ್ರೆಯಲ್ಲಿದ್ದಾರೆ. ಸಮಾಜದ ಹಿರಿಯ ರಾಯ್ಕರ ಮಾಸ್ತರ, ವಕೀಲ ಚಂದ್ರಕಾಂತರಾಯರ, ಜಗದೀಶ್, ಮಹೇಶ, ಸಾನು, ಮಾನರಾಮೆ, ಶೇಠ, ಆಚಾರಿಯವರಿಗೆ ಗಾಯಗಳಾಗಿವೆ. ಮುಂಜಾಗ್ರತೆಯ ಕ್ರಮವಾಗಿ ಮಾಜಿ ಸಂಸದ ಅನಂತಕುಮಾರ ಹೆಗಡೆಯವರನ್ನು ಒಳಗೊಂಡ 48 ಜನರನ್ನು ಶಾಂತಿ ಭಂ... ಆರೋಪದ ಮೇಲೆ ಬಂಧಿಸಿ ಬಿಡುಗ... ಮಾಡಲಾಗಿದೆ. ಇಲಾಖೆ ಶಾಂತಿಸಭೆ ನಡೆ... ನಗರದ ಪ್ರಮುಖ ನಾಗರಿಕರ ಸಹಕಾರದೊಂದಿ... ಶಾಂತಿಗೆ ಕರೆನೀಡಿದೆ. ಜನಜೀವನ ಬುಧವಾ... ಮತ್ತೆ ಸಹಜಗೊಂಡಿದೆ. ದೈವಜ್ಞ ಬ್ರಾಹ್... ಸಮಾಜದ ಹಿರಿಯರಿಗೆ ಸಂಘಪರಿವಾರಿಗ... ತಮ್ಮನ್ನು ಮುಂದಿಟ್ಟು ಗಲಭೆ ಎಬ್ಬಿಸಿ ತಮ್ಮ ಕೆಲ... ಮಾಡಿಕೊಳ್ಳಲು ಪ್ರಯತ್ನಿಸಿದ ಕುತಂತ್ರದ ಬ... ಅರಿವಾಗಿದೆ. ಅವರು ಹಳಹಳಿಸತೊಡಗಿದ್ದಾರೆ...

ಇಲಾಖೆ ಈಗಾಗಲೇ ಮೂರನೇ ಆರೋ... ಅಬೀದ ಸೈಯದ್ ಅನ್ನು ದಸ್ತಗಿರಿ ಮಾಡಿದ್ದು ತನಿ... ನಡೆಸುತ್ತಿದೆ ಎಂದು ಹೇಳಿದೆ. ಶಾಂತಿಪ್ರಿ... ಜನರನೇಕರು, ಕಾಂಗ್ರೆ, ಎಬಿಜ... ಜನತಾದಳ(ಎಸ್) ಮತ್ತು ಮಾರ್ಕ್ಸ್‌ವಾ... ಕಮ್ಯುನಿಸ್ಟ್ ಪಕ್ಷ ಹಲ್ಲೆಯನ್ನು ಖಂಡಿ... ಆರೋಪಿಗಳಿಗೆ ಸೂಕ್ತ ಶಿಕ್ಷೆಯಾಗಬೇಕ... ವದಂತಿಗಳಿಗೆ ಗಮನನೀಡದೆ ಜನತೆ ಶಾಂ... ಸೌಹಾರ್ದತೆ ಕಾಪಾಡಿಕೊಳ್ಳಲು ಕರೆ ನೀಡಿವೆ...

ಮ್ಯಾನೆಜರ್ ಮೇಲೆ ಹಲ್ಲೆ ನಡೆ... ಆರೋಪಿಗಳಲ್ಲೊಬ್ಬರಾದ ತಬ್ರೇಜ ಈಗಾಗ... ಅನೇಕ ಆರೋಪಗಳಲ್ಲಿ ಭಾಗಿಯಾಗಿದ್ದವನೆಂದ... ಅವನ ಗುಂಪಿನಲ್ಲಿ ಗಣೇಶ ಮಡಗಾಂವಕ... ಮಹೇಶ ಒಳಗೊಂಡಂತೆ ಅನೇಕ ಕೋಮ... ಗೂಂಡಾಗಳಿದ್ದಾರೆ ಎನ್ನಲಾಗಿದೆ.

'ಬಂದ್' ನಡೆದ ದಿನ ಪೂರ್ವ ಮಾ... ಇಲ್ಲದೇ ತರಕಾರಿ ತೆಗೆದುಕೊಂಡು ವಾರದ ಸಂ... ಮಾರಲು ಬಂದ ಅನೇಕ ಬಡರೈತರು ವ್ಯಾ... ನಡೆಯದೆ ತರಕಾರಿ ಕೊಳೆತು ಭಾರಿ ಹಾ... ಅನುಭವಿಸಿದ್ದು ಅವರ ನಷ್ಟವನ್ನು ಸರ... ಭರಿಸಿಕೊಡಬೇಕು ಎಂದು ಕರ್ನಾಟಕ ಪ್ರಾಂತ... ಸಂಘ ಆಗ್ರಹಿಸಿದೆ.

■ ಪ್ರತ್ಯಕ್ಷದರ್ಶಿ ವರದಿ...

ಭಾರತವೂ ಸೇರಿದಂತೆ ಬಡರಾಷ್ಟ್ರಗಳ ರೈತರಿಗೆ ನೀಡುತ್ತಿದ್ದ ಸಬ್ಸಿಡಿ ಕಡಿತ ಮಾಡುವಂತೆ ಒತ್ತಾಯ ಹೇರಿದ ಬಲಾಢ್ಯ ರಾಷ್ಟ್ರಗಳು ತಮ್ಮ ದೇಶದ ರೈತರಿಗೆ ನೀಡುತ್ತಿದ್ದ ಸಬ್ಸಿಡಿ ಕಡಿತ ಮಾಡಲು ಒಪ್ಪಲಿಲ್ಲ. ಬದಲಾಗಿ ನೇರ ಬಂಡವಾಳ ಹೂಡಿಕೆಗೆ ಇನ್ನಷ್ಟು ಅವಕಾಶ, ಆಮದುಗಳ ಮೇಲಿನ ಸುಂಕ ಕಡಿತ ಮೊದಲಾದ ಶೋಷಣಾ ವಿಧಾನಗಳಿಗೆ ಒತ್ತಾಯಿಸಿದವು. ಇದನ್ನು ಬೆಳವಣಿಗೆ ಹೊಂದುತ್ತಿರುವ / ಬಡರಾಷ್ಟ್ರಗಳು ತಿರಸ್ಕರಿಸಿರುವುದರಿಂದ ಕ್ಯಾನ್‌ಕುನ್‌ನಲ್ಲಿ ನಡೆದ ಡಬ್ಲ್ಯುಟಿಓ ಸಭೆ ವಿಫಲವಾಯಿತು. ಆ ಕುರಿತು ಒಂದು ಲೇಖನ...



...ಜಗತ್ತು ಮಾರಾಟಕ್ಕಿಲ್ಲ ಎಂಬ ...

ಬಲಾಢ್ಯರಿಗೆ ಬಿಸಿಮುಟ್ಟಿಸಿದ ಕ್ಯಾನ್‌ಕುನ್ ಸಭೆ

ಬಾಲಕೃಷ್ಣ ಶೆಟ್ಟಿ

...ಪ್ಟೆಂಬರ್ 10 ರಿಂದ 14ರ ವರೆಗೆ ಜರುಗಿದ ...ಶ್ವವ್ಯಾಪಾರ ಸಂಘಟನೆ (WTO)ಯ 5ನೇ ...ಚಿವ ಮಟ್ಟದ ಸಭೆ ಹಲವಾರು ಅಂಶಗಳಲ್ಲಿ ...ಹತ್ವದ್ದಾಗಿದೆ. ಭಾರತ, ಚೀನಾ ಮತ್ತು ಬ್ರೆಜಿಲ್ ...ರಿದಂತೆ, 21 ದೇಶಗಳು ಸೇರಿ, ಇನ್ನಿತರ ...ಡರಾಷ್ಟ್ರಗಳ ಬೆಂಬಲವನ್ನು ಗಳಿಸಿ ...ಮ್ರಾಜ್ಯಶಾಹಿ ದೇಶಗಳು ಅಸಮಾನ ವ್ಯಾಪಾರ ...ಪ್ಪಂದವನ್ನು ಹೇರುವ ಕುತಂತ್ರವನ್ನು ...ೀಲಿಸಿದವು. ಹಿಂದುಳಿದ ರಾಷ್ಟ್ರಗಳ ಐಕ್ಯತೆಯನ್ನು ...ಳಿಸಿಕೊಂಡು ಬೆಳೆಸಬೇಕು ಹಾಗೂ ಈಗಾಗಲೇ ...ಗಿರುವ ಅಸಮಾನ ಒಪ್ಪಂದಗಳ ವಿರುದ್ಧವೂ ...ೋರಾಟ ಮುಂದುವರಿಯ ಬೇಕು. ಇದು ...ಲಾಢ್ಯ ದೇಶಗಳನ್ನು ಕೆಣಕಿದ ಕ್ಯಾನ್ ಕುನ್ ...ಭೆಯ ಮಹತ್ವದ ಅಂಶ.

...ಕ್ಯಾನ್ ಕುನ್ ಸಭೆಯು ಕೊನೆಯಲ್ಲಿ ...ನ್ಯಾದೇಶದ ನೇತೃತ್ವದಲ್ಲಿ ಆಫ್ರಿಕನ್ ದೇಶಗಳು ...ಭಾತ್ಯಾಗ ನಡೆಸಿದುದರ ಫಲವಾಗಿ ಯಾವುದೇ ...ೋಷಣೆಯನ್ನು ಅಂಗೀಕರಿಸಲು ಸಾಧ್ಯವಾಗಿಲ್ಲ.

...ಬ್ಸಿಡಿ ಕಡಿತಕ್ಕೆ ನಿರಾಕರಣೆ

...ಭಾರತವೂ ಸೇರಿದಂತೆ, ಬೆಳವಣಿಗೆ ...ೊಂದುತ್ತಿರುವ ಹಾಗೂ ಹಿಂದುಳಿದ ರಾಷ್ಟ್ರಗಳು ...ಮ್ಮ ಜನರಿಗೆ ನೀಡುತ್ತಿದ್ದ ಸಬ್ಸಿಡಿಯನ್ನು ...ತಗಳಿಸಬೇಕೆಂದು WTO ಶರತ್ತುಗಳ ಮೂಲಕ ...ತ್ತಾಯಹೇರಿದ ಅಮೇರಿಕ ಮತ್ತು ಯೂರೋಪ್ ...ಷ್ಟ್ರಗಳ (ಇ.ಯು) ನೇತೃತ್ವದ ಶ್ರೀಮಂತ ...ಷ್ಟ್ರಗಳು ತಮ್ಮ ದೇಶದ ರೈತರಿಗೆ ನೀಡುತ್ತಿದ್ದ ...ಾರ ಸಬ್ಸಿಡಿಯನ್ನು ಕಡಿತಗೊಳಿಸಲು ಒಪ್ಪಲಿಲ್ಲ. ...ಪಾನ್ ದೇಶದಲ್ಲಿ ಹಾಲು ನೀಡುವ ಹಸುವಿನ ...ಲಿಕನಿಗೆ ಒಂದು ದಿನಕ್ಕೆ ಒಂದು ಹಸುವಿಗೆ 80 ... ನಷ್ಟು ಸಬ್ಸಿಡಿ ನೀಡಲಾಗುತ್ತಿದೆ. ಭಾರತ ...ಶದಲ್ಲಿ ಒಟ್ಟು ಆದಾಯ ರೂ. 80 ಕೂಡಾ ...ಲ್ಲದ ರೈತರ ಸಂಖ್ಯೆಯೇ ಜಾಸ್ತಿ. ಹತ್ತು ವರ್ಷಗಳ ಹಿಂದೆ, ಉರುಗ್ವೆ ಸುತ್ತಿನ ಮಾತುಕತೆಯ ಮೂಲಕ ಅಸ್ತಿತ್ವಕ್ಕೆ ಬಂದ ವಿಶ್ವ ವ್ಯಾಪಾರ ಒಪ್ಪಂದದ ಸಂದರ್ಭದಲ್ಲಿ ಅಮೇರಿಕಾ ಹಾಗೂ ಯೂರೋಪ್‌ದೇಶಗಳು, ತಮ್ಮ ರೈತರಿಗೆ ನೀಡುತ್ತಿದ್ದ ಸಬ್ಸಿಡಿಯ ಮೊತ್ತ 10,000 ಕೋಟಿ ಡಾಲರುಗಳು. ಈಗ ಅದು, 30,000 ಕೋಟಿ ಡಾಲರುಗಳಿಗೆ ಏರಿದೆ.


ತಮ್ಮ ದೇಶದ ರೈತರಿಗೆ ನೀಡುತ್ತಿದ್ದ ಸಬ್ಸಿಡಿಯನ್ನು ಕಡಿತ ಮಾಡಲೊಪ್ಪದ ಶ್ರೀಮಂತರಾಷ್ಟ್ರಗಳು, ಆಮದು ಸುಂಕವನ್ನು ಕಡಿತಗೊಳಿಸಬೇಕೆಂದು ಇತರೆ ದೇಶಗಳ ಮೇಲೆ ಒತ್ತಡ ಹೇರಿದ್ದವು. ಈಗಾಗಲೇ ಆಮದು ಸುಂಕದ ದರಕಡಿತ ಹಾಗೂ ಆಮದುಗಳ ಮೇಲಿನ ನಿರ್ಭಂಧಗಳ ಹಿಂತೆಗೆತ (removal of QR's) ದಿಂದ ಬಡರಾಷ್ಟ್ರಗಳು ತೀವ್ರ ಸಂಕಷ್ಟವನ್ನು ಅನುಭವಿಸುತ್ತಿವೆ. ಚೀನಾದಿಂದ ಭಾರತಕ್ಕೆ ರೇಷ್ಮೆಗೆ ಸಂಬಂಧಿತ ವಸ್ತುಗಳ ಆಮದಿನಿಂದ ರೇಷ್ಮೆ ಕೃಷಿಕರು ಕಂಗಾಲಾಗಿ ದ್ದರು. ಆ ನಂತರದಲ್ಲಿ ಆಮದು ಸುಂಕವನ್ನು ಹೇರಿದ ನಂತರವೇ ರೇಷ್ಮೆ ಕೃಷಿಕರು ನಿಟ್ಟುಸಿರು ಬಿಡುವಂತಾಯಿತು.

ಅಂತೆಯೇ ಸ್ವೀಡನ್, ಡೆನ್ಮಾರ್ಕ್ ಮೊದಲಾದ ದೇಶಗಳಿಂದ ಹೇರಳ ಹಾಲು ಉತ್ಪನ್ನಗಳು ನಮ್ಮ ದೇಶದೊಳಕ್ಕೆ ಬರುತ್ತಿದ್ದುದರಿಂದ ಪಶು ಸಂಗೋಪನೆಯ ಮೇಲೆ ಅವಲಂಬಿತರಾಗಿದ್ದ ರೈತರು ಸಂಕಟ ಪಡುವಂತಾಗಿತ್ತು. ಹೀಗೆ ಹಲವಾರು ಉದಾಹರಣೆಗಳನ್ನು ನೀಡಬಹುದು. ಇಂತಹುದೇ ಕಾರಣಗಳಿಂದ ಬೆಲೆ ಕುಸಿತಕ್ಕೆ ಒಳಗಾದ ರೈತರು ಆತ್ಮಹತ್ಯೆಗೆ ಮೊರೆ ಹೋಗುತ್ತಿದ್ದಾರೆ.

ಕ್ಯಾನ್‌ಕುನ್‌ನಲ್ಲಿ ಭಾರತ ನಿಯೋಗದ ಪ್ರತಿನಿಧಿಗಳು ತೆಗೆದುಕೊಂಡ ನಿಲುವು ರೈತಾಪಿ ಜನತೆ ಸತತವಾಗಿ ನಡೆಸಿದ ಹೋರಾಟಕ್ಕೆ ದೊರೆತ ಜಯವಾಗಿದೆ.

ಚುನಾವಣಾ ಒತ್ತಡ ?

ಸಾಮಾನ್ಯವಾಗಿ ಬಿಜೆಪಿ ನೇತೃತ್ವದ ಎನ್.ಡಿ.ಎ. ಕೂಟ ಅಮೇರಿಕಾದ ತಾಳಕ್ಕೆ ಕುಣಿಯುತ್ತಿತ್ತು. 2 ವರ್ಷಗಳ ಹಿಂದೆ ದೋಹಾದಲ್ಲಿ ನಡೆದ ಮಾತುಕತೆಯ ಸಂದರ್ಭ ದಲ್ಲಿ, ಭಾರತ, ಮೊದಲು ಪ್ರತಿಭಟನೆಯ ಸೋಗು ಹಾಕಿದ್ದರೂ ನಂತರ ಶ್ರೀಮಂತ ರಾಷ್ಟ್ರಗಳ ಒತ್ತಡಕ್ಕೆ ಮಣಿದಿತ್ತು. ಆಮದುಗಳ ಮೇಲಿನ ನಿರ್ಬಂಧ ಗಳನ್ನು ಅವಧಿಗೆ ಮುನ್ನವೇ ಕಿತ್ತು ಹಾಕಲಾಗಿತ್ತು. ಆದರೆ ಈ ಬಾರಿ ಹಾಗಾಗಲಿಲ್ಲ. ರೈತಾಪಿ ಜನತೆಯ ಹೋರಾಟದ ಒತ್ತಡವೋ, ಮುಂಬರುವ 5 ರಾಜ್ಯಗಳ ಚುನಾವಣೆಯ ಮೇಲಿನ ದೃಷ್ಟಿಯೋ ಅಥವಾ ಬೆಳವಣಿಗೆ ಹೊಂದುತ್ತಿರುವ ದೇಶಗಳು ತೋರಿದ ಅಪ್ರತಿಮ ಐಕ್ಯತೆಯ ಫಲವೋ ಒಟ್ಟಾರೆಯಾಗಿ ಭಾರತ ತನ್ನ ನಿಲುವಿಗೆ ಅಂಟಿಕೊಂಡಿತು. ಮುಂಬರುವ ಅವಾಂತರಗಳನ್ನು ಸ್ವಲ್ಪಮಟ್ಟಿಗೆ ತಡೆಯಲು ಸಾಧ್ಯವಾಯಿತು.



...ನರಲ್ ಕೌನ್ಸಿಲ್ ಅಧ್ಯಕ್ಷ ಕಾರ್ಲೋಸ್ ಫರೇಜ್‌ಡೆಲ್ ಕ್ಯಾಸ್ಟಿಲ್ ...ತ್ತು ಡಬ್ಲ್ಯುಟಿಓ ಮಹಾನಿರ್ದೇಶಕ ಸು...

ಅಗಸ್ಟ್ ತಿಂಗಳ ಮಧ್ಯಭಾಗದಲ್ಲಿ ವಾಣಿಜ್ಯ ಸಚಿವರ ಸಮ್ಮುಖದಲ್ಲಿ ನಡೆದ ಸಭೆಯಲ್ಲಿ ಭಾಗವಹಿಸಿದ ಕಾರ್ಮಿಕ ಸಂಘಟನೆಗಳು ಕ್ಯಾನ್ ಕುನ್ ಸಭೆಯಲ್ಲಿ ಭಾರತದ ಹಿತಾಸಕ್ತಿಯನ್ನು ರಕ್ಷಿಸುವಂತೆ ಒತ್ತಾಯಿಸಿದ್ದವು. ಈ ಸಭೆಯಲ್ಲಿ ಸಿಐಟಿಯು, ಎಐಟಿಯುಸಿ. ಮಾತ್ರವಲ್ಲದೆ, ಎಲ್ಲಾ ಕಾರ್ಮಿಕ ಸಂಘಟನೆಗಳೂ ಭಾಗವಹಿಸಿ ದ್ದವು ಮಾತ್ರವಲ್ಲ, ಕಾರ್ಮಿಕರ ಮತ್ತು ಜನತೆಯ ಹಿತವನ್ನು ಕಾಪಾಡುವಲ್ಲಿ ಸರಕಾರ ವಿಫಲವಾದರೆ, ತೀವ್ರ ಸ್ವರೂಪದ ಹೋರಾಟವನ್ನು ರೂಪಿಸುವುದಾಗಿ ಎಚ್ಚರಿಸಿದ್ದವು.

ಕೃಷಿ ಮತ್ತು ಸಿಂಗಾಪುರ ಸಭೆಯ ಅಂಶಗಳಿಗೆ ಪ್ರಾಧಾನ್ಯತೆ

ಈ ಬಾರಿಯ ಕ್ಯಾನ್‌ಕುನ್ ಸಭೆಗೆ ಸೂಚಿಸಿದ ಕಾರ್ಯಸೂಚಿಯಲ್ಲಿ ಕೃಷಿ, ಸಬ್ಸಿಡಿ, ಸೇವೆ, ಪರಿಸರ ಇತ್ಯಾದಿ ಅಂಶಗಳ ಜತೆಗೆ ಸಿಂಗಾಪುರದ ಸಭೆಯಲ್ಲಿ ಚರ್ಚಿಸಲಾದ ಅಂಶಗಳ ಬಗ್ಗೆ ಚರ್ಚಿಸಬೇಕೆಂದು ಹೇಳಲಾಗಿತ್ತು. ಸಿಂಗಪುರದಲ್ಲಿ ನಡೆದಿದ್ದ ಡಬ್ಲ್ಯೂ.ಟಿ.ಓ. ಸಭೆಯಲ್ಲಿ ಚರ್ಚಿತವಾದ ನಾಲ್ಕು ಪ್ರಮುಖವಾದ ಅಂಶಗಳೆಂದರೆ, ಹೊಸ ಬಂಡವಾಳಹೂಡಿಕೆ, ಸ್ಪರ್ಧಾ ನಿಯಮಗಳು, ಸರಕಾರಿ ಖರೀದಿಯಲ್ಲಿ ಪಾರದರ್ಶಕತೆ, ವ್ಯಾಪಾರದಲ್ಲಿ ಇನ್ನಷ್ಟು ಸರಳತೆ, (ಈ ಕುರಿತು ಹಿಂದಿನ ಐಕ್ಯರಂಗದಲ್ಲಿ ಸಾಕಷ್ಟು ಚರ್ಚಿಸಲಾಗಿದೆ) ಈ ಎಲ್ಲಾ ಅಂಶಗಳು ಶ್ರೀಮಂತರಾಷ್ಟ್ರಗಳಿಗೆ ಸಹಕಾರಿಯಾಗುವುದಿತ್ತು.

ಉದಾಹರಣೆಗೆ ಬಂಡವಾಳ ಹೂಡಿಕೆಯಲ್ಲಿ, ತನ್ನ ದೇಶದ ಬಂಡವಾಳವನ್ನು ಇತರೆ ದೇಶಗಳಲ್ಲಿ ಹೂಡುವ ಬೇರೆಬೇರೆ ವಿಧಾನಗಳ ಬಗ್ಗೆ ಚರ್ಚೆ ನಡೆಯುವುದಿತ್ತು. ಇದನ್ನು ವಿದೇಶಿ ನೇರ ಬಂಡವಾಳ ಹೂಡಿಕೆ (Forign Direct Investment ಅಥವಾ FDI) ಎಂದು ಹೇಳುತ್ತಾರೆ. ಈಗಾಗಲೇ ಸಾಕಷ್ಟು ವಿದೇಶಿ ಬಂಡವಾಳವು ಬಡರಾಷ್ಟ್ರಗಳ ಮೇಲೆ ಹರಿದುಬಂದು ಇಲ್ಲಿನ ಆರ್ಥಿಕ ಶೋಷಣೆ ನಡೆಸಿವೆ. ಇದರಿಂದ ದೊಡ್ಡದೊಡ್ಡ ಬಹುರಾಷ್ಟ್ರೀಯ ಕಂಪನಿಗಳಿಗೆ ಅನುಕೂಲವಾಗಿವೆ. ಇಂತಹ ಕಂಪನಿಗಳು ಶ್ರೀಮಂತ ರಾಷ್ಟ್ರಗಳಲ್ಲಿ ಇರುತ್ತವೆ ಎಂದು ಬೇರೆ ಹೇಳಬೇಕಾಗಿಲ್ಲ. ಕೈಗಾರಿಕೆ ಮತ್ತು ತಂತ್ರಜ್ಞಾನದಲ್ಲಿ ಮುಂದುವರಿದ 10 ಶ್ರೀಮಂತ ದೇಶಗಳು ತನ್ನ ಬಹುರಾಷ್ಟ್ರೀಯ ಕಂಪನಿಗಳ ಮೂಲಕ ಶೇ. 74 ರಷ್ಟು ನೇರ ಬಂಡವಾಳವನ್ನು ಹೂಡಿಕೆ(FDI) ಮಾಡಿದೆ. ಇದು ಶ್ರೀಮಂತ ಮತ್ತು ಬಡರಾಷ್ಟ್ರಗಳ ನಡುವಿನ ಅಂತರವನ್ನು ಇನ್ನಷ್ಟು ಹೆಚ್ಚಿಸುತ್ತದೆ.

ಒಪ್ಪಂದವಾದ ಅಂಶಗಳ ಜಾರಿಯ ಕುರಿತು

ಕ್ಯಾನ್‌ಕುನ್ ಸಭೆಯು ಬಡರಾಷ್ಟ್ರಗಳಿಗೆ ಅನುಕೂಲವಾಗುವ, ಈಗಾಗಲೇ ಒಪ್ಪಂದವಾದ ಅಂಶಗಳ ಜಾರಿಯ ಕುರಿತು ಗಮನ ನೀಡಲಿಲ್ಲ. ಉದಾಹರಣೆಗೆ ಉರುಗ್ವೆ ಸುತ್ತಿನ ಮಾತುಕತೆಯಲ್ಲಿ, ಮುಂದುವರಿದ ದೇಶಗಳು ಜವಳಿ ಕ್ಷೇತ್ರದಲ್ಲಿರುವ ನಿರ್ಬಂಧಗಳಲ್ಲಿ ಶೇ 51 ರಷ್ಟನ್ನು ಡಿಸೆಂಬರ್ 2000 ಒಳಗಡೆ ಹಾಗೂ ಉಳಿದ ಶೇ 49 ನ್ನು ಡಿಸೆಂಬರ್ 2004 ರ ಮೊದಲು ತೆಗೆದುಹಾಕಬೇಕೆಂದು ನಿರ್ಧಾರವಾಗಿತ್ತು. ಆದರೆ ಡಿಸೆಂಬರ್ 2000 ಕ್ಕೂ ಮೊದಲೇ ತೆಗೆದುಹಾಕಬೇಕಾಗಿದ್ದ ನಿರ್ಬಂಧವನ್ನು ಅಮೆರಿಕಾ ಮತ್ತು ಯುರೋಪ್ ರಾಷ್ಟ್ರಗಳು ಈವರೆಗೂ ತೆಗೆದುಹಾಕಿಲ್ಲ. ಆದರೆ ಭಾರತ ದಂತಹ ದೇಶಗಳ ಮೇಲೆ ಒತ್ತಡ ಹೇರಿ ಅವಧಿಗೆ ಮೊದಲೇ ಆಮದಿನ ಮೇಲಿನ ನಿರ್ಬಂಧವನ್ನು ತೆಗೆಸಿದವು.

ಇಂತಹ ಸನ್ನಿವೇಶದಲ್ಲಿ ಪುನಃ ಅಮೆರಿಕಾ ಮತ್ತು ಯುರೋಪ್ ರಾಷ್ಟ್ರಗಳ (European Union - EU) ಒತ್ತಡಕ್ಕೆ ಮಣಿಯುವುದೆಂದರೆ, ಈಗಾಗಲೇ ಕಳೆದುಕೊಳ್ಳುತ್ತಿರುವ ಸಾರ್ವಭೌಮತೆಯನ್ನು ಒತ್ತೆ ಇಡುವುದು ಎಂದರ್ಥ. ಆದ್ದರಿಂದಲೇ ಕೃಷಿ ಕ್ಷೇತ್ರದಲ್ಲಿ ಶ್ರೀಮಂತ ರಾಷ್ಟ್ರಗಳು ಸಬ್ಸಿಡಿ ಕಡಿತವನ್ನು ಒಪ್ಪದೇ ಇದ್ದಾಗ, ಬಂಡವಾಳ ಹೂಡಿಕೆ ಇನ್ನಿತರ ಅಂಶಗಳ ಮೇಲೂ ಒಪ್ಪಂದವಾಗದೇ ಘೋಷಣೆ ಯನ್ನು ಕೈಬಿಡಬೇಕಾಗಿ ಬಂದಿದೆ. ಇದು ಸ್ವಾಗತಾರ್ಹ.

1999 ರಲ್ಲಿ ಸಿಯಾಟಲ್‌ನಲ್ಲಿ ನಡೆದ ಸಚಿವಮಟ್ಟದ ಸಭೆಯಲ್ಲಿ ತೀವ್ರ ಪ್ರತಿಭಟನೆಯನ್ನು ಒಡ್ಡಲಾಗಿತ್ತು. ಆದರೆ ಅಂದಿನ ನಿರ್ಧಾರಗಳು ಅಮೆರಿಕಾ ಮತ್ತು ಯುರೋಪು ರಾಷ್ಟ್ರಗಳ ಪರವಾಗಿದ್ದವು. ನಂತರ 2001 ರಲ್ಲಿ ನಡೆದ ದೋಹಾ ಸಭೆಯಲ್ಲಿ ಆರಂಭದಲ್ಲಿ ಪ್ರತಿಭಟನೆ ಒಡ್ಡಿದರೂ ನಂತರ ಶ್ರೀಮಂತ ರಾಷ್ಟ್ರಗಳ ಒತ್ತಾಯಕ್ಕೆ ಭಾರತ ಶರಣಾಗಿತ್ತು. ಹಿಂದಿನ ಎರಡೂ ಸಭೆಗಳ ಸಂದರ್ಭದಲ್ಲೂ ಬಿಜೆಪಿ ನೇತೃತ್ವದ ಎನ್‌ಡಿಎ ಕೂಟವೇ ಅಧಿಕಾರದಲ್ಲಿತ್ತು.



WTO ಶರತ್ತುಗಳಿಂದ ಜರ್ಜರಿತವಾದ ಭಾರತದ ಜನತೆಯ ತೀವ್ರಪ್ರತಿರೋಧ ಹಾಗೂ ಕ್ಯಾನ್‌ಕುನ್ ಸಭೆಯಲ್ಲಿ ಭಾರತ, ಚೀನ, ಬ್ರೆಜಿಲ್ ಮೊದಲಾದ ಎಂಬತ್ತು ಬೆಳವಣಿಗೆ ಹೊಂದುತ್ತಿರುವ ಹಾಗೂ ಬಡ ರಾಷ್ಟ್ರಗಳು ಒಂದಾಗಿ ಮಾತುಕತೆಯಲ್ಲಿ ಭಾಗವಹಿಸಿದ ಫಲವಾಗಿ ಬಲಾಢ್ಯ ದೇಶಗಳ ಆಟ ಈ ಬಾರಿ ನಡೆಯಲಿಲ್ಲ. ಇದರಿಂದಾಗಿ ಶ್ರೀಮಂತ ರಾಷ್ಟ್ರಗಳು, ಅದರಲ್ಲೂ ಅಮೆರಿಕಾ, ಬಡರಾಷ್ಟ್ರಗಳ ಮೇಲೆ ಹೇರಲು ಹೊರಟಿದ್ದ ಅಸಮಾನತೆಯ ಕಾರ್ಯಸೂಚಿಗೆ ತೀವ್ರ ತಡೆ ಉಂಟಾಗಿದೆ. ಆದರೆ ಈಗಾಗಲೇ ಜಾರಿಗೆ ಬಂದಿರುವ ಅಸಮಾನತೆಯ ಅಂಶಗಳು ಮುಂದುವರಿಯುತ್ತಿವೆ. ಆದ್ದರಿಂದ ಶ್ರೀಮಂತ ರಾಷ್ಟ್ರಗಳ ಪರವಾದ ಬಡರಾಷ್ಟ್ರಗಳ, ಬಡಜನತೆಯ ವಿರುದ್ಧವಾದ ಡಬ್ಲ್ಯುಟಿಓ ಅಂಶಗಳ ವಿರುದ್ಧ ಹೋರಾಟವನ್ನು ಮುಂದುವರಿಸಬೇಕಾಗಿದೆ.

'ಮೂಡಲಮನೆ' ಉತ್ತಮ ಧಾರವಾಹಿ

ಟಿ.ವಿ. ಮಾಧ್ಯಮ ಇಂದು ಅತ್ಯಂತ ಪ್ರಭಾವಿ ಮಾಧ್ಯಮ. ಮಾಧ್ಯಮ ವರ್ಗದ ಜನಸಾಮಾನ್ಯರಿಗೆ, ಅದರಲ್ಲೂ ಗೃಹಿಣಿಯರ ಅತ್ಯಂತ ಪ್ರಮುಖ ಮನರಂಜನಾ ಸಾಧನ. ಇದರ ಪ್ರಭಾವದಿಂದಾಗಿ ಗ್ರಾಹಕ ಸಂಸತಿ ಹೆಚ್ಚಾಗಿದೆ, ಅನೇಕರ ವ್ಯಕ್ತಿತ್ವ, ಮನುಷ್ಯತ್ವವನ್ನೇ ಬದಲಾಯಿಸುವಷ್ಟು ಶಕ್ತವಾಗಿದೆ ಈ ಮಾಧ್ಯಮ. ಅದರಲ್ಲಿ ಬರುವ ದಾರವಾಹಿಗಳ ಕಥೆಯಂತೂ ಹೇಳಲೇ ಬೇಕಿಲ್ಲ? ಹೆಚ್ಚು ಕಡಿಮೆ ಎಲ್ಲಾ ಒಂದೇ ಕಥೆ. ಅತ್ತೆ ಸೊಸೆಯರ ಕಿತ್ತಾಟ, ಇಬ್ಬರು ಹೆಂಡತಿಯರ ಗಂಡ, ಕಣ್ಣೀರಿನ ಕೋಟಿ, ಕಲ್ಪನೆಗೆ ಮೀರಿದ ವಾಸ್ತವಕ್ಕೆ ದೂರವಾದ ಘಟನಾವಳಿಗಳು, ಅವರ ವೇಶ - ಭೂಷಣಗಳು ಯಾವುವೂ ನೈಜತೆಗೆ ಒಂದಿಷ್ಟು ಹತ್ತಿರವೂ ಬರುವುದಿಲ್ಲ. ಗೃಹಿಣಿಯರಲ್ಲಿ ಭ್ರಮೆಗಳನ್ನು ಹುಟ್ಟಿಸುವುದೇ ಅಲ್ಲ, ಅವರ ಕುಟುಂಬದಲ್ಲಿ ಅನುಮಾನ, ಸಂಶಯ, ಅಪನಂಬಿಕೆಗಳನ್ನು ಹುಟ್ಟುಹಾಕುವಲ್ಲಿ ಸಫಲವಾಗಿವೆ ಈ ಧಾರವಾಹಿಗಳು. ಆದರೆ ಇಂಥ ಕೆಟ್ಟ ಧಾರವಾಹಿಗಳಿಗೆ ಅಪವಾದವೆಂಬಂತೆ ಕೆಲವು ಉತ್ತಮ ಧಾರವಾರಾಹಿಗಳೂ ಇವೆ. ಅವುಗಳಲ್ಲೊಂದು 'ಈ ಟಿ.ವಿ.'ಯಲ್ಲಿ ರಾತ್ರಿ 9.30 ಕ್ಕೆ ಪ್ರಸಾರವಾಗುವ 'ಮೂಡಲ ಮನೆ'.

ಹೆಣ್ಣಿನ ನೈಜ ಸಮಸ್ಯೆಗಳನ್ನು, ಆಕೆಯ ಜೀವನದ ಏರುಪೇರುಗಳನ್ನು, ಗುಣ-ಸ್ವಭಾವಗಳನ್ನು ಕಷ್ಟ - ಕಾರ್ಪಣ್ಯಗಳನ್ನು ಬಹಳ ನೈಜವಾಗಿ ನಮ್ಮ ಮುಂದಿಡುತ್ತದೆ ಈ ದಾರಾವಾಹಿ. ಉತ್ತರ ಕರ್ನಾಟಕದ ಜನ ಜೀವನ, ಅವರ ಭಾಷೆಯ ಸೊಗಡು, ಬಹುತೇಕ ಹೊಸ ಕಲಾವಿದರ ಉತ್ತಮ ಅಭಿನಯ ಈ ಧಾರಾವಾಹಿಯನ್ನು ಉತ್ತಮ ಸ್ಥಾನಕ್ಕೆ ತಂದುನಿಲ್ಲಿಸಿದೆ. ಈ ಧಾರಾವಾಹಿಯ ನಿರ್ದೇಶಕರು ಖ್ಯಾತ ಕಲಾವಿದೆ ವೈಶಾಲಿ ಕಾಸರವಳ್ಳಿ.

ಈ ಧಾರವಾಹಿಯಲ್ಲಿನ ಪ್ರತಿಯೊಬ್ಬರ ಅಭಿನಯವು ನೋಡುಗನ ಮೇಲೆ ಗಾಢ ಪರಿಣಾಮ ಬೀರುವಷ್ಟು ಪ್ರಭಾವಶಾಲಿಯಾಗಿದೆ. ಇಂತಹದೊಂದು ಉತ್ತಮ ಅಭಿರುಚಿಯ, ಸತ್ವಶಾಲಿಯಾದ ಧಾರವಾಹಿಯನ್ನು ತೆಗೆದ ವೈಶಾಲಿ ಕಾಸರವಳ್ಳಿ ಅಭಿನಂದನಾರ್ಹರು



ಉತ್ತರ ಕರ್ನಾಟಕದ ಒಂದು ವಾಡೆ, ಮತ್ತದರ ಸುತ್ತಮುತ್ತ ಹೆಣೆದಿರುವ ಕಥೆಯೇ ಈ ಧಾರಾವಾಹಿ. ವಾಡೆಯ ಯಜಮಾನ 'ದೇಶಮುಖ್' ರು. ಆತನ ನಿರ್ಧಾರವೇ ಅಂತಿಮ. ಆತ ಕೆಟ್ಟವನೇನಲ್ಲ, ಆದರೆ ಹಿರಿಯರು ಹಾಕಿಕೊಟ್ಟ ಸಂಪ್ರದಾಯಗಳನ್ನು ಮೀರುವವನಲ್ಲ. ಆತನ ಅಕ್ಕ ಚಿಕ್ಕ ವಯಸ್ಸಿಗೇ ಗಂಡನನ್ನ ಕಳೆದುಕೊಂಡು ಮುಕ್ಕಾಲು ಭಾಗ ಜೀವನವನ್ನು ವಿಧವೆಯಾಗಿ ಕಾಲ ಕಳೆದಿದ್ದಾಳೆ. ಇದು ನಮ್ಮ ಸಂಪ್ರದಾಯ ಏನೂ ಮಾಡೋಕ್ಕಾಗಲ್ಲ ಎನ್ನುತ್ತಾನೆ ಆತ. ಆದರೆ ಅಕ್ಕ ಹಾಗಲ್ಲ, ಹಿರಿಯರ ಕಟ್ಟುಪಾಡುಗಳಿಗೆ ತಾನು ಒಳಗಾಗಿದ್ದರೂ ಮುಂದಿನ ಪೀಳಿಗೆ ತನ್ನಂತೆ ಆಗಬಾರದು ಎಂಬ ಬಯಕೆ ಆಕೆಯದು. ಸಂದರ್ಭ ಒದಗಿಬಂದಲ್ಲಿ ಎಲ್ಲಾ ಕಟ್ಟುಪಾಡುಗಳನ್ನು ಕಿತ್ತೊಗೆದು ಮುನ್ನಡೆಯುವವರಿಗೆ ಪ್ರೋತ್ಸಾಹ ನೀಡುವಷ್ಟು ಪ್ರಗತಿಪರ ಆಕೆ. ಇನ್ನು ಆ ವಾಡೆಯ ಹಿರಿಸೊಸೆ, ದೇಶಮುಖರ ಹಿರಿಮಗನ ಹೆಂಡತಿ 'ಶಕ್ಕೂ' ಎಲ್ಲರಿಗೂ ಬೇಕಾದಾಕೆ, ಆ ಮನೆಯ ಎಲ್ಲಾ ಕೆಲಸಗಳ ಜವಾಬ್ದಾರಿ ಆಕೆಯದು. ಅದರಲ್ಲೇ ಆಕೆ ತೃಪ್ತಿ. ದೇಶಮುಖರ ಇದ್ದೊಬ್ಬ ಮಗಳು ಓದಬೇಕೆಂಬ ಅದಮ್ಯ ಹಂಬಲ ವಿದ್ದರೂ ತಂದೆಯ ಒತ್ತಾಯಕ್ಕೆ ಮಣಿದು ಮದುವೆಯಾಗಿ ಗಂಡನ ಮನೆ ಸೇರುತ್ತಾಳೆ.

ದೇಶಮುಖರ ಎರಡನೇ ಮಗ ನಾಣಿಗೆ ಮದುವೆಯಾಗುತ್ತದೆ. ಆದರೆ ಆತನ ಹೆಂಡತಿಯಾಗುವಾಕೆ ಅತ್ಯಾಚಾರಕ್ಕೊಳಗಾಗಿ ಗರ್ಬಿಣಿಯಾಗಿರುತ್ತಾಳೆ. ವಾಡೆಯ ಹೆಂಗಸರು ಇದನ್ನು ತಿಳಿದು ಗರ್ಭ ತೆಗೆಸುವ ಯೋಚನೆ ಮಾಡಿದರೂ ಆಕೆಯ ಮನಸ್ಸು ಅದಕ್ಕೊಪ್ಪುವುದಿಲ್ಲ. ಗಂಡನು ಆಕೆಗೆ ಸಹಕರಿಸುತ್ತಾನೆ. ವಾಡೆಯ ಯಜಮಾನನಿಂದ ವಿಷಯ ಮುಚ್ಚಿಟ್ಟು ಮಗುವನ್ನು ಉಳಿಸಿಕೊಳ್ಳಲು ನಿರ್ಧರಿಸುತ್ತಾರೆ. ಆದರೆ ಮಗುವಿಗೆ ಜನ್ಮ ನೀಡಿ ಆಕೆ ಅಸುನೀಗುತ್ತಾಳೆ. ಆಕೆಯ ತಂಗಿ 'ಶಾರಿ'ಯನ್ನು ಮದುವೆಯಾಗುವ ಅನಿವಾರ್ಯ ಸ್ಥಿತಿ ನಾಣಿಗೆ ಬಂದೊದಗುತ್ತದೆ.

ಜನರ ಕುಹಕ ಮಾತಿಗೆ ಬೇಸತ್ತ ದೇಶಮುಖರು ಎಲ್ಲರ ಮುಂದೆಯೂ ಎರಡನೆ ಮಗ ನಾಣಿ ಮತ್ತು ಶಾರಿಯ ಮದುವೆಯಾಗಲಿದೆ ಎಂದು ಸಾರುತ್ತಾನೆ. ಮಗನಿಗೆ ಮಾನ-ಮರ್ಯಾ[...]ಗಳ ಪ್ರಶ್ನೆಯನ್ನು ಮುಂದು ಮಾಡಿದಾಗ [...] ವಿಧಿಯಿಲ್ಲದೆ ಒಪ್ಪಿಕೊಳ್ಳುತ್ತಾನೆ. ಆದರೆ ಮೊ[...] ಸೊಸೆ 'ಶಕ್ಕು' ಇದನ್ನು ಪ್ರಶ್ನಿಸುತ್ತಾಳೆ. [...] ಮರ್ಯಾದೆಯನ್ನುಳಿಸಿಕೊಳ್ಳುವ ಸಲುವಾಗಿ [...] ಅಸ್ತಿತ್ವ, ಆಕೆಯ ಇಚ್ಚೆಗಳನ್ನು ಒತ್ತೆಯಿಡುವುದ[...] ಪ್ರತಿಭಟಿಸುತ್ತಾಳೆ. ನಾಣಿ - ಶಾರಿಯು '[...] ತ್ಯಾಗ'ಕ್ಕೆ ಬಲಿಯಾಗಿ ಮದುವೆಯಾಗುತ[...] ಸಹಮತವಿಲ್ಲದ ಮದುವೆಯಿಂದಾಗಿ ಇಬ್ಬ[...] ವಿರುದ್ಧ ದಿಕ್ಕಿಗೆ ಮುಖ ಮಾಡಿ ಕೂರುತ[...] ಅವರಿಬ್ಬರ ಸಹಬಾಳ್ವೆಗಾಗಿ ಹಿರಿ ಸೊಸೆ '[...] ಮಾಡುವ ಯತ್ನಗಳೆಲ್ಲಾ ವಿಫಲವಾಗುತ್ತವೆ. '[...] ಮೂಡಲ ಮನೆ' ಯ ಇದುವರೆಗಿನ ಕಥೆ.

ಇಲ್ಲಿಯ ಎಲ್ಲಾ ಪಾತ್ರಗಳು ನಿಜ ಜೀ[...] ತೀರಾ ಹತ್ತಿರವಾದವುಗಳು, ಯಾವು[...] ಉತ್ಪ್ರೇಕ್ಷೆಯದಲ್ಲ, ಎಲ್ಲವೂ ನೈಜ. ಇ[...] ಸಮಾಜದಲ್ಲಿ ಹೆಣ್ಣು ತನಗಾಗಿ, ತನ್ನ ಇಚ್ಛೆಯ[...] ಬಾಳಲಾಗದೆ ಇತರರ ನಿರ್ಧಾರಗಳಿಗೆ ತಲೆ[...] ತ್ಯಾಗಿಯಾಗಿ ಬಾಳಬೇಕಾದ ಸ್ಥಿತಿಯ[...] ಸಮರ್ಥವಾಗಿ ಮುಂದಿಟ್ಟಿವೆ ಈ ಧಾರವ[...] ಕೆಲವರಲ್ಲಿ ಹೆಣ್ಣಿಗೂ ಒಂದು ಅಸ್ತಿತ್ವವಿದೆ, [...] ಇಚ್ಛೆಗಳಿಗೂ ಬೆಲೆ ಕೊಡಬೇಕೆಂದೆನಿಸಿ[...] ನಿಜಕ್ಕೂ 'ಮೂಡಲ ಮನೆ' ಸಾರ್ಥಕವಾಗು[...] ಈ ಧಾರವಾಹಿಯಲ್ಲಿನ ಪ್ರತಿಯೊ[...] ಅಭಿನಯವು ನೋಡುಗನ ಮೇಲೆ [...] ಪರಿಣಾಮ ಬೀರುವಷ್ಟು ಪ್ರಭಾವಶಾಲಿಯಾ[...] ಇಂತಹದೊಂದು ಉತ್ತಮ ಅಭಿರುಚ[...] ಸತ್ವಶಾಲಿಯಾದ ಧಾರವಾಹಿಯನ್ನು [...] ವೈಶಾಲಿ ಕಾಸರವಳ್ಳಿ ಅಭಿನಂದನಾರ್ಹರು

- ರಾಮು[...]

'ಪ್ರೀತಿಯ ಮಾಸ್ತ್ರ' ನೆನಪು

ಪ್ರೀತಿಯ ಮಾಸ್ತ್ರ ಎಂದೇ ಚಿರಪರಿಚಿತರಾಗಿದ್ದ ಕಾಮ್ರೇಡ್ ಪಿ. ರಾಮಚಂದ್ರರಾವ್ ನಮ್ಮನ್ನಗಲಿ ಸೆಪ್ಟೆಂಬರ್ 18 ಕ್ಕೆ 5 ವರ್ಷಗಳು ಕಳೆಯಿತು. ಈ ಸಂದರ್ಭದಲ್ಲಿ ಅವರ ಜೀವನ ಹಾಗೂ ಕ್ರಾಂತಿಕಾರಿ ಹೆಜ್ಜೆಗಳನ್ನು ನೆನಪಿಸಿಕೊಳ್ಳುವ ಕಾರ್ಯಕ್ರಮವೊಂದು ಬೆಂಗಳೂರಿನಲ್ಲಿ ನಡೆಯಿತು. ಸಿ.ಪಿ.ಐ(ಎಂ)ನ ಯಶವಂತಪುರ ಶಾಖೆ ತನ್ನ ಕಚೇರಿಯಲ್ಲಿ ನಡೆಸಿದ ಈ ಕಾರ್ಯಕ್ರಮದಲ್ಲಿ ಸಿಪಿಐ(ಎಂ)ನ ರಾಜ್ಯ ಕಾರ್ಯದರ್ಶಿ ಜಿ.ಎನ್. ನಾಗರಾಜ್ ಮುಖ್ಯ ಅತಿಥಿಯಾಗಿ ಮಾತನಾಡುತ್ತಾ ಪಿ.ಆರ್. ರವರು ಬಾಲ್ಯದಿಂದ ನಡೆದು ಬಂದ ರೀತಿ ಅವರ ವಿದ್ಯಾಭ್ಯಾಸ, ಶಾಲೆಯ ಶಿಕ್ಷಕರಾಗಿದ್ದಾಗಲೇ ಸ್ವಾತಂತ್ರ್ಯ ಚಳುವಳಿಗೆ ದುಮುಕಿದ್ದು ಹೀಗೆ ಎಳೆಎಳೆಯಾಗಿ ಅವರ ಹೋರಾಟದ ಬದುಕಿನ ಬಗ್ಗೆ ವಿವರಿಸುತ್ತಾ ಹೋದರು.



ಪಿ.ಆರ್. ರವರು ಶಾಲೆಯ ಶಿಕ್ಷಕರಾಗಿ ಸೇರಿಕೊಂಡ ಸಂದರ್ಭದಲ್ಲಿ ಸ್ವಾತಂತ್ರ್ಯ ಚಳುವಳಿ ನಡೆಯುತ್ತಿತ್ತು. ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸುವುದರ ಜೊತೆ ಜೊತೆಗೆ ಬೀಡಿ ಕಾರ್ಮಿಕರ ಬಗ್ಗೆ, ಅವರ ಜೀವನದ ಬಗ್ಗೆ ಅಧ್ಯಯನ ನಡೆಸಿ ಅವರನ್ನು ಸಂಘಟಿಸಿದರು. ಹೆಂಚು ಕಾರ್ಮಿಕರನ್ನು ಸಂಘಟಿಸಿದರು. 1952 ರಲ್ಲಿ ಭಾರತ ಕಮ್ಯುನಿಸ್ಟ್ ಪಕ್ಷದ ಸದಸ್ಯರಾದರು. ಈ ಎಲ್ಲಾ ಕೆಲಸದ ನಡುವೆಯೂ ಶಿಕ್ಷಕ ವೃತ್ತಿಯನ್ನು ಮುಂದುವರಿಸಿದರು. ಬಿಡುವಿನ ವೇಳೆಯಲ್ಲಿ ಮತ್ತು ರಾತ್ರಿ ವೇಳೆಯಲ್ಲಿ ಕಾರ್ಮಿಕರ ಸಭೆ ನಡೆಸಿ ಕಮ್ಯುನಿಸ್ಟ್ ಚಳುವಳಿಯ ಬಗ್ಗೆ ತಿಳಿಸುತ್ತಾ ಮಾರ್ಕ್ಸ್‌ವಾದದ ಬಗ್ಗೆ ಸಾಮಾನ್ಯ ಜನರಿಗೂ ಅರ್ಥವಾಗುವಂತೆ ವಿವರಿಸುತ್ತಿದ್ದರು. ಈ ಮಧ್ಯೆ ಕಮ್ಯುನಿಸ್ಟ್ ಚಲುವಳಿಯಲ್ಲಿ ಪಿ.ಆರ್. ಭಾಗಿಯಾಗಿರುವುದನ್ನು ತಿಳಿದ ಅವರು ಕೆಲಸ ಮಾಡುತ್ತಿದ್ದ ಕ್ರಿಶ್ಚಿಯನ್ ಶಾಲೆಯ ಆಡಳಿತ ಮಂಡಳಿ ಪಿ.ಆರ್.ರನ್ನು ಕೆಲಸದಿಂದ ತೆಗೆದುಹಾಕಲು ತೀರ್ಮಾನಿಸಿದರೂ, ಗಣಿತ ಮತ್ತು ವಿಜ್ಞಾನ ವಿಷಯಗಳ ಬೋದನೆಗಾಗಿ ಬೇರೆ ಯಾರೂ ಇಲ್ಲದ್ದರಿಂದ ಅವರ ಸಹ ಶಿಕ್ಷಕರು ಅವರನ್ನು ಹಾಗೆಯೇ ಉಳಿಸಿಕೊಂಡ ಸ್ವಾರಸ್ಯಕರ ಘಟನೆಯನ್ನು ಜಿ.ಎನ್.ರವರು ವಿವರಿಸಿದರು.

ವಿದ್ಯಾರ್ಥಿಗಳ ಜೊತೆ ಆತ್ಮೀಯವಾಗಿ ಸ್ಪಂದಿಸುತ್ತಿದ್ದರೂ ಗಣಿತದ ಬಗ್ಗೆ ಸಂಶೋಧನೆ ಕೂಡ ಮಾಡಿದ್ದರು. ಅವರು ವಿದ್ಯಾರ್ಥಿಗಳಿಗೆ ಅರ್ಥವಾಗುವ ರೀತಿಯಲ್ಲಿ ಉದಾಹರಣೆಗಳ ಸಹಿತ ವಿವರಣೆ ಕೊಡುತ್ತಿದ್ದರು. ಮಾರ್ಕ್ಸ್‌ವಾದದ ಅಧ್ಯಯನದಲ್ಲಿ ಸಾಕಷ್ಟು ನಿಪುಣರಾಗಿದ್ದರು. ಇದನ್ನು ಗಮನಿಸಿದ ಪಕ್ಷ ಪೂರ್ಣಕಾಲದ ಕಾರ್ಯಕರ್ತರಾಗಿ ಕೆಲಸ ಮಾಡಲು ಸೂಚಿಸಿದಾಗ ಸಂತೋಷದಿಂದಲೇ ಒಪ್ಪಿಕೊಂಡರು. ಮನೆಯವರಿಗೂ ಈ ವಿಷಯ ತಿಳಿಸಲಿಲ್ಲ.

ಭಾರತ ಕಮ್ಯುನಿಸ್ಟ್ ವಿಭಜನೆ ಸಂದರ್ಭದಲ್ಲಿ ದೃಢವಾದ ನಿಲುವು ತಾಳಿದ ಪಿ.ಆರ್. ಸಿ.ಪಿ.ಐ(ಎಂ) ಪಕ್ಷದ ಜೊತೆ ತಮ್ಮನ್ನು ಗುರುತಿಸಿಕೊಂಡರು. ಚೀನಾ ಯುದ್ಧದ ಸಂದರ್ಭದಲ್ಲಿ ಕಮ್ಯುನಿಸ್ಟರು ದೇಶ ದ್ರೋಹಿಗಳು ಎಂಬ ಆರೋಪ ಹೊರಿಸಿ ಇವರನ್ನು ಜೈಲಿಗೆ ಹಾಕಿದ್ದರು. ಆ ಸಂದರ್ಭದಲ್ಲಿ ಪಿ.ಆರ್.ರವರ ಹೆಂಡತಿ ನಿರ್ದಿಷ್ಟ ದಿನಾಂಕವೊಂದನ್ನು ತಿಳಿಸಿ ಅಷ್ಟರೊಳಗೆ ಮನೆಗೆ ಬರದಿದ್ದರೆ ಬಾವಿಗೆ ಹಾರಿ ಆತ್ಮಹತ್ಯೆ ಮಾಡಿಕೊಳ್ಳುತ್ತೇನೆ ಎಂದು ಬರೆದ ಪತ್ರಕ್ಕೆ ಉತ್ತರವಾಗಿ ನಿನ್ನನ್ನು ಪ್ರೀತಿಸಿದಷ್ಟೇ ದೇಶವನ್ನು ಕೂಡ ಪ್ರೀತಿಸುತ್ತೇನೆ ಎಂದು ಬರೆದು ಹೆಂಡತಿಯನ್ನು ಸಮಾಧಾನಗೊಳಿಸಿದ[...] ಹೆಂಡತಿಯು ಪತ್ರಕ್ಕೆ ದೃತಿಗೆಡಲಿಲ್ಲ [...] ಬಂದನದಿಂದ ಮುಕ್ತವಾಗಲು ಮುಚ್ಚಳಿಕೆ [...] ಕೊಡಲಿಲ್ಲ.

ಅವರು ತ್ಯಾಗದ ಜೀವನ ನಡೆಸಿದ[...] ಮಂಗಳೂರಿನಲ್ಲಿ ಅವರ ಅಂತಿಮ ದರ್ಶನ[...] ಸಾವಿರಾರು ಜನರು ಸಾಲುಗಟ್ಟಿ ನಿಂತಿ[...] ಕಾಂ. ಪಿ. ಆರ್. ಕಾರ್ಮಿಕ ಸಂಘಗಳಲ್ಲಿ[...] ಕೂಲಿಕಾರರ ಸಂಘದಲ್ಲಿ, ರೈತ ಸಂಘದಲ್ಲಿ [...] ಮಾಡಿದ್ದರು. ಪಕ್ಷದ ಮಂಗಳೂರು [...] ಕಾರ್ಯದರ್ಶಿಯಾಗಿ, ರಾಜ್ಯ ಕಾರ್ಯ[...]ಯಾಗಿ, ಶಾಸಕರಾಗಿ ಜನಪ್ರಿಯರಾಗಿ[...] ಎಂದು ಹೇಳಿದ ಜಿ.ಎನ್. ರವರು ಕೇಂದ್ರ [...] ರಾಜ್ಯ ಸರ್ಕಾರಗಳ ಜಾಗತೀಕ[...] ಉದಾರೀಕರಣ, ಖಾಸಗೀಕರಣ ನೀತಿ[...] ಹಿಮ್ಮೆಟ್ಟಿಸುವ ಶಕ್ತಿ, ಕರ್ನಾಟಕದ ರಾಜ[...] ಬದಲಾವಣೆ ಮಾಡುವ ಶಕ್ತಿ ಕಾರ್ಮಿಕ [...] ಇದೆ, ಇಂಥ ಸಂದರ್ಭದಲ್ಲಿ ಪಿ.ಆರ್. [...] ಅತಿಮುಖ್ಯ, ಅವರು ಬಿಟ್ಟು ಹೋದ[...] ಕೆಲಸವನ್ನು ಪೂರ್ಣಗೊಳಿಸುವುದೇ ನಿಜ[...] ಸ್ಮರಣೆ ಎಂದರು.

ಡಾ। ಪ್ರಕಾಶ್ ಸಿ. ರಾವ್, ಸಿಪಿಐ([...] ರಾಜ್ಯ ಸಮಿತಿ ಸದಸ್ಯರಾದ ಮೀನಾಕ್ಷಿ ಸುಂ[...] ಲೀಲಾವತಿ, ಮೋಹನ್, ಸುಬ್ಬ[...] ಮುಂತಾದವರು ಮಾತನಾಡಿ ಪಿ.ಆರ್. ರ[...] ಸ್ಮರಿಸಿದರು. ಗೋಪಿನಾಥ್ ಪೈ ವಂದನಾ[...] ಮಾಡಿದರು.

PRB DECR 319-79/79 AIKYARANGA WEEKLY Reg. No. 17015/64 CPM(G)/KA/BGS-119/2003-05

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಜಿ.ಎನ್.ನಾಗರಾಜ್
ಸಂಪಾದಕರು: ಎಸ್.ವೈ.ಗುರುಶಾಂತ್ ಸಂಪಾದಕೀಯ ಕಛೇರಿ: ನಂ.12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462,
ಮುದ್ರಣ: ಹನಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು.

Printed & Published by Communist Party of India(Marxist), Karnataka State Committee. Editor : S.Y.GURUSHANTH